
# ಯುಗರಶ್ಮಿ

- ಶಾಂತಿ ಸ್ಥಾಪನೆ ಇಸ್ಲಾಮಿನ ಲಕ್ಷ್ಯ
- ಪ್ರೊಫೆಸರ್ ಅಬ್ದುಸ್ಸಲಾಮ್
- ಯೇಸು ಭಾರತಕ್ಕೆ ಬಂದದ್ದು ಯಾವಾಗ?
- 'ಸನ್ಮಾರ್ಗ'ಕ್ಕೆ ಒಂದು ಉತ್ತರ
- ಕಅಬದಲ್ಲಿ ದುರ್ಘಟನೆ
- ಇಸ್ಲಾಂ ಮತ ತತ್ತ್ವಜ್ಞಾನ



ನೋಬೆಲ್ ಪ್ರಶಸ್ತಿ ವಿಜೇತ ಪ್ರೊ। ಸಲಾ

ತ್ರೈಮಾಸಿಕ
ಡಿಸೆಂಬರ್ 1979
ಫತಹ್ 1358
ಬೆಲೆ: ರೂ. 1-00

ಯಾರು ಸತ್ಕರ್ಮದಲ್ಲಿ ಸಹಕರಿಸುತ್ತಾನೋ, ಅವನಿಗೆ ಅದರಲ್ಲಿ ಒಂದು ಪಾಲಿದೆ; ಯಾರು ದುಷ್ಕರ್ಮದಲ್ಲಿ ಸಹಕರಿಸುತ್ತಾನೋ, ಅವನಿಗೂ ಅದರಲ್ಲಿ ಒಂದು ಪಾಲಿದೆ.

—ಪವಿತ್ರ ಖುರ್‌ಆನ್ (4:86)

# ಯುಗರಶ್ಮಿ

**ತ್ರೈಮಾಸಿಕ**

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು - 575 001.

ಸಂಪುಟ: 5 ಡಿಸೆಂಬರ್ 1979 / ಫತಹ್ 1358 ಸಂಚಿಕೆ: 3

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:** ಪುಟ


* ಯಥಾರ್ಥ ಆನಂದವೆಲ್ಲಿದೆ? ... 1
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2
* ಪ್ರಪಂಚದಲ್ಲಿ ಶಾಂತಮಯ ಪರಿಸ್ಥಿತಿಯನ್ನು ಸ್ಥಾಪಿಸುವುದೇ ಇಸ್ಲಾಮ್ ಧರ್ಮದ ಲಕ್ಷ್ಯ ... 3
* ನೋಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ ಪ್ರೊಫೆಸರ್ ಅಬ್ದುಸ್ಸಲಾಮ್ ... 5
* ಡಾ। ಅಬ್ದುಸ್ಸಲಾಮರಿಗೆ ನೋಬೆಲ್ ಪಾರಿತೋಷಕ ... 9
* ಪ್ರೊ। ಅಬ್ದುಸ್ಸಲಾಮರಿಗೆ ಶುಭಾಶಂಸನೆಗಳು ... 10
* ಯೇಸು ಭಾರತಕ್ಕೆ ಬಂದದ್ದು ಯಾವಾಗ? ... 12
* 'ಸನ್ಮಾರ್ಗ'ಕ್ಕೆ ಒಂದು ಉತ್ತರ ... 14
* ಪವಿತ್ರ ಕಅಬ ಮಸೀದಿಯಲ್ಲಿ ಸಂಭವಿಸಿದ ಘಟನೆ ಅತ್ಯಧಿಕ ವ್ಯಸನಕರವಾಗಿದೆ ... 21
* ಪ್ರಶ್ನೋತ್ತರ ... 22
* ಹಝ್ರತ್ ಈಸಾನಬಿ ಮರಣ ಹೊಂದಿರುವರು ... 23
* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು ... 24
* ಕಅಬ ಆಕ್ರಮಣ ... 28
* ಪುಸ್ತಕ ವಿಭಾಗ–ಇಸ್ಲಾಂ ಮತ ತತ್ವಜ್ಞಾನ

بسم الله الرحمن الرحيم

نحمده ونصلي على رسوله الكريم

# ಯುಗ ರ ಶ್ಮಿ


| ಸಂಪುಟ: 5 | ಅಕ್ಟೋಬರ್–ಡಿಸೆಂಬರ್ 1979 / ಇಖಾ–ಫತಹ್ 1358 | ಸಂಚಿಕೆ: 3 |
|---|---|---|


## ಯಥಾರ್ಥ ಆನಂದವೆಲ್ಲಿದೆ ?

"ಲೌಕಿಕ ಸುಖವನ್ನು ಇಚ್ಛಿಸುವವನೂ ಅತ್ಯಾಶೆಯ ಮತ್ತು ಅಸೂಯೆಯ ಆರಾಧಕನೂ ವೈಭವದ ರಮ್ಯ ಅರಮನೆಯಲ್ಲಿ ಪಡೆಯಲಸಾಧ್ಯವಾದ ನೈಜ ಆನಂದವನ್ನು ಸಾತ್ವಿಕನಾದ ಓರ್ವನು ಒಂದು ಗುಡಿಸಲಿನಲ್ಲಿ ಅನುಭವಿಸಬಹುದು. ಈ ಲೋಕದ ವೈಭವಗಳನ್ನು ಮನುಷ್ಯನು ಎಷ್ಟರ ಮಟ್ಟಿಗೆ ಸ್ವಾಯತ್ತ ಮಾಡುವನೋ ಅಷ್ಟರಮಟ್ಟಿಗೆ ಪರೀಕ್ಷಣೆಗಳನ್ನೂ ಕಷ್ಟಗಳನ್ನೂ ಅವನು ಎದುರಿಸಬೇಕಾದೀತು. ಒಟ್ಟಿನಲ್ಲಿ, ನಿಜವಾದ ಮನಶ್ಶಾಂತಿಯೂ ಸುಖಸಂತೃಪ್ತಿಯೂ ಭೌತಿಕ ಸುಖಕಾಂಕ್ಷಿಗಳಿಗೆ ಲಭಿಸಲಾರದೆಂದು ನೆನಪಿಡಿರಿ. ಸಂಪತ್ತಿನ ಹೇರಳವಾಗಲಿ, ಆಹಾರ ಸಮೃದ್ಧಿಯಾಗಲಿ, ವಸ್ತ್ರವಿಭೂಷಣಗಳ ಹೆಗ್ಗಳಿಕೆಯಾಗಲಿ ನೈಜ ಮನಸ್ಸಂತೋಷವನ್ನು ನೀಡುವುದೆಂದು ಒಮ್ಮೆಯೂ ಭಾವಿಸಬೇಡಿರಿ. ಇಲ್ಲ; ಎಂದಿಗೂ ಅದು ಸಂಭಾವ್ಯವಲ್ಲ. ಯಥಾರ್ಥ ಆನಂದದ ಉದ್ಭವಸ್ಥಾನ ಸಾತ್ವಿಕತೆಯಾಗಿದೆ. (ಮಲ್‌ಫೂಝಾತ್)

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಗೆಳೆತನದಲ್ಲಿ ಮಿತಿಯಿರಲಿ; ಒಂದು ದಿನ ನಿನ್ನ ಮಿತ್ರ ನಿನ್ನ ಶತ್ರುವಾಗಬಹುದು. ಹಾಗೆಯೇ ವೈರದಲ್ಲಿ ಸಂಯಮವಿರಲಿ; ಒಂದು ದಿನ ಶತ್ರು ನಿನ್ನ ಮಿತ್ರನಾಗಬಹುದು.

2. ಮೂರ್ಖನ ಸಹವಾಸದಿಂದ ದೂರವಿರು.

3. ದುಷ್ಟ ಒಡನಾಟ ದ್ರವ್ಯಲೋಭ, ಬಂಡುತನ ಮತ್ತು ದುರ್ವರ್ತನೆಯನ್ನು ಬೆಳೆಯಗೊಡುತ್ತದೆ.

4. ದುಷ್ಟನ ಸ್ನೇಹವನ್ನು ಬೆಳೆಸಬೇಡಿರಿ. ಒಡನಾಡಿಯನ್ನು ನೋಡಿ ನಿಮ್ಮನ್ನು ಅಳೆಯುವರು.

5. ಒಳ್ಳೆಯ ಸಂಗಾತಿ ಪರಿಮಳದ್ರವ್ಯ ಮಾರಾಟಗಾರನಂತೆ. ಪರಿಮಳದ್ರವ್ಯವನ್ನು ಅವನು ಕೊಡದಿದ್ದರೂ ನಿಮಗೆ ಸುಗಂಧವನ್ನು ಆಸ್ವಾದಿಸಲು ಸಾಧ್ಯ.

6. ಒಬ್ಬನ ಮಾತಿನ ಬೆಡಗು ಆತನ ಆಕರ್ಷಣೆಯ ಅಂಶವಾಗಿದೆ.

7. ಸೌಮ್ಯ ಸ್ವಭಾವ, ಹೃದ್ಯ ನಡತೆ, ಮಿತ ವರ್ತನೆ–ಇವು ಪ್ರವಾದಿಯ ಗುಣಗಳಲ್ಲಿ ಸೇರಿದ್ದಾಗಿವೆ.

8. ಪರಿಮಳವಿರುವ ಒಂದು ಒಣಹುಲ್ಲನ್ನಾಗಲಿ ಯಾರಾದರೂ ಉಡುಗೊರೆಯಾಗಿತ್ತರೆ ತಿರಸ್ಕರಿಸಬೇಡಿರಿ. ಅದು ನೀಡಿದವನಿಗಾಗಲಿ ಪಡೆದವನಿಗಾಗಲಿ ತೊಂದರೆ ಮಾಡುವುದಿಲ್ಲ, ಅದಕ್ಕೆ ಸುವಾಸನೆಯೂ ಇದೆಯಷ್ಟೇ.

9. ಆಮಂತ್ರಣವನ್ನು ಸ್ವೀಕರಿಸಿರಿ. ಪಾರಿತೋಷಕಗಳನ್ನು ತಿರಸ್ಕರಿಸಬೇಡಿರಿ. ನಿಮ್ಮ ಸಹೋದರರನ್ನು ಕೀಳಾಗಿ ಕಾಣಬೇಡಿರಿ.

10. ಕೊಟ್ಟ ಉಡುಗೊರೆಯನ್ನು ಕೇಳಿ ವಾಪಾಸು ಪಡೆಯುವುದು ತನ್ನ ವಾಂತಿಯನ್ನು ತಾನೇ ನೆಕ್ಕಿ ತಿಂದಂತೆ.

**(ಸರ್ ಮುಹಮ್ಮದ್ ಝಫರುಲ್ಲಾ ಖಾನರ Wisdom of the Holy Prophet Muhammad ಎಂಬ ಪುಸ್ತಕದಿಂದ ಆಯ್ದುದು)**


**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ.

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ.

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore–575 001.

# ಪ್ರಪಂಚದಲ್ಲಿ ಶಾಂತಮಯ ಪರಿಸ್ಥಿತಿಯನ್ನು ಸ್ಥಾಪಿಸುವುದೇ ಇಸ್ಲಾಮ್ ಧರ್ಮದ ಲಕ್ಷ್ಯ

**ಹಜ್ರತ್ ಮಿರ್ಜಾ ನಾಸಿರ್ ಅಹ್ಮದ್ ಸಾಹೇಬ್, ಖಲೀಫತುಲ್ ಮಸೀಹ್ III ಅವರು 18—5—79ನೇ ಶುಕ್ರವಾರ ನೀಡಿದ ಖುತ್ಬಾ ಸಂದೇಶ.**

"ಇಸ್ಲಾಮ್" ಎಂದರೆ ಶಾಂತಿ ಮತ್ತು ಸಮಾಧಾನ ಎಂದು ಅರ್ಥ. ಮನುಷ್ಯರಲ್ಲಿ ಶಾಂತಿ ಮತ್ತು ಸಮಾಧಾನದ ಪರಿಸ್ಥಿತಿಯನ್ನು ಉಂಟು ಮಾಡುವುದಕ್ಕಾಗಿಯೇ ಇಸ್ಲಾಮ್ ಧರ್ಮ ಸ್ಥಾಪಿತವಾಯಿತು. ಈ ಉದ್ದೇಶಕ್ಕಾಗಿ ಪೈಗಂಬರ್ ಮುಹಮ್ಮದ್ (ದೇವರ ಇಷ್ಟಾಶೀರ್ವಾದ ಅವರ ಮೇಲೆ ಸುರಿಯಲಿ) ಅವರನ್ನು ಲೋಕಕ್ಕೆ ಮಹತ್ತಾದ ಮಾದರಿಯಾಗುವಂತೆ ದೇವರು ನಿಯೋಗಿಸಿದನು. ಈ ಉದ್ದೇಶಕ್ಕಾಗಿ ಪ್ರಥಮವಾಗಿ ಪೈಗಂಬರರ ಅನುಯಾಯಿಗಳಲ್ಲಿ ಶಾಂತಿ ಮತ್ತು ಸಮಾಧಾನ ನೆಲೆಗೊಳ್ಳುವಂತೆ ಮಾಡಿ ಅವರು ಎಲ್ಲಾ ಮನುಷ್ಯ ವರ್ಗಕ್ಕೆ ಮಾದರಿಯಾಗುವಂತೆ ದೇವರು ಮಾಡಿದನು. ಎಲ್ಲಾ ಜನರು ಪರಸ್ಪರ ಸ್ನೇಹ ಮತ್ತು ಪ್ರೇಮದಿಂದ ಜೀವಿಸುವಂತೆ ಇಸ್ಲಾಮ್ ಆಜ್ಞಾಪಿಸುತ್ತದೆ. ಎಲ್ಲಾ ವಿಧದ ಜಗಳ ಮತ್ತು ಸಂಘರ್ಷವನ್ನು ಮುಗಿಸುವಂತೆ, ಜೀವಿತದ ಕಹಿಯನ್ನು ಹೋಗಲಾಡಿಸುವಂತೆ, ಶಾಂತಿ, ಭ್ರಾತೃತ್ವ ಮತ್ತು ಸ್ನೇಹದ ವಾತಾವರಣ ಉಂಟು ಮಾಡುವಂತೆ ಇಸ್ಲಾಮ್ ಆಜ್ಞಾಪಿಸುತ್ತದೆ.

ಎಲ್ಲಾ ವಿಧ ಜಗಳಗಳನ್ನು ಮುಗಿತಾಯಗೊಳಿಸುವಂತೆ ಇಸ್ಲಾಂ ಆಜ್ಞಾಪಿಸಿದೆ. ಇಸ್ಲಾಮ್ ನೀಡಿರುವ ಉಪದೇಶಗಳನ್ನು ಪಾಲಿಸಿದರೆ ಯಾವುದೇ ಜಗಳ ಉಂಟಾಗುವುದು ಅಥವಾ ಪರಿಹಾರಗೊಳ್ಳದೆ ಬಾಕಿಯಾಗುವುದು ಅಸಾಧ್ಯ.

ನಮ್ಮೊಳಗೆ ಪರಸ್ಪರ ಅನೇಕ ವಿಧದ ಸಂಬಂಧಗಳಿವೆ. ಪತಿ ಪತ್ನಿಯರ ಸಂಬಂಧ, ತಂದೆ ತಾಯಿಯರ ಸಂಬಂಧ, ಸಹೋದರ ಸಹೋದರಿಯರ ಸಂಬಂಧ, ಸಹೋದರಿಯರ ಸಂಬಂಧ, ಸಹೋದರರ ಸಂಬಂಧ, ಒಂದೇ ರಾಷ್ಟ್ರದ ಪೌರರ ಪರಸ್ಪರ ಸಂಬಂಧ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳು, ಇವು ಕೆಲವು ಉದಾಹರಣೆಗಳಾಗಿವೆ. ಜೀವನದ ಪ್ರತಿಯೊಂದು ವಿಭಾಗದ ಕುರಿತು ಇಸ್ಲಾಮಿನ ಉಪದೇಶ ಒಂದೇ ಆಗಿದೆ: ಜಗಳ ಮಾಡಬೇಡಿರಿ. ಸಂಘರ್ಷದ ಪರಿಸ್ಥಿತಿಯನ್ನು ಉಂಟು ಮಾಡಬೇಡಿರಿ. ಪ್ರತಿಯೊಂದು ಸಮಸ್ಯೆಯನ್ನು ಸ್ನೇಹ ಮತ್ತು ಪ್ರೇಮದಿಂದ ಪರಿಹರಿಸಿರಿ. ಆದರೆ ಕೇವಲ ಉಪದೇಶ ಮತ್ತು ತತ್ವಸಿದ್ಧಾಂತಕ್ಕೆ ಮಾತ್ರ ಇಸ್ಲಾಮ್ ಧರ್ಮ ಸೀಮಿತಗೊಂಡಿಲ್ಲ. ಇಸ್ಲಾಮ್ ಧರ್ಮ ನಮ್ಮ ವ್ಯಾವಹಾರಿಕ ಜೀವಿತದಲ್ಲಿ ಮಾರ್ಪಾಟು ಉಂಟು ಮಾಡಿ ಮುಸಲ್ಮಾನರಾದ ನಮ್ಮ ಜೀವಿತದಲ್ಲಿ ಶಾಂತಿಯನ್ನು ನೆಲೆಸುವಂತೆ ಮಾಡುತ್ತದೆ. ಇಸ್ಲಾಮ್ ನೀಡಿರುವ ಪ್ರತಿಯೊಂದು ಆಜ್ಞೆಯೂ ಶಾಂತಿಯನ್ನು ನೆಲೆಗೊಳಿಸುತ್ತದೆ. ಅದು ಸಮಾಧಾನವನ್ನು ಸ್ಥಾಪಿಸುತ್ತದೆ. ಅದು ಜಗಳಗಳನ್ನು ದೂರೀಕರಿಸುತ್ತದೆ. ಅದು ಗೊಂದಲವನ್ನು ನಾಶಗೊಳಿಸುತ್ತದೆ.

ಇದರ ವಿವರಣೆ ಬಹಳ ದೀರ್ಘವಾದದ್ದೂ ಸವಿಸ್ತಾರವಾದದ್ದೂ ಆಗಿದೆ. ಇಸ್ಲಾಮಿನ ಪ್ರತಿಯೊಂದು ಆಜ್ಞೆ ಸಂಘರ್ಷವನ್ನು ದೂರೀಕರಿಸುತ್ತದೆ. ಮತ್ತು ಪ್ರೇಮವನ್ನು ನೆಲೆಗೊಳಿಸುತ್ತದೆ. ನಾವು ಈ ಆಜ್ಞೆಗಳ ಕುರಿತು ಗಾಢವಾಗಿ ಚಿಂತಿಸಿ ಅರ್ಥ ಮಾಡಿದರೆ ಇವುಗಳಲ್ಲಿ ಅಡಕವಾಗಿರುವ ಸುಂದರ, ಅತ್ಯುತ್ತಮ, ಮತ್ತು ಪ್ರಕಾಶಮಾನವಾದ ಉಪದೇಶ ನಮ್ಮ ಮುಂದೆ ಪ್ರತ್ಯಕ್ಷವಾಗುತ್ತದೆ.

ನಾನು ಈ ದಿನ ಬಹಳ ಸಂಕ್ಷಿಪ್ತ ಪ್ರವಚನ ನೀಡಲು ಉದ್ದೇಶಿಸಿದ್ದೇನೆ. ನಾನು ಈ ಮೂಲಭೂತವಾದ ತತ್ವವನ್ನು ನನ್ನ ಮುಂದೆ ಕುಳಿತಿರುವ ನಿಮಗೆ ಮತ್ತು ನಿಮ್ಮ ಮೂಲಕ ನಮ್ಮ ಸಂಘಟನೆಯ ಎಲ್ಲಾ ಸದಸ್ಯರಿಗೆ ಮನಗಾಣಿಸಲು ಇಚ್ಛಿಸುತ್ತೇನೆ: ಇಸ್ಲಾಮ್ ಎಲ್ಲಾ ಜಗಳಗಳನ್ನು ವ್ಯಾವಹಾರಿಕ ಜೀವನದಿಂದ ಹೋಗ

ಲಾಡಿಸಿದೆ. ಇಸ್ಲಾಮ್ ಧರ್ಮದ ಎಲ್ಲಾ ಉಪದೇಶಗಳು ತಂಟೆ ತಕರಾರುಗಳನ್ನು ನಿರ್ಮೂಲಗೊಳಿಸುತ್ತವೆ. "ಈ ಉಪದೇಶಗಳನ್ನು ಅನುಸರಿಸಿ ಎಲ್ಲಾ ವಿಧದ ಜಗಳಗಳನ್ನು ಮುಗಿತಾಯಗೊಳಿಸಿರಿ" ಎಂಬುದೇ ಇಸ್ಲಾಮಿನ ಆಜ್ಞೆಯಾಗಿದೆ.

ಅಹ್ಮದಿಯಾ ಸಂಘಟನೆಯ ಪ್ರತಿಯೊಬ್ಬ ವ್ಯಕ್ತಿ ಇಸ್ಲಾಮ್ ಧರ್ಮದ ಪ್ರತಿಯೊಂದು ಆಜ್ಞೆಯನ್ನು ಅನುಸರಿಸಿ ನಡೆಯುವುದು ಅತ್ಯಾವಶ್ಯಕವಾಗಿದೆ. ಈ ರೀತಿ ಎಲ್ಲಾ ವಿಧದ ಕಹಿ ವಾತಾವರಣವನ್ನು ತಮ್ಮ ಜೀವಿತದಿಂದಲೂ ತಮ್ಮ ಪರಿಸರದಿಂದಲೂ ನಿವಾರಿಸಲೆತ್ನಿಸಬೇಕಾಗಿದೆ. ದೇವರು ನನಗೆ ಸಂದರ್ಭವಿತ್ತರೆ ನಾನು ದೇವರಿಚ್ಛೆಗನುಸಾರವಾಗಿ ಈ ಉಪದೇಶಗಳ ಸವಿಸ್ತಾರವಾದ ವಿವರಣೆಯನ್ನು ಕ್ರಮೇಣ ನಮ್ಮ ಸಂಘಟನೆಯ ಮುಂದಿರಿಸುವೆನು. ವಿವಿಧ ಸಂಬಂಧಗಳನ್ನು ಯಾವ ರೀತಿ ನಿರ್ವಹಿಸಬೇಕೆಂಬುದರ ಕುರಿತು ಇಸ್ಲಾಮಿನ ಉಪದೇಶಗಳನ್ನು ನಾನು ನನ್ನ ಮುಂದಿನ ಪ್ರವಚನಗಳಲ್ಲಿ ವಿವರಿಸುವೆನು. ನಾವೆಲ್ಲರೂ ಇಸ್ಲಾಮಿನ ಸುಂಗರ ಮತ್ತು ಶಾಂತಿದಾಯಕ ಉಪದೇಶಗಳ ಯಥಾರ್ಥಅ ನುಯಾಯಿಗಳಾಗಿಯೂ ಅವುಗಳನ್ನನುಸರಿಸಿ ನಡೆದು ಇತರರಿಗೆ ಮಾರ್ಗದರ್ಶಕರಾಗಿ ಎಲ್ಲಾ ವಿಧದ ಕಹಿ ವಾತಾವರಣವನ್ನು ನಿವಾರಿಸುವಂತವರಾಗುವಂತೆ ದೇವರು ನಮಗೆ ಅನುಗ್ರಹಿಸಲಿ.

(ಕನ್ನಡಕ್ಕೆ : **M. U.** ರಶೀದ್)


# ಬೇಕಾಗಿದ್ದಾರೆ

**ಕಡಿಮೆಪಕ್ಷ ಐದು ವರ್ಷಗಳ ಅನುಭವವುಳ್ಳ ಕಾರ್ಪೆಂಟರುಗಳು (ಬಡಗಿಗಳು) ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.**

ಖುದ್ದಾಗಿ ಈ ಕೆಳಗಿನ ವಿಳಾಸಕ್ಕೆ ಭೇಟಿಕೊಡಿರಿ:

## ಸೂಪರ್ ಫರ್ನಿಚರ್

**ಸ್ಟೇಷನ್ ರೋಡ್,**

**ವರಂಗಲ್-2 (ಆಂಧ್ರ ಪ್ರದೇಶ್).**

**ದೂರವಾಣಿ: 3414**

## ನೋಬೆಲ್ ಪ್ರಶಸ್ತಿ ವಿಜೇತ

# ✦ ಪ್ರೊಫೆಸರ್ ಅಬ್ದುಸ್ಸಲಾಮ್ ✦

## ಜಾಜ್ವಲ್ಯಮಾನ ಪ್ರಶಸ್ತಿಗಳ ದಾಖಲೆ

★ **ಕೆ. ಕೆ. ಕಟ್ಯಾಲ್**

ಕೃಪೆ: "ದಿ ಹಿಂದೂ", ನವೆಂಬರ್ 4, 1979.

**ನೋಬೆಲ್ ಪ್ರಶಸ್ತಿ ವಿಜೇತ ಪ್ರಥಮ ಮುಸ್ಲಿಂ ವಿಜ್ಞಾನಿ ಪ್ರೊ. ಅಬ್ದುಸ್ಸಲಾಮರು ಅಹ್ಮದಿಯಾ ಮುಸ್ಲಿಂ ಸಂಘಟನೆಗೆ ಸೇರಿದವರಾಗಿದ್ದಾರೆ. 1961 ರಿಂದ ಅವರು ಪಾಕಿಸ್ತಾನದ ಅಧ್ಯಕ್ಷರ ಪ್ರಧಾನ ವೈಜ್ಞಾನಿಕ ಸಲಹೆಗಾರರೂ ಆಗಿದ್ದರು. ಆದರೆ 1974ರಲ್ಲಿ ಅಹ್ಮದಿಯರಿಗೆದುರಾಗಿ ಪೈಶಾಚಿಕ ಕ್ರೂರಮರ್ದನ ನಡೆದು, ಕಡೆಗೆ ಅಹ್ಮದಿಯರನ್ನು ಭುಟ್ಟೋ ಸರಕಾರ ಮುಸ್ಲಿಮೇತರ ಅಲ್ಪಸಂಖ್ಯಾತರೆಂದು ಘೋಷಿಸಿದಾಗ ಅದನ್ನು ಪ್ರತಿಭಟಿಸಿ ಪ್ರೊ. ಅಬ್ದುಸ್ಸಲಾಮ್ ತನ್ನ ಸರಕಾರಿ ಹುದ್ದೆಗೆ ರಾಜಿನಾಮೆಯಿತ್ತರು. ರಾಜಿನಾಮೆ ಹಿಂತೆಗೆಯಲು ಭುಟ್ಟೋ ವಿಫಲ ಯತ್ನ ನಡೆಸಿದ್ದರು.**

**—ಸಂಪಾದಕ.**

"ಸಲಾಮ್ ಅದನ್ನು ತೋರಿಸಿದರು. ದೇವರಿಚ್ಛಿಸಿದರೆ ಅವರಿಗೆ ಅದಕ್ಕಿಂತಲೂ ಹೆಚ್ಚಿನ ವಿಜಯ ಗಳಿಸಲು ಸಾಮರ್ಥ್ಯವಿದೆ. ನನಗೆ ಅದರ ಕುರಿತು ಯಾವುದೇ ಸಂಶಯವಿಲ್ಲ" ಎಂದು ಸೂಫೀ ಝಿಯಾವುಲ್ ಹಖ್ ಎಂಬ ಹೆಸರಿನ ಕುಳ್ಳ ಗಾತ್ರದ ದೇಹ ಸೌಷ್ಠವ ಹೊಂದಿದ ಇಂಟರ್ ಮೀಡಿಯೇಟ್ ಕಾಲೇಜಿನ ಲೆಕ್ಚರರ್ ತನ್ನ ಮೆಚ್ಚಿನ ವಿದ್ಯಾರ್ಥಿಯಾದ ಅಬ್ದುಸ್ಸಲಾಮ್ ಅವಿಭಕ್ತ ಭಾರತದ ಪಂಜಾಬ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇಡೀ ಪ್ರಾಂತ್ಯಕ್ಕೇ ಪ್ರಥಮ ಸ್ಥಾನ ಪಡೆದಾಗ ಉದ್ಗರಿಸಿದರು.

ಅದು 1940ನೇ ಇಸವಿಯಲ್ಲಿ ಲಾಹೋರ್ ನಗರದಿಂದ 200 ಕಿಲೋಮೀಟರ್ ದೂರ ವಾಯುವ್ಯ ದಿಕ್ಕಿನಲ್ಲಿರುವ ಜಂಗ್ ನಗರದಲ್ಲಾಗಿತ್ತು. ಸಲಾಮ್ ಈಗ ಪ್ರೊಫೆಸರ್ ಅಬ್ದುಸ್ಸಲಾಮರಾಗಿದ್ದು ಹಲವಾರು ಶೈಕ್ಷಣಿಕ ದಾಖಲೆಗಳನ್ನು ಸೃಷ್ಟಿಸಿ ಭೌತಶಾಸ್ತ್ರದಲ್ಲಿ ನೋಬೆಲ್ ಪ್ರಶಸ್ತಿಯನ್ನು ಗಳಿಸಿ ಪಾಕಿಸ್ತಾನದ ಪ್ರಥಮ ನೋಬೆಲ್ ಪ್ರಶಸ್ತಿ ವಿಜೇತನೆಂಬ ಹೆಗ್ಗಳಿಕೆಯನ್ನು ಪಡೆದಿರುವುದನ್ನು ತಿಳಿದರೆ ಸೂಫೀ ಸಾಹೇಬರ ಹೆಮ್ಮೆಗೆ ಮೇರೆ ಇರುವುದೇ?

ಸಲಾಮ್ ಅವರ ವಿದ್ಯಾರ್ಥಿ ಜೀವನದ ಕುರಿತು ನನಗೆ ಸ್ಪಷ್ಟ ನೆನಪುಗಳು ಇವೆ. ಅವರು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ನನಗಿಂತ ಒಂದು ವರ್ಷ ಹಿರಿಯ ತರಗತಿಯಲ್ಲಿದ್ದ ವಿದ್ಯಾರ್ಥಿಯಾಗಿದ್ದರು. ಆ ಕಾಲದಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಮಧ್ಯೆ ಸಂಬಂಧ ಬಹಳ ನಿಕಟವಾಗಿತ್ತು. ಆ ಸಮಯದಲ್ಲಿ ವಿವಿಧ ತರಗತಿಗಳ ವ್ಯತ್ಯಸ್ಥ ಸಾಮರ್ಥ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಪರಸ್ಪರ ಜೋಡಿಸಲು ಅಧ್ಯಾಪಕರು ಬಲಯುತವಾದ ಕೊಂಡಿಗಳಂತಿದ್ದರು.

ಎತ್ತರ ನಿಲುವಿನ ಕನ್ನಡಕಧಾರಿ, ಮುಂಡಾಸು ಮತ್ತು ಶಲ್ವಾರ್ ಧರಿಸಿದ ಸಲಾಮ್ ಅಧ್ಯಾಪಕರಿಗೆ ಹೇಗೆ, ಹಾಗೆ ಸಹಪಾಠಿಗಳಿಗೂ ಮೆಚ್ಚಿನವರಾಗಿದ್ದರು. ಎಂ. ಎಚ್. ಹಕೀಮ್ ಅವರು ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರು ವಿದ್ಯಾರ್ಥಿಗಳಿಗೆ ಕಠಿಣ ಶಿಸ್ತಿನ ನಿಯಮಗಳನ್ನು ವಿಧಿಸಿದ್ದರು. ಅವರು ಇತರರನ್ನು ಹೊಗಳುವುದರಲ್ಲಿ ಬಹಳ ಜಿಪುಣತೆ ತೋರಿಸುತ್ತಿದ್ದರೂ ಸಲಾಮ್ ಕುರಿತು ಮಾತಾಡುವಾಗ ಅತ್ಯುತ್ಸಾಹ ತೋರಿಸುತ್ತಿದ್ದರು. ಸಲಾಮ್ ಅವರ ಪ್ರತಿಯೊಂದು ಇಂಚೂ

ಗಾಢಾಧ್ಯಾಯನವನ್ನು ಸೂಚಿಸುತ್ತದೆ. ಅವರನ್ನು ನೋಡಿದ ಕೂಡಲೇ ಅವರು ಅತ್ಯಮೋಘ ಬುದ್ಧಿಶಕ್ತಿಯನ್ನು ಹೊಂದಿದವರೆಂದು ಭಾಸವಾಗುತ್ತದೆ. ಅವರು ಬಹಳ ಸೌಮ್ಯ ಶೀಲರೂ ನಿರಹಂಕಾರಿಯೂ ಸ್ನೇಹಪರರೂ ಪರೋಪಕಾರಿಯೂ ಕೆಳತರಗತಿಯ ವಿದ್ಯಾರ್ಥಿಗಳಿಗೆ ಸಹಾಯ ಮತ್ತು ಮಾರ್ಗದರ್ಶನ ನೀಡುವವರೂ ಆಗಿದ್ದರು.

ಬುದ್ಧಿಶಕ್ತಿಯ ದೈತ್ಯನಾಗಲಿರುವ ಸಲಾಮ್ ಅವರನ್ನು ಆಗಾಗ ಭೇಟಿಯಾಗಬೇಕೆಂದೂ ಅವರ ಸದ್ಗುಣಗಳನ್ನು ತನ್ನಲ್ಲಿ ರೂಢಿಸಿಕೊಳ್ಳಲು ಪ್ರಯತ್ನಿಸಬೇಕೆಂದೂ ನಮ್ಮ ಲೆಕ್ಚರರಾದ ಸೂಫೀ ಸಾಹೇಬರು ನನ್ನೊಡನೆ ಹೇಳುತ್ತಿದ್ದುದು ಈಗಲೂ ನನಗೆ ನೆನಪಿದೆ. ಯಾವುದಾವರೂ ವಿವರಣೆಯನ್ನು ಅಪೇಕ್ಷಿಸಿದರೆ ಸಲಾಮ್ ಸಾಹೇಬರು ಅದರ ಬಗ್ಗೆ ಅತೀವ ಶ್ರದ್ಧೆಯಿಂದ ತನ್ನ ಪುಸ್ತಕಗಳ ಮತ್ತು ಅವುಗಳ ಬದಿಯಲ್ಲಿ ಬರೆಯಲಾದ ಟಿಪ್ಪಣಿಗಳ ಸಹಾಯದಿಂದ ವಿವರಿಸುತ್ತಿದ್ದರು.

ಸಲಾಮ್ ತನ್ನ ಮುಂದಿನ ಜೀವಿತಕಾಲದಲ್ಲಿ ಯಶಸ್ಸುಗಳಿಸುವುದು ಸಂಶಯಾತೀತವಾಗಿದ್ದರೂ ಅವರು ಜ್ಞಾನದ ಯಾವ ವಿಭಾಗದಲ್ಲಿ ಪ್ರಶಸ್ತಿಯಾರ್ಜಿಸಬಲ್ಲರೆಂಬುದು ಸ್ಪಷ್ಟವಾಗಿರಲಿಲ್ಲ. ಗಣಿತ ಶಾಸ್ತ್ರ ಮತ್ತು ಭೌತ ಶಾಸ್ತ್ರ ಅವರಿಗೆ ಅತ್ಯಂತ ಪ್ರಿಯವಾಗಿದ್ದುವು. ಅವರಿಗೆ ಇಂಗ್ಲಿಷ್, ಉರ್ದು ಮತ್ತು ಪರ್ಶಿಯನ್ ಭಾಷೆಯಲ್ಲಿದ್ದ ಪ್ರಭುತ್ವ ಅಷ್ಟೇ ಮಹತ್ವದ್ದಾಗಿತ್ತು. "ಚನಾಬ್" ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಕಾಲೇಜು ಪತ್ರಿಕೆಯ ಸಂಪಾದಕರಾಗಿದ್ದ ಅವರು ಬರೆದಿದ್ದ ಲೇಖನಗಳು ಆ ಕಾಲದಲ್ಲಿ ಲಾಹೋರಿನಲ್ಲಿದ್ದ ನಿರ್ಣಾಯಕ, ಉನ್ನತ ಮಟ್ಟದ ಸಾಹಿತ್ಯ ವಿಮರ್ಶಕರಿಂದ ಶ್ಲಾಘನೆಗಳಿಸಲು ಸಮರ್ಥವಾಗಿದ್ದುವು. ಆಗ ಲಾಹೋರ್ ನಗರ ಅವಿಭಜಿತ ಪಂಜಾಬಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು.

ಸಲಾಮ್ ಅವರ ಈಗಿನ ಸ್ಥಾನಮಾನಗಳು ಅವರ ಕಠಿಣ ಪರಿಶ್ರಮದ ಸಾಮರ್ಥ್ಯ ಮತ್ತು ಬುದ್ಧಿಶಕ್ತಿಯ ಫಲ ಸ್ವರೂಪಗಳಾಗಿವೆ. ಡಿಸ್ಟ್ರಿಕ್ಟ್ ಬೋರ್ಡಿನ ಒಬ್ಬ ಅಧಿಕಾರಿಯಾಗಿದ್ದ ಅವರ ತಂದೆ ಚೌಧುರಿ ಮುಹಮ್ಮದ್ ಹುಸೇನ್‌ರವರಿಂದ ಅವರಿಗೆ ಉದ್ದೇಶ ಶುದ್ಧಿ ಮತ್ತು ಸೌಮ್ಯತೆಗಳೆಂಬ ಗುಣಗಳು ಪಾರಂಪರ್ಯವಾಗಿ ಲಭಿಸಿದ್ದುವು.

ಅವರ ಉನ್ನತಿಗೇರುವಿಕೆ ಕಠಿಣವಾದ ಪರಿಶ್ರಮದ ಫಲವಾಗಿತ್ತು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಗಳಿಸಿದ ಪ್ರಶಸ್ತಿಯನ್ನು ಅವರು ಮುಂದುವರಿಸಿದರು. ಲಾಹೋರಿನ ಸರಕಾರಿ ಕಾಲೇಜ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಅವರು ಇಂಟರ್ ಮೀಡಿಯೆಟ್ ಮತ್ತು ಬಿ. ಎ. ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು. ಗಣಿತ ಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆದ ಅವರು ವಿಶ್ವ ವಿದ್ಯಾಲಯದಲ್ಲಿ ಅತ್ಯಧಿಕ ಮಾರ್ಕುಗಳನ್ನು ಪಡೆದು ಪಾಸಾಗಿದ್ದರು.

ಪಂಜಾಬ ಸರಕಾರ ಅವರಿಗೆ ಒಂದು ಸ್ಪೆಷಲ್ ಸ್ಕಾಲರ್‌ಶಿಪ್ (ವಿಶಿಷ್ಟ ವಿದ್ಯಾರ್ಥಿ ವೇತನ) ನೀಡಿದುದರ ಫಲವಾಗಿ 1946ರಲ್ಲಿ ಕೇಂಬ್ರಿಜ್ ಯೂನಿವರ್ಸಿಟಿಗೆ ಅಧ್ಯಯನಕ್ಕಾಗಿ ಹೋದರು.

ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ದಿನ ತನ್ನ "ಗತಿ"ಯ ಕುರಿತು ಇತ್ತೀಚೆಗೆ ಒಬ್ಬ ಪಾಕಿಸ್ತಾನದ ಪತ್ರಿಕಾ ವರದಿಗಾರನಿಗೆ ಅವರು ಈ ರೀತಿ ವಿವರಿಸಿದರು: "ನಮ್ಮ ಚಿಕ್ಕ ನಗರಕ್ಕೆ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಫಲಿತಾಂಶ ತಲುಪಿದ ದಿನ ನನಗೆ ಈಗಲೂ ನೆನಪಿದೆ. ನಾನು ಆಗ ಕ್ಷೌರಿಕನ ಅಂಗಡಿಯಲ್ಲಿ ತಲೆಗೂದಲಿನ ಕ್ಷೌರ ಮಾಡಿಸುತ್ತಲಿದ್ದೆ. ಕೆಲಸ ಕಲಿಯುತ್ತಲಿದ್ದ ಕ್ಷೌರಿಕ ಹುಡುಗ ತನ್ನ ವಿದ್ಯೆಯನ್ನು ಪೂರ್ಣವಾಗಿ ನನ್ನ ಮೇಲೆ ಪ್ರಯೋಗಿಸಿ ನನ್ನನ್ನು ತಲೆ ಬೋಳಿಸಿದ ಒಬ್ಬ ಬೌದ್ಧ ಸನ್ಯಾಸಿಯಂತೆ ಮಾಡಿದ್ದನು.

ನನಗೆ ಬಹಳ ಗಲಿಬಿಲಿಯಾಯಿತು. ಪೂರ್ಣ ಬೋಳಿಸಿದ ತಲೆಯನ್ನು ಬಿಳಿ ಕರವಸ್ತ್ರದಿಂದ ಸುತ್ತಿ ಮೇ ತಿಂಗಳ ಮಧ್ಯಾಹ್ನದ ಸುಡು ಬಿಸಿಲಿನಲ್ಲಿ ನಾನು ಸೈಕಲಿನಲ್ಲಿ ಬಜಾರಿನ ಮೂಲಕ ಮನೆಗೆ ತೆರಳುತ್ತಿದ್ದಾಗ ರಸ್ತೆಯ ಇಬ್ಬದಿಗಳಲ್ಲೂ ಜನರು, ಮುಖ್ಯವಾಗಿ ಅಂಗಡಿಗಾರರು, ನನಗೆ ಶುಭಾಶಂಸೆಗಳನ್ನು ಕೋರಲು ಸಾಲಾಗಿ ನಿಂತಿದ್ದರು. ಪಂಜಾಬಿನ 40,000 ವಿದ್ಯಾರ್ಥಿಗಳ ಪೈಕಿ ಜಂಗ್ ಪಟ್ಟಣದ ನಾನು ಪ್ರಥಮ ರ್‍ಯಾಂಕ್ ಗಳಿಸಿದುದು ಅವರಿಗೆ ತಿಳಿದಿತ್ತು."

ಭಾರತದ ಮಾಜಿ ವಿದೇಶ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಕಳೆದ ವರ್ಷ ಪಾಕಿಸ್ತಾನಕ್ಕೆ ಭೇಟಿ ನೀಡಿ

ದಾಗ ಅವರ ಜೊತೆ ನಾನು ಪಾಕಿಸ್ತಾನಕ್ಕೆ ತೆರಳಿದ್ದು ಜಂಗ್ ಕಾಲೇಜನ್ನು ಸಂದರ್ಶಿಸಿದ್ದೆ... ಕಾಲೇಜಿನ ಪ್ರಿನ್ಸಿಪಾಲರು ನನ್ನೊಡನೆ "ನಿಮ್ಮ ಈಗಿನ ಸಂದರ್ಶನ ಹಜ್‌ಗೆ ಸಮಾನ" ಎಂದು ಹೇಳುತ್ತಾ ನನ್ನನ್ನು ಆನಂದಭಾಷ್ಪ ಸಹಿತ ಆಲಿಂಗಿಸಿದರು. ಸಲಾಮ್ ಈ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ನಾನು ಸಹ ವಿದ್ಯಾರ್ಥಿಯಾಗಿದ್ದೆ ಎಂದು ಹೇಳಿದಾಗ ಪ್ರಿನ್ಸಿಪಾಲರು ತನ್ನ ಕುರ್ಚಿಯಿಂದ ಉತ್ಸಾಹದಿಂದ ನೆಗೆದರು!

ಪ್ರಿನ್ಸಿಪಾಲರು ಪ್ರಥಮವಾಗಿ ನನಗೆ "ಡಾಕ್ಟರ್ ಸಲಾಮ್ ಸೈನ್ಸ್ ಬ್ಲೋಕ್" ಎಂಬ ಆ ಕಾಲೇಜಿನ ವಿಜ್ಞಾನ ಶಾಸ್ತ್ರ ವಿಭಾಗವನ್ನು ತೋರಿಸಿದರು. ಪ್ರೊಫೆಸರ್ ಸಲಾಮ್ ನೀಡಿದ ದಾನದಿಂದ ಈ ವಿಜ್ಞಾನ ವಿಭಾಗವನ್ನು ನಿರ್ಮಿಸಲಾಗಿದೆ. ಅವರಿಗೆ ದೊರೆತ ಹಲವಾರು ಬಹುಮಾನಗಳ ಪೈಕಿ ಒಂದನ್ನು ಈ ಕಾಲೇಜಿಗೆ ನೀಡಿರುವರು. ಪಾಕಿಸ್ತಾನದಿಂದ ಬಂದ ವರದಿಗಳ ಪ್ರಕಾರ ನೋಬೆಲ್ ಬಹುಮಾನದ ಒಂದು ಭಾಗವನ್ನು ತನ್ನ ಬಡ ಜಿಲ್ಲೆಯ ಶೈಕ್ಷಣಿಕ ಸೌಲಭ್ಯಗಳಿಗಾಗಿ ಉಪಯೋಗಿಸುವುದಾಗಿ ತಿಳಿದು ಬಂದಿದೆ.

ಒಂದು ವರ್ಷ ಕೇಂಬ್ರಿಜ್‌ನಲ್ಲಿ ಸಂಶೋಧನೆ ನಡೆಸಿದ ನಂತರ ಅವರಿಗೆ ಅಮೇರಿಕದ ಪ್ರಿನ್ಸ್‌ಟನ್‌ನಲ್ಲಿರುವ 'ಇನ್‌ಸ್ಟಿಟ್ಯೂಟ್ ಆಫ್ ಎಡ್ವಾನ್ಸ್‌ಡ್ ಸ್ಟಡೀಸ್' ಎಂಬ ಸಂಶೋಧನ ಸಂಸ್ಥೆಯ ಫೆಲೋಶಿಫ್ ದೊರಕಿತು. ಅವರಿಗೆ ಕೇಂಬ್ರಿಜ್‌ನಲ್ಲಿ ಸೈಂಟ್ ಜೋನ್ಸ್ ಕಾಲೇಜಿನಲ್ಲಿ ಸಹ ಫೆಲೋಶಿಫ್ ದೊರಕಿತು. ಅನಂತರ ಸ್ವಲ್ಪ ಕಾಲ ಅವರು ಪಾಕಿಸ್ತಾನದ ಪಂಜಾಬ್ ಯುನಿವರ್ಸಿಟಿಯಲ್ಲಿ ಗಣಿತ ಶಾಸ್ತ್ರದ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಎಂಬ ಉನ್ನತ ಪದವಿ ಗಳಿಸಿದ್ದರು. 1954ರಲ್ಲಿ ಅವರು ಪುನಃ ಕೇಂಬ್ರಿಜ್‌ಗೆ ಗಣಿತ ಶಾಸ್ತ್ರದ ಲೆಕ್ಚರರಾಗಿ ಹಿಂದಿರುಗಿದರು.

ಮೂರು ವರ್ಷಗಳ ನಂತರ ಅವರು ಲಂಡನಿನ ಇಂಪೀರಿಯಲ್ ಕಾಲೇಜ್ ಆಫ್ ಸೈನ್ಸ್ ಎಂಡ್ ಟೆಕ್ನೋಲಜಿಯಲ್ಲಿ ಪ್ರೊಫೆಸರ್ ಸ್ಥಾನಗಳಿಸಿದರು. ಅವರು "ಏಟಮ್ ಫೋರ್ ಪೀಸ್" (ಶಾಂತಿಗಾಗಿ ಅಣುಶಕ್ತಿ) ಎಂದು ವಿಶ್ವಸಂಸ್ಥೆಯ ವತಿಯಿಂದ ನಡೆಸಲಾದ ಸಮ್ಮೇಳನಗಳಲ್ಲಿ ಎರಡು ಸಲ ಕಾರ್ಯದರ್ಶಿಯಾಗಿ ದುಡಿದರು.

ಅವರು ಇಟೆಲಿಯ ಟ್ರಿಯಸ್ಟೆ ನಗರದಲ್ಲಿರುವ ಇಂಟರ್ ನೇಶನಲ್ ಸೆಂಟರ್ ಫೋರ್ ಥಿಯರಿಟಿಕಲ್ ಫಿಸಿಕ್ಸ್ ಎಂಬ ಸಂಸ್ಥೆಯ ಡೈರೆಕ್ಟರ್ ಸಹ ಆಗಿರುವರು. ವಿಶ್ವಸಂಸ್ಥೆಯ ಸಲಹಾ ಸಮಿತಿಯ ಅಧ್ಯಕ್ಷರೂ ಆಗಿರುವರು. ಎರಡು ಉದ್ಯೋಗಗಳಿರುವ ಕಾರಣ ಅವರಿಗೆ ಇಟೆಲಿ ಮತ್ತು ಬ್ರಿಟನ್ ಮಧ್ಯೆ ಹೋಗುತ್ತಾ ಬರುತ್ತಾ ಇರಬೇಕಾಗುತ್ತದೆ.

ಸಲಾಮ್‌ರವರಿಗೆ ಪ್ರಥಮ ಅಂತಾರಾಷ್ಟ್ರೀಯ ಮಾನ್ಯತೆ ದೊರಕಿದುದು 1957ರಲ್ಲಾಗಿತ್ತು. ಆ ವರ್ಷ ಕೇಂಬ್ರಿಜ್ ವಿಶ್ವವಿದ್ಯಾಲಯ ಅವರಿಗೆ "ಹೋಪ್‌ಕಿನ್ಸ್" ಪ್ರಶಸ್ತಿ (Hopkins Prize) ನೀಡಿತು. "ಕಳೆದ ಮೂರು ವರ್ಷದ ಅವಧಿಯಲ್ಲಿ ಭೌತ ಶಾಸ್ತ್ರದಲ್ಲಿ ನಡೆಸಿದ ಅತ್ಯಂತ ಮಹತ್ವದ ಸಂಶೋಧನೆಗಳಿಗಾಗಿ" ಎಂದು ಪ್ರಶಸ್ತಿ ಪತ್ರದಲ್ಲಿ ನಿರೂಪಿಸಲಾಗಿತ್ತು.

ಇನ್ನಿತರ ಪ್ರಶಸ್ತಿಗಳೂ ಸಮ್ಮಾನಗಳೂ ಒಂದರ ಹಿಂದೆಯೊಂದರಂತೆ ಬಂದುವು. ಕೇಂಬ್ರಿಜ್ ಯುನಿವರ್ಸಿಟಿಯ ಆಡಮ್ಸ್ ಪ್ರೈಜ್ ಅವರಿಗೆ ಲಭಿಸಿತು. "ಪ್ರೈಡ್ ಓಫ್ ಪರ್‌ಫೋರ್ಮನ್ಸ್"ಪದಕ ಮತ್ತು "ಸ್ಟಾರ್ ಆಫ್ ಪಾಕಿಸ್ತಾನ್" ಪದಕ ಪಾಕಿಸ್ತಾನ ಸರಕಾರ ಅವರಿಗೆ ನೀಡಿ ಗೌರವಿಸಿತು. ಬ್ರಿಟನಿನ ರೋಯಲ್ ಸೊಸೈಟಿಯ ಫೆಲೋಶಿಪ್* ಮತ್ತು ಬ್ರಿಟಿಷ್ ಭೌತಶಾಸ್ತ್ರ ಸಂಘದ ಪದಕ ಅವರಿಗೆ "ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಭೌತಶಾಸ್ತ್ರದಲ್ಲಿ ನಡೆಸಿದ ಪ್ರಧಾನ ಸಂಶೋಧನೆಗಳಿಗಾಗಿ" ಎಂಬ ವಿವರಣೆಯೊಂದಿಗೆ ನೀಡಲಾಯಿತು. ಅವರಿಗೆ ರೋಯಲ್ ಸೊಸೈಟಿಯ ಹ್ಯೂಸ್ ಮೆಡಲ್ (Hughes Medal) "ಒಮೆಗ ಮೈನಸ್" (Omega Minus)ನ್ನು ಕಂಡುಹಿಡಿದುದಕ್ಕಾಗಿ ದೊರಕಿತು. ವಸ್ತುಗಳ ಸಾಮರಸ್ಯತೆಯ ಕುರಿತು ಸಂಶೋಧನೆ ನಡೆಸುತ್ತಾ ಅವರು ಅದನ್ನು ಕಂಡು ಹಿಡಿದಿದ್ದರು.

ಈ ವರ್ಷದ ನೋಬೆಲ್ ಪ್ರಶಸ್ತಿ ಅಬ್ದುಸ್ಸಲಾಮ್‌ರವರ (ಮತ್ತು ಅಮೇರಿಕದ ಇನ್ನಿಬ್ಬರು ಈ ಬಹುಮಾನದ ಪಾಲುದಾರರ) ಅವಿಶ್ರಾಂತ ಪರಿಶ್ರಮದ ಫಲವಾಗಿ.

---

* ತನ್ನ 31ರ ಹರೆಯದ ಮೊದಲೇ ಅವರು ಈ ಸದಸ್ಯತ್ವ ಪಡೆದರು. ಇಷ್ಟು ಕಿರಿಯ ವಯಸ್ಸಿನಲ್ಲಿ ಈ ಪದವಿ ಲಭಿಸಿರುವುದು ಚರಿತ್ರೆಯಲ್ಲೇ ಪ್ರಥಮ. —ಸಂ.

ಐನ್ ಸ್ಟೈನ್ ಮತ್ತು ಇತರರಿಗೆ ಸಹ ಪರಿಹಾರ ಕಂಡು ಹಿಡಿಯಲು ಸಾಧ್ಯವಾಗದ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ಯತ್ನದಲ್ಲಿ ಇಟ್ಟ ಪ್ರಥಮ ದೈತ್ಯ ಹೆಜ್ಜೆಗೆ ದೊರಕಿದ ಮಾನ್ಯತೆಯು ದ್ಯೋತಕವಾಗಿದೆ. "ಯುನಿಫೈಡ್ ಫೀಲ್ಡ್ ಥಿಯರಿ" ಎಂದು ಕರೆಯಲಾದ ಈ ಸಿದ್ಧಾಂತವು ಪ್ರಪಂಚವನ್ನು ಒಂದಾಗಿರಿಸಿರುವ ಶಕ್ತಿಗಳು ಒಂದೇ ಎಂದು ಸೂಚಿಸುತ್ತದೆ. ಈ ಮೂರು ವಿಜ್ಞಾನಿಗಳು ಸ್ವತಂತ್ರವಾಗಿ ಸಂಶೋಧನೆ ನಡೆಸುತ್ತಾ ನಾಲ್ಕು ಮೂಲಭೂತ ಶಕ್ತಿಗಳಲ್ಲಿ ಎರಡು ಒಂದೇ ಶಕ್ತಿಯ ಪ್ರತೀಕವೆಂದು ಕಂಡುಕೊಂಡರು.

ಸಲಾಮ್‌ರವರ ಸಂಶೋಧನೆ ನಾಲ್ಕು ಮೂಲಭೂತ ಶಕ್ತಿಗಳ ಕುರಿತಾಗಿತ್ತು. (1) ಗುರುತ್ವಾಕರ್ಷಣ ಶಕ್ತಿ–ಇದು ನಮ್ಮನ್ನು ಭೂಮಿಗೆ ತಗಲಿರುವಂತೆ ಮಾಡುತ್ತದೆ. (2) ವಿದ್ಯುದಯಸ್ಕಾಂತ ಶಕ್ತಿ–ಇದು ನಮ್ಮನ್ನು ಭೂಮಿಯಲ್ಲಿ ಜಾರಿ ಬೀಳದಂತೆ ತಡೆಯುತ್ತದೆ. (3) ಅಣುವಿನಲ್ಲಿರುವ ಬಲಶಾಲಿ ಶಕ್ತಿ. (4) ಅಣುವಿನಲ್ಲಿರುವ ಕ್ಷೀಣ ಶಕ್ತಿ. ಇವುಗಳ ಪೈಕಿ ಬಲಶಾಲಿ ಶಕ್ತಿ ಅಣುವಿನ ಕೇಂದ್ರ ಬಿಂದುವನ್ನು ಸುರಕ್ಷಿತಗೊಳಿಸುತ್ತದೆ. ಕ್ಷೀಣ ಶಕ್ತಿ ಅಣುವಿಕರಣವನ್ನು ನಿರ್ಬಲಗೊಳಿಸುತ್ತದೆ.

1920ರ ದಶಕದಲ್ಲಿ ಮಹಾ ವಿಜ್ಞಾನಿ ಐನ್ ಸ್ಟೈನ್ ಮೇಲೆ ವಿವರಿಸಿದ ನಾಲ್ಕು ಶಕ್ತಿಗಳ ಪೈಕಿ ಎರಡು ಶಕ್ತಿಗಳ ಹೊಂದಾಣಿಕೆಗೆ ಯತ್ನಿಸಿದಾಗ ಅದರಲ್ಲಿ ಜಯಗಳಿಸಲಿಲ್ಲವೆಂಬ ಸಂಗತಿ ನಾವು ನೆನಪಿಗೆ ತಂದರೆ ಸಂಶೋಧನೆಯು ಮಹತ್ವ ಹೆಚ್ಚು ಸ್ಪಷ್ಟವಾಗುವುದು. ಗಣಿತ ಶಾಸ್ತ್ರದ ಮೂಲಕ ಸಲಾಮ್‌ರವರು ಮತ್ತು ಇನ್ನಿತರ ಇಬ್ಬರು ವಿದ್ಯುದಯಸ್ಕಾಂತ ಶಕ್ತಿ ಮತ್ತು ಕ್ಷೀಣಶಕ್ತಿಗಳು ಒಂದೇ ಎಂದೂ ಆದರೆ ಅವುಗಳು ಪ್ರತ್ಯಕ್ಷವಾಗುವ ರೀತಿ ಭಿನ್ನಭಿನ್ನವೆಂದೂ ತೋರಿಸಿಕೊಟ್ಟರು. ಸಲಾಮ್‌ರವರ ಅಂತಿಮಗುರಿ ಎಲ್ಲಾ ನಾಲ್ಕು ಶಕ್ತಿಗಳ ಮಧ್ಯವಿರುವ ಸಂಬಂಧವನ್ನು ಸೂಚಿಸುವುದಾಗಿದೆ. ಇದು ಸಾಧ್ಯವಾದ ಪಕ್ಷದಲ್ಲಿ ನಾವು ಪ್ರಪಂಚದ ಕುರಿತು ಹೊಂದಿರುವ ಇಂದಿನ ಕಲ್ಪನೆಗಳೇ ಬದಲಾಗಬಹುದು.

ಸಲಾಮ್‌ರವರು ಸಾಧಿಸಿ ತೋರಿಸಿದುದು ಯಥಾರ್ಥವಾಗಿಯೂ ಬಹಳ ಅಗಾಧವಾಗಿದೆ. ಭಾರತದ ಉಪಭೂಖಂಡವು ಸಲಾಮ್‌ರವರು ಪ್ರಕೃತಿಯ ರಹಸ್ಯಗಳನ್ನು ಭೇದಿಸಿದುದರ ಕುರಿತು ಹೆಚ್ಚು ಹೆಮ್ಮೆ ವ್ಯಕ್ತಗೊಳಿಸಲಿಯೆಂದು ನಾನು ಆಶಿಸುತ್ತೇನೆ. ಸಲಾಮ್‌ರವರು ಖಾದಿಯಾನಿಯಾದ ಕಾರಣ (ಪ್ರವಾದಿತ್ವ ಪರಂಪರೆಯು ಅಂತ್ಯವಾಗಿದೆಯೆಂಬ ಪ್ರಚಲಿತ ನಂಬಿಕೆಯ ವಿರುದ್ಧ ಅಭಿಪ್ರಾಯವ್ಯಕ್ತಗೊಳಿಸಿದುದರಿಂದ ಖಾದಿಯಾನಿಗಳನ್ನು ಪಾಕಿಸ್ತಾನದಲ್ಲಿ ಅಮುಸ್ಲಿಮರೆಂದು ಘೋಷಿಸಲಾಗಿದೆ.) ಪಾಕಿಸ್ತಾನ ಸರಕಾರ ಅವರಿಗೆ ಅರ್ಹವಾದ ಸನ್ಮಾನಗಳನ್ನು ನೀಡುವುದಕ್ಕೆ ಹಿಂಜರಿಯಬಾರದು. ಅದೇ ಪ್ರಕಾರ ಭಾರತವು ಅವರೊಬ್ಬ ಪಾಕಿಸ್ತಾನಿ ಎಂಬ ಕಾರಣದಿಂದಲೂ ಅವರನ್ನು ಸನ್ಮಾನಿಸದಿರಬಾರದು. ●

(ಅನುವಾದ: ಎಂ. ಉಬೈದುಲ್ಲಾ)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮುಹಮೂದ್ ಅಹ್ಮದ್**

ಪುಟಗಳು: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore–575 001.

# ಡಾ। ಅಬ್ದುಸ್ಸಲಾಮ್‌ರವರಿಗೆ ನೋಬೆಲ್ ಪಾರಿತೋಷಕ

1979ರ ಸಾಲಿನ ಭೌತಶಾಸ್ತ್ರ ನೋಬೆಲ್ ಪಾರಿತೋಷಕವನ್ನು ಪಾಕಿಸ್ತಾನದ ಅಬ್ದುಸ್ಸಲಾಮ್ ಮತ್ತು ಅಮೇರಿಕದ ವಿಜ್ಞಾನಿದ್ವಯರಾದ ಶೆಲ್ಡನ್ ಗ್ಲಾಶೋ ಹಾಗೂ ಸ್ಟೀವನ್ ವೀನ್‌ಬರ್ಗ್‌ರಿಗೆ ನೀಡಲಾಗಿದೆ. ನೋಬೆಲ್ ಪ್ರಶಸ್ತಿಯ 1,90,000 ಡಾಲರ್ (ಸುಮಾರು 15·2 ಲಕ್ಷ ರೂಪಾಯಿ) ಮೊತ್ತವನ್ನು ಈ ಮೂವರಿಗೂ ಸಮಾನವಾಗಿ ಹಂಚಲಾಗುವುದು.

ಪ್ರೊಫೆಸರ್ ಅಬ್ದುಸ್ಸಲಾಮರಿಗೆ ನೋಬೆಲ್ ಪ್ರಶಸ್ತಿ ಲಭಿಸಿದ ವರ್ತಮಾನ ತಿಳಿದೊಡನೆ ಲಂಡನಿನಲ್ಲಿರುವ ಪತ್ರಿಕಾ ವರದಿಗಾರರೂ, ಬಿ.ಬಿ.ಸಿ., ವೊಯ್ಸ್ ಆಫ್ ಅಮೇರಿಕ ಮೊದಲಾದ ವಾರ್ತಾ ಸಂಸ್ಥೆಗಳ ಪ್ರತಿಗಳೂ ಭೇಟಿಯಾಗಿ ಅವರೊಡನೆ ಸಂಭಾಷಣೆ ನಡೆಸಿದರು. ಅವುಗಳ ಸಂಕ್ಷಿಪ್ತ ವರದಿ ಈ ರೀತಿ ಇದೆ:

**ಪ್ರಶ್ನೆ:** ನಿಮಗೆ ನೋಬೆಲ್ ಪ್ರಶಸ್ತಿ ದೊರೆತ ವರದಿ ದೊರೆತೊಡನೆ ನೀವೇನು ಮಾಡಿದಿರಿ?

**ಪ್ರೊ। ಸಲಾಮ್:** ನಾನು ಮಸೀದಿಗೆ ಹೋಗಿ ದೇವರಿಗೆ ಕೃತಜ್ಞತೆ ಸೂಚಿಸುವುದಕ್ಕಾಗಿ ಪ್ರಾರ್ಥಿಸಿ ಇಂಪೀರಿಯಲ್ ಕಾಲೇಜಿಗೆ ಬಂದೆನು.

**ಪ್ರಶ್ನೆ:** ಈ ಬಹುಮಾನದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಪ್ರೊ। ಸಲಾಮ್:** ನನಗೆ ಬಹುಮಾನ ದೊರೆತುದರಿಂದ ವಿಕಾಸಶೀಲ ರಾಷ್ಟ್ರಗಳ ಪ್ರತ್ಯೇಕವಾಗಿ ಮುಸ್ಲಿಮ್ ರಾಷ್ಟ್ರಗಳಾದ ಪಾಕಿಸ್ತಾನ, ಇರಾನ್ ಮತ್ತು ಅರೇಬಿಯಾದ ರಾಷ್ಟ್ರಗಳ ಮುಸ್ಲಿಂ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಸಂಶೋಧನೆ ನಡೆಸಲು ಹೆಚ್ಚಿನ ಪ್ರೇರಣೆ ಉಂಟಾಗುವುದೆಂದು ನಾನು ಆಶಿಸುತ್ತೇನೆ.

**ಪ್ರಶ್ನೆ:** ನೀವು ನಿಮ್ಮ ಬಹುಮಾನದ ಹಣವನ್ನೇನು ಮಾಡುವಿರಿ?

**ಪ್ರೊ। ಸಲಾಮ್:** ನನ್ನ ರಾಷ್ಟ್ರ ಪಾಕಿಸ್ತಾನ ಬಡದೇಶವಾಗಿದೆ. ಅದರಲ್ಲಿ ನನ್ನ ಜಿಲ್ಲೆಯಾದ ಜಂಗ್ ಅತ್ಯಂತ ಬಡವಾಗಿದೆ. ಅಲ್ಲಿ ನನ್ನ ಪಟ್ಟಣದಲ್ಲಿ ಒಂದು ವೈಜ್ಞಾನಿಕ ಸಂಶೋಧನಾ ಕೇಂದ್ರ ತೆರೆಯಲು ನಾನು ಉದ್ದೇಶಿಸುತ್ತೇನೆ. ಇದರಿಂದ ವಿಕಾಸಶೀಲ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ಸಹಾಯವಾದೀತೆಂದು ನಾನು ಗ್ರಹಿಸುತ್ತೇನೆ.

**ಪ್ರಶ್ನೆ:** ನಿಮ್ಮ ಸಂಶೋಧನೆಯ ಸ್ವರೂಪವೇನು?

**ಪ್ರೊ। ಸಲಾಮ್:** ಭೌತ ಶಾಸ್ತ್ರದಲ್ಲಿ ನಾಲ್ಕು ಶಕ್ತಿಗಳ ಇರುವಿಕೆಯನ್ನು ಗುರುತಿಸಲಾಗಿದೆ. (1) ಗುರುತ್ವಾಕರ್ಷಣ ಶಕ್ತಿ (2) ವಿದ್ಯುದಯಸ್ಕಾಂತ ಶಕ್ತಿ (3) ಬಲಶಾಲಿ ಅಣುಶಕ್ತಿ (4) ಕ್ಷೀಣ ಅಣುಶಕ್ತಿ – ಇವು ಆ ನಾಲ್ಕು ಶಕ್ತಿಗಳಾಗಿವೆ. ನಾನು ಒಬ್ಬ ಮುಸ್ಲಿಮನಾದ ಕಾರಣ ಏಕ ದೈವ ವಿಶ್ವಾಸಿಯಾಗಿದ್ದು ಎಲ್ಲಾ ಶಕ್ತಿಗಳ ಕೇಂದ್ರ ಒಂದೇ ಆಗಿರಲು ಸಾಧ್ಯವೆಂದು ಊಹಿಸಿ ಅದರ ಕುರಿತು ಸಂಶೋಧನೆ ನಡೆಸಿದೆ. ಅದರ ಫಲಿತಾಂಶವೇ ನನ್ನ ಈ ಸಿದ್ಧಾಂತ. ಎಲ್ಲಾ ಶಕ್ತಿಗಳು ಒಂದೇ ಶಕ್ತಿಯ ಭಿನ್ನಸ್ವರೂಪಗಳು ಎಂಬುದೇ ನನ್ನ ಸಂಶೋಧನೆಯಾಗಿದೆ.

**ಪ್ರಶ್ನೆ:** ನಿಮ್ಮ ಸಂಶೋಧನೆಯ ಫಲ ಸ್ವರೂಪವೇನು?

**ಪ್ರೊ। ಸಲಾಮ್:** ನನ್ನ ಸಿದ್ಧಾಂತಕ್ಕನುಗುಣವಾಗಿ ಜಿನೇವಾದಲ್ಲಿ 500 ಮಿಲಿಯ ಡಾಲರ್ ವೆಚ್ಚದಲ್ಲಿ ಒಂದು ಜನರೇಟರ್ ರಚಿತವಾಗಲಿದೆ.

**ಪ್ರಶ್ನೆ:** ದೈವ ವಿಶ್ವಾಸ ಮತ್ತು ವಿಜ್ಞಾನದ ಕುರಿತು ನಿಮ್ಮ ಅಭಿಪ್ರಾಯವೇನು?

ಪ್ರೊ। ಸಲಾಮ್: ವೈಜ್ಞಾನಿಕ ಸಂಶೋಧನೆ ನಡೆಸಿದಂತೆ ದೇವರ ಇರುವಿಕೆಯ ವಿಶ್ವಾಸ ಹೆಚ್ಚು ದೃಢ ವಾಗುತ್ತಾ ಹೋಗುತ್ತದೆ. ನಾನು ದೈವ ವಿಶ್ವಾಸಿಯಾ ಗಿದ್ದೇನೆ. ಐನ್‌ಸ್ಟೈನ್‌ರಂತಹ ಎಷ್ಟೋ ವಿಖ್ಯಾತ ವಿಜ್ಞಾನಿಗಳೂ ದೈವ ವಿಶ್ವಾಸಿಗಳಾಗಿದ್ದರು.

* * * *

ಡಾಕ್ಟರ್ ಅಬ್ದುಸ್ಸಲಾಮರಿಗೆ ಅಸಂಖ್ಯಾತ ಬಹು ಮಾನಗಳೂ ಪ್ರಶಸ್ತಿಗಳೂ ದೊರೆತಿವೆಯೆಂದೂ ಅವರು 130 ಸಂಶೋಧನಾತ್ಮಕ ಲೇಖನಗಳನ್ನು ಬರೆದಿರುವ ರೆಂದೂ ಎರಡು ಉದ್ಗ್ರಂಥಗಳನ್ನು ರಚಿಸಿರುವರೆಂದೂ ಅವರು ಅತ್ಯಂತ ಧರ್ಮನಿಷ್ಠರಾದ ಮನುಷ್ಯರೆಂದೂ ಬಿ. ಬಿ. ಸಿ. ಮತ್ತು ವೊಯ್ಸ್ ಓಫ್ ಅಮೇರಿಕಾ ವರದಿ ಮಾಡಿದೆ.

(ಸಂಗ್ರಹ: ಎಂ. ಉಬೈದುಲ್ಲಾ) ●

# ಪ್ರೊಫೆಸರ್ ಅಬ್ದುಸ್ಸಲಾಮರಿಗೆ ಶುಭಾಶಂಸನೆಗಳು

"ಎಲ್ಲಾ ಸ್ತುತಿ ಅಲ್ಲಾಹನಿಗೆ ಮಾತ್ರವಾಗಿದೆ. ನನ್ನ ಪರವಾಗಿ ಮತ್ತು ಜಮಾಅತೆ ಅಹ್ಮದಿಯಾದ ಪರ ವಾಗಿ ಹೃತ್ಪೂರ್ವಕವಾದ ಶುಭಾಶಯಗಳನ್ನು ಸ್ವೀಕರಿಸಿರಿ. ಅಹ್ಮದಿಯರಿಗೆ ಮತ್ತು ಎಲ್ಲಾ ಪಾಕಿಸ್ತಾನಿಗಳಿಗೆ ನಿಮ್ಮ ಕುರಿತು ಅಭಿಮಾನವಿದೆ. ಪ್ರಥಮ ಮುಸ್ಲಿಂ ವಿಜ್ಞಾನಿ ಹಾಗೂ ಪಾಕಿಸ್ತಾನಿ ನೋಬೆಲ್ ಪ್ರಶಸ್ತಿ ವಿಜೇತ ಒಬ್ಬ ಅಹ್ಮದಿಯನೆಂಬ ಕಾರಣದಿಂದ ಅಹ್ಮದಿಯರಿಗೆ ಅಭಿಮಾನವಿದೆ. ಅಲ್ಲಾಹನು ನಿಮಗೆ ಇನ್ನು ಮುಂದೆ ಇದಕ್ಕಿಂತ ಮಹತ್ತರವಾದ ಬಹುಮಾನಗಳನ್ನು ಒದಗಿಸಲಿ ಮತ್ತು ನಿಮಗೆ ತನ್ನ ಸಹಾಯವನ್ನು ಅನುಗ್ರಹಿಸುತ್ತಾ ಇರಲಿ.*1

—ಮಿರ್ಝಾ ನಾಸಿರ್ ಅಹ್ಮದ್, ಖಲೀಫತುಲ್ ಮಸೀಹ್ III
(ಅಹ್ಮದಿಯಾ ಸಂಘಟನೆಯ ಸರ್ವೋನ್ನತ ನೇತಾರ)

□ □

ಭೌತಶಾಸ್ತ್ರದಲ್ಲಿ ನೀವು 1979ರ ನೋಬೆಲ್ ಪ್ರಶಸ್ತಿ ಗಳಿಸಿರುವಿರೆಂಬುದು ನನಗೆ ಬಹಳ ಹೆಮ್ಮೆ ಹಾಗೂ ಸಂತಸದ ಸಂಗತಿಯಾಗಿದೆ. ಇದು ಥಿಯರಿಟಿಕಲ್ ಫಿಸಿಕ್ಸ್‌ನ ರಂಗದಲ್ಲಿ ನಿಮ್ಮ ಅವಿಶ್ರಾಂತ ಸಂಶೋಧನೆಯನ್ನು ಮತ್ತು ಅಗಾಧ ಪಾಂಡಿತ್ಯವನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ದಯವಿಟ್ಟು ನನ್ನ ಪರವಾಗಿಯೂ ಪಾಕಿಸ್ತಾನದ ಜನತೆಯ ಪರವಾಗಿಯೂ ಹೃತ್ಪೂರ್ವಕ ಶುಭಾಶಂಸೆಗಳನ್ನು ಸ್ವೀಕರಿಸಿರಿ. ನೀವು ನಿಜವಾಗಿಯೂ ಪಾಕಿಸ್ತಾನದ ಕೀರ್ತಿಗೆ ಒಂದು ಹೊಸ ದೀಪ್ತಿಯನ್ನು ಸೇರಿಸಿದ್ದೀರಿ."*2

—ಮುಹಮ್ಮದ್ ಝಿಯಾ ಉಲ್‌ಹಕ್
ಪಾಕಿಸ್ತಾನದ ಅಧ್ಯಕ್ಷ.

ಒಬ್ಬ ಜರ್ಮನ್ ಡಾಕ್ಟರ್ ಇದ್ದರು. ನೋಟೋವಿಚ್‌ನ ಕಾಲೆಲುಬು ಮುರಿದಾಗ ಡಾ। ಮಾರ್ಕ್ಸ್ ಚಿಕಿತ್ಸೆ ನಡೆಸಿದ್ದರು. ಡಾ। ಮಾರ್ಕ್ಸ್‌ನ ದಿನಚರಿಯಲ್ಲಿ ನೋಟೋವಿಚ್‌ನ ಕುರಿತು ಸ್ಮರಣೆ ಇದೆ. ಯೇಸು ಶಿಲುಬೆಯ ಮೇಲಿನ ಮರಣದಿಂದ ರಕ್ಷಿಸಲ್ಪಟ್ಟ ನಂತರ ಲಡಾಖ್ ಮತ್ತಿತರ ಮಧ್ಯೇಷ್ಯಾ ಪ್ರದೇಶಗಳಲ್ಲಿ ಸಂಚಾರ ನಡೆಸಿದ್ದರೆಂಬ ಒಂದು ಸಿದ್ಧಾಂತವನ್ನು ನೋಟೋವಿಚ್ ಬಹಿರಂಗಪಡಿಸಿದ್ದರೆಂದು ಡಾ। ಮಾರ್ಕ್ಸ್ ತನ್ನ ದಿನಚರಿಯಲ್ಲಿ ಬರೆದಿದ್ದಾರೆ. ಒಂದು ಚರಿತ್ರೆ ಸಂಭವವೆಂದು ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟ ಯೇಸುವಿನ ಶಿಲುಬೆಯ ಮೇಲಿನ ಮರಣವನ್ನು ಪ್ರಶ್ನಿಸುವ ರೀತಿಯಲ್ಲಿ ತನ್ನ ಪುಸ್ತಕವನ್ನು ಸಾದರಪಡಿಸಲು ಸಾಕಷ್ಟು ಆತ್ಮಧೈರ್ಯ ಇಲ್ಲದಿದ್ದುದರಿಂದ ನೋಟೋವಿಚ್ ಆ ಸಂಗತಿಯನ್ನೇನೂ ತನ್ನ ಪುಸ್ತಕದಲ್ಲಿ ಪ್ರತಿಪಾದಿಸಲು ತಯಾರಾಗಲಿಲ್ಲವೆಂದು ಭಾವಿಸದೆ ನಿರ್ವಾಹವಿಲ್ಲ. ವಿವಾದಾಸ್ಪದವಾದ ಅವರ ಪುಸಕ್ತಕವಾದರೋ ಅತ್ಯುನ್ನತ ಸ್ಥಾನದಲ್ಲಿದ್ದ ಕಾರ್ಡಿನಲ್‌ಗಳ ಕಠಿಣ ವಿರೋಧವನ್ನೂ ವಿಮರ್ಶೆಗಳನ್ನೂ ಎದುರಿಸಿಕೊಂಡು ಪ್ರಕಾಶಿತವಾಗಿದೆಯೆಂಬ ಸಂಗತಿ ಸಹ ಮರೆಯತಕ್ಕದ್ದಲ್ಲ.

ಸಂಕ್ಷಿಪ್ತವಾಗಿ, ಶಿಲುಬೆಯ ಮೇಲಿನ ಮರಣದಿಂದ ರಕ್ಷಿಸಲ್ಪಟ್ಟ ನಂತರವೇ ಯೇಸು ಪೂರ್ವದಿಕ್ಕಿನೆಡೆಗೆ ಅಥವಾ ಕಾಶ್ಮೀರಕ್ಕೆ ಯಾತ್ರೆ ನಡೆಸಿದ್ದರು ಹಾಗೂ ಅದರ ಮೊದಲು ಅವರು ಪೆಲಸ್ತೀನದಲ್ಲೇ ಇದ್ದರೆಂಬ ಅಹ್ಮದಿಯಾ ವಾದವೇ ಸರಿಯೂ ಸತ್ಯವೂ ಆಗಿದೆಯೆಂಬುದು ಸುವ್ಯಕ್ತ.

++++++++

“ಈ ಗೌರವ ಮುಸ್ಲಿಮರ ಸಂತೋಷಕ್ಕೆ ಕಾರಣವಾಗಿದೆ. ನಿಮ್ಮ ಈ ವಿಜಯದ ಬಗ್ಗೆ ನಾವು ಹರ್ಷಿತರಾಗಿದ್ದೇವೆ. ನಿಮ್ಮ ಈ ಮಹತ್ತರ ಸಾಧನೆಯನ್ನು ನಿರಂತರವಾಗಿ ಮುಂದುವರಿಸಲಿಕ್ಕೆ ಅಲ್ಲಾಹನು ನಿಮಗೆ ಆರೋಗ್ಯವನ್ನೂ ಸಾಮರ್ಥ್ಯವನ್ನೂ ದಯಪಾಲಿಸಲಿಯೆಂದು ನಾವು ಪ್ರಾರ್ಥಿಸುತ್ತೇವೆ.”*3

—ಮುಹಮ್ಮದ್ ಇಬ್ನ್ ಫೈಝುಲ್ ಅಲ್ ಸೌದ್,
ರಾಯಲ್ ಸೌದಿ ಅರೇಬಿಯನ್ ಕಾನ್ಸುಲೇಟ್, ನ್ಯೂಯೋರ್ಕ್.

□ □

“ನಿಮಗೆ ನೋಬೆಲ್ ಪ್ರಶಸ್ತಿ ಲಭಿಸಿದ ಸುದ್ದಿಯನ್ನು ನಾವು ಬಹಳ ಸಂತೋಷದಿಂದ ಕೇಳಿದೆವು. ನೀವು ನಿಮಗೋಸ್ಕರ ಹಾಗೂ ಲೋಕದಾದ್ಯಂತ ಮುಸ್ಲಿಂ ಸಹೋದರರಿಗೋಸ್ಕರ ಗಳಿಸಿದ ಈ ಗೌರವದಲ್ಲಿ ಮುಸ್ಲಿಂ ಸಹೋದರರೆಂಬ ನೆಲೆಯಲ್ಲಿ ನಾವೂ ಸಹಭಾಗಿಯಾಗಿದ್ದೇವೆ.”*3

— ಇಬ್ರಾಹಿಂ ಅಲ್ ಮುನ್ತಸ್ಸಿರ್, *4
ಸೆಕ್ರೆಟರಿ ಜನರಲ್, ಪೀಪಲ್ಸ್ ಕಮಿಟಿ ಮತ್ತು ರೆಕ್ಟರ್ ಅಲ್ ಫತಹ್ ಯುನಿವರ್ಸಿಟಿ, ಟ್ರಿಪೋಲಿ, ಲಿಬಿಯಾ.

*1 “ಅಲ್ ಫಝುಲ್”, ರಬ್ವಾ, ದಿನಾಂಕ: 21-10-1979

*2 “ಡಾನ್”, ಕರಾಚಿ, ದಿನಾಂಕ: 16-10-1979

*3 “ಜಂಗ್”, ರಾವಲ್ಪಿಂಡಿ, ದಿನಾಂಕ: 3-11-1979

*4 ಇಬ್ರಾಹಿಂ ಮುನ್ತಸ್ಸಿರ್ ಅವರು ಪ್ರೊಫೆಸರ್ ಅಬ್ದುಸ್ಸಲಾಮರನ್ನು ಲಿಬಿಯಾಕ್ಕೆ ಭೇಟಿ ನೀಡಲು ಆಮಂತ್ರಿಸಿದ್ದಾರೆಂದು “ಜಂಗ್” (3-11-79) ವರದಿ ಮಾಡಿದೆ.

# ಯೇಸು ಭಾರತಕ್ಕೆ ಬಂದದ್ದು ಯಾವಾಗ?

● ಎನ್. ಅಬ್ದುರ್ರಹೀಂ

ಯೇಸುಕ್ರಿಸ್ತ ಅಥವಾ ಈಸಾನಬಿ ಶಿಲುಬೆಯ ಮೇಲೆ ಮೃತಪಟ್ಟಿಲ್ಲವೆಂದೂ ಅವರು ಶಿಲುಬೆಯ ಮೃತ್ಯು ದಾಡೆಯಿಂದ ಸುರಕ್ಷಿತರಾದ ನಂತರ ಭಾರತಕ್ಕೆ ಬಂದು ತಲುಪಿದರೆಂದೂ ಕಾಶ್ಮೀರದಲ್ಲಿ ಅವರು ಮೃತಪಟ್ಟ ರೆಂದೂ ಅವರ ಸಮಾಧಿ ಶ್ರೀನಗರದಲ್ಲಿದೆಯೆಂದೂ ಅಹ್ಮದಿಯರು ಹೇಳುತ್ತಿರುವುದನ್ನು ವಿದ್ವತ್ ಲೋಕವು ಮೆಲ್ಲ ಮೆಲ್ಲನೆ ಅಂಗೀಕರಿಸುತ್ತಾ ಬರುತ್ತಿದೆ.

ಯೇಸು ಬಾಲ್ಯ ಕಾಲದಲ್ಲಿ ಅಥವಾ 12 ಮತ್ತು 30ರ ಮಧ್ಯದ ಯೌವನ ಕಾಲದಲ್ಲಿ ಭಾರತದ ಯಾತ್ರೆ ನಡೆಸಿದ್ದರೆಂದು ರಶ್ಯನ್ ಸಂಚಾರಿ ನಿಕೋಲಸ್ ನೋಟೋವಿಚ್ The Unknown Life of Jesus (ಯೇಸುವಿನ ಅಜ್ಞಾತ ಜೀವಿತ) ಎಂಬ ತನ್ನ ಪುಸ್ತಕದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಕೆಲವು ಹಿಂದೂ ವಿದ್ವಾಂಸರು ಸಹ ಇದೇ ಅಭಿಪ್ರಾಯವನ್ನು ಹೊಂದಿದವರಾಗಿದ್ದಾರೆ.

ಯೇಸು ಶಿಲುಬೆಯ ಮೇಲೆ ಮೃತಪಟ್ಟಿದ್ದಾರೆಂದು ಕಣ್ಣುಮುಚ್ಚಿ ನಂಬುವವರು ಮೇಲಿನಂತೆ ಗ್ರಹಿಸಲು ಪ್ರೇರಿತರಾಗಿದ್ದಾರೆಂಬುದನ್ನು ಮರೆಯಬಾರದು. ಶಿಲುಬಾ ಪ್ರಕರಣದ ಮೊದಲು ಯೇಸು ಭಾರತಕ್ಕೆ ಬರಬೇಕಾದ ಯಾವ ಕಾರಣವೂ ಇಲ್ಲವೆಂಬುದು ಸತ್ಯ. ಆದರೆ ನಳಂದ ಮತ್ತು ತಕ್ಷಶಿಲೆಯ ವಿಜ್ಞಾನದ ಬಗ್ಗೆ ಶ್ರುತಿ ಅವರನ್ನು ಭಾರತದೆಡೆಗೆ ಆಕರ್ಷಿಸಿರಬಹುದೆಂದು ಕೆಲವರು ಹೇಳುತ್ತಾರೆ. ಆದರೆ ಆ ಕಾಲದಲ್ಲಿ ಭಾರತ ಮತ್ತು ಪೆಲಸ್ತೀನನ್ನು ಪರಸ್ಪರ ಜೋಡಿಸುವ ವೈಜ್ಞಾನಿಕ ಸಂಪರ್ಕದ ಯಾವ ಪುರಾವೆಯೂ ಇಲ್ಲವೆಂದು ಮಾಕ್ಸ್ ಮುಲ್ಲರ್, ರಿಸ್ ಡೇವಿಡ್ಸ್ ಮೊದಲಾದ ಪ್ರಮುಖ ಪಂಡಿತರು ವ್ಯಕ್ತಗೊಳಿಸಿರುವರು.

ಶಿಲುಬಾ ಪ್ರಕರಣದ ಮೊದಲು ಯೇಸು ಪೆಲಸ್ತೀನದಲ್ಲೇ ಇದ್ದರೆಂದು ಸಾಬೀತುಪಡಿಸುವ ಕೆಲವು ಸೂಚನೆಗಳು ಬೈಬಲಿನಲ್ಲೇ ಇವೆ. 12 ಮತ್ತು 30ರ ಮಧ್ಯ ಕಾಲದ 'ಅಜ್ಞಾತ ಜೀವಿತ'ದ ಕುರಿತು ಸುವಾರ್ತೆಗಳಲ್ಲಿ ಏನೂ ಪ್ರಸ್ತಾಪಿಸಲಾಗಿಲ್ಲವೆಂದು ಹೇಳುವುದು ಸರಿಯಲ್ಲ.

ಯೇಸು ಶಿಲುಬಾ ಸಂಭವಕ್ಕೆ ಮೊದಲು ಭಾರತಕ್ಕೆ ಬಂದಿರಲು ಸಾಧ್ಯವಿಲ್ಲ. ಯೇಸುವಿನ 'ಅಜ್ಞಾತಕಾಲ' ವೆಂದು ಚಿತ್ರೀಕರಿಸಲ್ಪಡುವ ಆ ಯೌವನ ಕಾಲದಲ್ಲಿ ಅವರು ಪೂರ್ವ ದಿಕ್ಕಿನೆಡೆಗೆ ಪರ್ಯಟನೆ ನಡೆಸಿದ್ದರೆಂದು ನಂಬಲು ಪ್ರಯಾಸಕರವಾಗಿದೆ. ಅದಕ್ಕೆ ಆಧಾರವಾಗಿ ಈ ಕೆಳಗಿನ ಕಾರಣಗಳನ್ನು ಕೊಡಬಹುದು:

1. ಅಷ್ಟು ದೀರ್ಘವಾದ ಒಂದು ಯಾತ್ರೆ ಮತ್ತು ದೀರ್ಘಕಾಲದ ವಿದೇಶವಾಸದ ನಂತರ ಪೆಲಸ್ತೀನಿಗೆ ಹಿಂತೆರಳಿದ ಯೇಸು ನಂತರ ಒಮ್ಮೆಯೂ ತನ್ನ ಜೀವನದ ಅತಿ ಪ್ರಧಾನವಾದ ಆ ಯಾತ್ರೆಯ ಕುರಿತು ಒಂದು ಅಕ್ಷರವಾದರೂ ಉಚ್ಚರಿಸಲಿಲ್ಲವೆಂದು ಹೇಳಬಹುದೇ? ಅಥವಾ ಏನಾದರೂ ನುಡಿದಿದ್ದರೆ, ಸುವಾರ್ತೆಗಳಲ್ಲಿ ಯಾವುದರಲ್ಲಾದರೂ ಅದರ ಸೂಚನೆಯಾದರೂ ಕಾಣಬೇಕಿತ್ತಲ್ಲವೇ?

2. ಶಿಲುಬಾ ಸಂಭವದ ಮೊದಲು ಪೆಲಸ್ತೀನನ್ನು ಬಿಡಲಿಕ್ಕೂ ಕ್ಲೇಶಭರಿತ ಸುದೀರ್ಘವಾದ ಒಂದು ವಿದೇಶ ಸಂಚಾರ ನಡೆಸಲಿಕ್ಕೂ ಯೇಸುವನ್ನು ನಿರ್ಬಂಧಿಸಿದ ಒಂದು ಸಂಭವ ಅವರ ಜೀವಿತದಲ್ಲಿ ಉಂಟಾಗಲಿಲ್ಲ.

3. ಯೇಸು ತನ್ನ 'ಅಜ್ಞಾತ' ಯೌವನ ದಿನಗಳನ್ನು ಟಿಬೇಟಿನಲ್ಲಿ ಅಥವಾ ಇನ್ನೆಲ್ಲಿಯಾದರೂ ಕಳೆದಿರುತ್ತಿದ್ದರೆ, "ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ? ನಾನು ಸತ್ಯವನ್ನು ಹೇಳುವವನಾಗಿರುವಲ್ಲಿ ನೀವು ನನ್ನ ಮಾತನ್ನು ನಂಬದೆ ಇರುವುದು ಯಾಕೆ?" (ಯೋಹಾನ 8:46) ಎಂಬ ಯೇಸುವಿನ ಆ ಸವಾಲಿಗೆ ಏನು ಅರ್ಥ? ಹದಿನೆಂಟು ವರ್ಷ ಕಾಲ ಪೆಲಸ್ತೀನದಲ್ಲಿ ವಾಸವಿಲ್ಲದ ಓರ್ವ 30ರ ಹರೆಯದಲ್ಲಿ ಅಲ್ಲಿಗೆ ಹಿಂತೆರಳಿ ಪಕ್ಕನೆ ಒಂದು ದಿನ ಮಸೀಹಾವಾದ ಘೋಷಿಸಿ ತನ್ನ ಜೀವಿತ ಪರಿಶುದ್ಧಿಯನ್ನು ಸತ್ಯ ಸಾಕ್ಷ್ಯವಾಗಿ ಎತ್ತಿತೋರಿಸುವುದು ಅಸಂಬದ್ಧವಲ್ಲವೇ? ಯೇಸುವಿನ ಆ ಹೇಳಿಕೆ ನಿರರ್ಥಕವಲ್ಲವೆಂದಾಗಬೇಕಾದರೆ ಅವರು ಆ ಕಾಲವಿಡೀ ಪೆಲಸ್ತೀನದಲ್ಲೂ ಯಹೂದರ

ಮಧ್ಯದಲ್ಲೂ ಕಳೆದಿದ್ದರೆಂದು ಸಮ್ಮತಿಸಲೇ ಬೇಕಾಗುತ್ತದೆ. ಯಥಾರ್ಥದಲ್ಲಿ, ಯೋಹಾನನ ಆ ಪ್ರಸ್ತಾವನೆ ಯೇಸು ಶಿಲುಬಾ ಪ್ರಕರಣದ ಮೊದಲು ಅಂತಹ ಒಂದು ದೀರ್ಘ ಯಾತ್ರೆ ನಡೆಸಿಲ್ಲವೆಂದು ರುಜುಪಡಿಸುತ್ತದೆ. ಯೇಸು ಲಡಾಖ್, ಟಿಬೇಟ್, ಕಾಶ್ಮೀರ ಮೊದಲಾದ ಪ್ರದೇಶಗಳಲ್ಲಿ ಪರ್ಯಟನೆ ನಡೆಸಿರುವರೆಂಬುದು ಸರಿ. ಪಂಡಿತ್ ನೆಹರೂ ಸಹ ಯೇಸುವಿನ ಮಧ್ಯೇಷ್ಯಾ ಪ್ರವಾಸವನ್ನು ಅಸಂಭಾವ್ಯವೆಂದು ಭಾವಿಸಲಿಲ್ಲ. ಆದರೆ, ಅದು ಶಿಲುಬಾ ಸಂಭವದ ಮೊದಲೋ ನಂತರವೋ ? ಮೊದಲಾಗಲಿಕ್ಕೆ ಸಾಧ್ಯವಿಲ್ಲ, ಖಂಡಿತ.

ಯೇಸುವಿನ ಭಾರತ ಸಂಚಾರ ಶಿಲುಬಾ ಪ್ರಕರಣದ ಮೊದಲಾಗಲಿಕ್ಕೆ ಸಾಧ್ಯತೆಯಿಲ್ಲವೆಂದೂ ಅವರು ಅಷ್ಟರವರೆಗೆ ಪೆಲಸ್ತೀನದಲ್ಲೇ ಇದ್ದರೆಂದೂ ರುಜುಗೊಳಿಸುವರೆ ಬೈಬಲಿನಿಂದ ಇನ್ನೂ ಸಾಕ್ಷ್ಯಗಳನ್ನು ಉದ್ಧರಿಸಬಹುದು:

4. "ಇವನು ಆ ಬಡಗಿಯ ಮಗನಲ್ಲವೇ ? ಇವನ ತಾಯಿ ಮರಿಯಳೆಂಬವಳಲ್ಲವೇ ? " ಎಂದೆಲ್ಲಾ ಯಹೂದ್ಯ ವಿದ್ವಾಂಸರು ಹೇಳುತ್ತಿದ್ದರೆಂದು ಸುವಾರ್ತೆಯಲ್ಲಿ ಬರೆಯಲಾಗಿದೆ. (ಮತ್ತಾಯ 13:55)

ಯೇಸು ಜೋಸೆಫ್ ಸಂಗಡ ಬಡಗಿ ಕೆಲಸ ಮಾಡುತ್ತಾ ಪೆಲಸ್ತೀನದಲ್ಲಿ ಯೌವನ ಕಾಲವನ್ನು ಕಳೆದದ್ದು ಅವರಿಗೆಲ್ಲಾ ಪರಿಚಯವಿತ್ತೆಂದು ಇದರಿಂದ ವ್ಯಕ್ತವಾಗುತ್ತದೆ.

5. ಯೇಸು ಬಡಗಿಯ ಮಗನೆಂದು ಮಾತ್ರವಲ್ಲ ಒಬ್ಬ ಬಡಗಿ ಎಂದು ಸಹ ಪೆಲಸ್ತೀನದಲ್ಲಿ ಗುರುತಿಸಲ್ಪಟ್ಟಿದ್ದರು. ಯೇಸುವಿನ ಜ್ಞಾನವನ್ನು ಅರಿತಾಗ, "ಇವನು ಆ ಬಡಗಿಯಲ್ಲವೇ ? ಇವನು ಮರಿಯಳ ಮಗನಲ್ಲವೇ? ಯಕೋಬ, ಯೋಸೆ, ಯೂದ, ಸೀಮೋನ ಇವರ ಅಣ್ಣನಲ್ಲವೇ? " ಎಂದು ನಜರೆತ್ತಿನವರು ಕೇಳಿದರು. (ಮಾರ್ಕ 6:3). ಇದರಿಂದ ಒಬ್ಬ ಪ್ರೌಢ ಬಡಗಿಯಾಗಿಯೂ ಯೇಸು ನಜರೆತ್ತಿನಲ್ಲೇ ಕೆಲಸ ಮಾಡುತ್ತಿದ್ದರೆಂದು ವ್ಯಕ್ತವಾಗುತ್ತದೆ.

6. ನಳಂದ ಮತ್ತು ತಕ್ಷಶಿಲೆಯ ಜ್ಞಾನ ಶ್ರುತಿಯಿಂದ ಆಕರ್ಷಿತನಾಗಿ ಯೇಸು ಭಾರತಕ್ಕೆ ಬಂದದ್ದಲ್ಲವೆಂದು ರುಜುಪಡಿಸುವ ಒಂದು ವಾಕ್ಯವೂ ಸುವಾರ್ತೆಯಲ್ಲಿದೆ. ಯೇಸುವಿನ ಅಗಾಧ ಜ್ಞಾನದ ಕುರಿತು ಯಹೂದ್ಯ ಪುರೋಹಿತರು "ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದವು? " ಎಂದು ಅತ್ಯಾಶ್ಚರ್ಯದಿಂದ ಕೇಳಿದರು. (ಮತ್ತಾಯ 13:54)

ಹದಿನೆಂಟು ವರ್ಷಗಳ ಸುದೀರ್ಘವಾದ ಪ್ರವಾಸದ ನಂತರ ಪೆಲಸ್ತೀನಕ್ಕೆ ಹಿಂತೆರಳಿದ ಬಳಿಕ ಯೇಸು ತನ್ನ ಜ್ಞಾನವನ್ನು ಪ್ರಕಟಪಡಿಸುತ್ತಲೂ ಉಪದೇಶಗಳನ್ನೂ ಬೋಧನೆಗಳನ್ನೂ ನೀಡುತ್ತಲೂ ನಜರೆತ್ತಿನ ಯಹೂದ್ಯ ಪುರೋಹಿತರನ್ನು ಆಶ್ಚರ್ಯಗೊಳಿಸಿದ್ದರೆ ಅವರು ಮೇಲಿನಂತೆ ಎಂದಿಗೂ ಪ್ರಶ್ನಿಸುತ್ತಿರಲಿಲ್ಲ. ಅವು ವಿದೇಶಗಳಲ್ಲಿ ಸಂಚರಿಸಿ ಅನ್ಯಜಾತಿಯವರಿಂದ ಸಂಪಾದಿಸಿದ ಜ್ಞಾನಗಳೂ ಪಾಷಂಡವಾದಗಳೆಂದೂ ಹೇಳಿ ಅವರು ಗೇಲಿಮಾಡುತ್ತಿದ್ದರು. ಯೇಸು ಹೊರದೇಶಗಳಲ್ಲಿ ಸಂಚರಿಸಿ ಗಳಿಸಿದ ಜ್ಞಾನವೆಂದು ತಿಳಿದು ಸಹ "ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದವು?" ಎಂದು ಅವರು ಚಕಿತರಾಗಬೇಕಿರಲಿಲ್ಲ.

ಯೇಸು ಶಿಲುಬಾ ಸಂಭವದ ಮೊದಲು ಭಾರತ ಮತ್ತು ಇತರ ಕಡೆಗಳಲ್ಲಿ ಯಾತ್ರೆ ನಡೆಸಿದ್ದರೆಂಬ ಅಭಿಪ್ರಾಯವನ್ನು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು 'ಮಸೀಹ್ ಹಿಂದುಸ್ಥಾನ್ ಮೆ' (Jesus in India) ಎಂಬ ತನ್ನ ಪುಸ್ತಕದಲ್ಲಿ ಶಕ್ತಿಯುತವಾಗಿ ಖಂಡಿಸಿದ್ದಾರೆಂಬುದು ಇಲ್ಲಿ ಸ್ಮರಣಾರ್ಹವಾಗಿದೆ

ರಷ್ಯಾದ ನಿಕೋಲಸ್ ನೋಟೋವಿಚ್, ಯೇಸು ತನ್ನ 'ಅಜ್ಞಾತ ಜೀವಿತ'ವನ್ನು ಭಾರತ ಮತ್ತು ಇತರೆಡೆಯಲ್ಲಿ ಕಳೆದಿದ್ದರೆಂದು ಹೇಳಿದ್ದಾರಷ್ಟೆ. ಶಿಲುಬೆಯ ಮೇಲೆ ಯೇಸು ಮೃತಪಟ್ಟಿರುವರೆಂದು ದೃಢವಾಗಿ ನಂಬಿರುವ ನೋಟೋವಿಚ್ ಶಿಲುಬಾ ಪ್ರಕರಣದ ನಂತರ ಯೇಸು ಯಾತ್ರೆ ನಡೆಸಿದುದರ ಕುರಿತು ಚಿಂತಿಸಲು ಅಥವಾ ಪ್ರತಿಪಾದಿಸಲು ಪ್ರಚೋದಿತನಾಗಲಿಲ್ಲವೆಂಬುದರಲ್ಲಿ ಆಶ್ಚರ್ಯವಿಲ್ಲ. ಆದರೆ ಯೇಸು ಶಿಲುಬೆಯ ಮೇಲಿನ ಮರಣದಿಂದ ರಕ್ಷಿಸಲ್ಪಟ್ಟ ನಂತರ ಭಾರತಕ್ಕೆ ಯಾತ್ರೆ ನಡೆಸಿದ್ದರೆಂಬುದರ ಬಗ್ಗೆ ಕೆಲವು ಪುರಾವೆಗಳನ್ನು ಅವರು ಕಂಡಿದ್ದರೆಂದೂ ಅದು ಅವರಿಗೆ ತಿಳಿದಿತ್ತೆಂದೂ ಈಗ ರುಜುವಾತಾಗಿದೆ. ನೋಟೋವಿಚ್ ಲಾಸ್ಸಾದಲ್ಲಿ ವಾಸಿಸುತ್ತಿದ್ದ ಕಾಲದಲ್ಲಿ ಅಲ್ಲಿ ಮಾರ್ಕ್ಸ್ ಎಂಬ ಹೆಸರಿನ

( 11ನೇ ಪುಟಕ್ಕೆ )

# ★ 'ಸನ್ಮಾರ್ಗ'ಕ್ಕೆ ಒಂದು ಉತ್ತರ ★

ಲೇಖಕ: ಎಂ. ಪಿ. ಇಬ್ರಾಹಿಂ

ತಾ. 23-11-79ರ 'ಸನ್ಮಾರ್ಗ'ದಲ್ಲಿ "ಮಿರ್ಝಾರ ಮುಸ್ಲಿಮ್ ದ್ವೇಷ" ಎಂಬ ಶಿರೋನಾಮೆಯಲ್ಲಿ ಎ. ಆರ್. ಅಹ್ಮದ್ ಸಂಗ್ರಹಿಸಿರುವ ಕೆಲವು ಉದ್ಧಾರಣೆಗಳು ಪ್ರಕಟವಾಗಿವೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರನ್ನು ಸ್ವೀಕರಿಸದೆ ಇರುವವರು ಮುಸ್ಲಿಮರಲ್ಲವೆಂದು ಅವರೂ ಅಹ್ಮದಿಯಾ ಸಂಘಟನೆಯ ಎರಡನೆಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹೇಬರೂ ಹೇಳಿರುವರೆಂದು ತೋರಿಸಲಿಕ್ಕಾಗಿ ಸಂಗ್ರಹಕಾರ ಅವರಿಬ್ಬರ ಗ್ರಂಥಗಳಿಂದಲೂ ಕೆಲವು ತಲೆ ಬಾಲ ಕತ್ತರಿಸಿದ ಹೇಳಿಕೆಗಳನ್ನು ಉದ್ಧರಿಸುತ್ತಾ ಅಹ್ಮದೀಯರ ಕುರಿತು ಬಹು ಸಂಖ್ಯಾತ ಮುಸ್ಲಿಮರು ತಪ್ಪು ಭಾವನೆ ತಳೆಯುವಂತೆ ಶ್ರಮಿಸಿದ್ದಾರೆ.

'ಸನ್ಮಾರ್ಗ'ದಲ್ಲಿ ಉದ್ಧರಿಸಲಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರ ಮತ್ತು ಹಝ್ರತ್ ಮಿರ್ಝಾ ಬಶೀರುದ್ದೀನ್ ಸಾಹೇಬರ ಹೇಳಿಕೆಗಳ ಸರಿಯಾದ ರೂಪ ಏನೆಂಬುದನ್ನೂ ಅದನ್ನು ಭಾಷಾಂತರಿಸುವಲ್ಲಿ ಸಂಗ್ರಹಕಾರ ತೋರಿಸಿದ ಕುಯುಕ್ತಿಯನ್ನೂ ವಿವರಿಸುವ ಮೊದಲು 'ಸನ್ಮಾರ್ಗ'ಸಂಪಾದಕರೊಡನೆಯೂ ಮೌದೂದಿ ಪಂಥದವರೊಡನೆಯೂ ನಾನೊಂದು ಪ್ರಶ್ನೆಯನ್ನು ಕೇಳ ಬಯಸುತ್ತೇನೆ. 'ಸನ್ಮಾರ್ಗಿ'ಯರೂ ಮೌದೂದಿಗಳೂ ನಮ್ಮ ಕುರಿತು ಯಾವ ರೀತಿಯ ವಿಶ್ವಾಸ ಹೊಂದಿದ್ದಾರೆ? ಅಹ್ಮದಿಯಾ ಮುಸ್ಲಿಮರಾದ ನಮ್ಮನ್ನು ಮುಸ್ಲಿಮರೆಂದು ನೀವು ನಂಬುತ್ತೀರೋ ಅಥವಾ ಅಮುಸ್ಲಿಮರೆಂದೋ? ಅಹ್ಮದೀಯರು ಮುಸ್ಲಿಮರಲ್ಲವೆಂದು ಅರ್ಥಾತ್ 'ಕಾಫಿರ'ರೆಂದು ನೀವು ನಂಬುವುದಿದ್ದರೆ, "ಮುಸ್ಲಿಮರನ್ನು ಕಾಫಿರ್ ಎಂದು ಹೇಳುವವನು ಸ್ವಯಂ ಕಾಫಿರನಾಗುತ್ತಾನೆ" ಎಂಬ ಮುಹಮ್ಮದ್ ಪೈಗಂಬರರ ವಚನದ ಪ್ರಕಾರ ನೀವು ಯಾವ ವಿಭಾಗಕ್ಕೆ ಸೇರುತ್ತೀರಿ? ಅಹ್ಮದೀಯರು ಮುಸ್ಲಿಮರಲ್ಲವೆಂದು ಫತ್ವಾ(ಮತ ವಿಧಿ)ಗಳನ್ನು ಹೊರಡಿಸಿ. ಮಾತ್ರವಲ್ಲ ಅಹ್ಮದೀಯರನ್ನು ನಮಾಝಿಗಾಗಿ ಮಸೀದಿಗಳಲ್ಲಿ ಪ್ರವೇಶಿಸಲು ಬಿಡಬಾರದೆಂದೂ ಅವರ ಜನಾಝ ನಮಾಝ್ ಮಾಡುವುದಂತೂ ಇರಲಿ, ಮುಸ್ಲಿಂ ಸ್ಮಶಾನದಲ್ಲಿ ಅವರನ್ನು ದಫನ ಮಾಡಲು ಸಹ ಬಿಡಬಾರದೆಂದೂ ಅಹ್ಮದೀಯರೊಡನೆ ಮುಸ್ಲಿಮೇತರರೊಡನೆಯೆಂಬಂತೆ ವರ್ತಿಸಬೇಕೆಂದೂ ಶಕ್ತಿಯುತವಾದ ಫತ್ವಾಗಳನ್ನು ಲೋಕದಲ್ಲೆಲ್ಲಾ ಘೋಷಿಸಿ ಈಗ, ಅಹ್ಮದೀಯರು ನಮ್ಮನ್ನು ಮುಸ್ಲಿಮರಲ್ಲವೆಂದು ಹೇಳುತ್ತಾರೆ ಎಂದು ಬರೆದು ಸಾಮಾನ್ಯರನ್ನು ತಪ್ಪುದಾರಿಗೆಳೆಯುತ್ತಿರುವುದು ಮಹಾ ವಂಚನೆಯಲ್ಲದೆ ಮತ್ತೇನು? ಮುಸ್ಲಿಮರಲ್ಲಿ ಬಹು ಸಂಖ್ಯಾತರಾಗಿರುವ ಸುನ್ನಿ ವಿಭಾಗದವರನ್ನು ಮೌದೂದಿಗಳಾದ ನೀವು ಮುಶ್ರಿಕ್‌ಗಳೆಂದು (ಬಹು ದೈವಾರಾಧಕ)ರೆಂದು ಹೇಳುವುದಿಲ್ಲವೇ?

ಹೀಗೆ, ನಮ್ಮನ್ನು ಕಾಫಿರ್ ಎಂದೂ ಸುನ್ನಿಗಳನ್ನು ಮುಶ್ರಿಕ್ ಎಂದೂ ನಂಬುತ್ತಿರುವ ಈ ಮೌದೂದಿಗಳು "ಅಹ್ಮದೀಯರು ನಮ್ಮನ್ನು ಮುಸ್ಲಿಮರಲ್ಲವೆಂದು ಹೇಳಿದರು." ಎಂಬುದಾಗಿ ಡಂಗುರ ಸಾರಿ ಆಕ್ಷೇಪಿಸುತ್ತಿರುವುದು ನ್ಯಾಯವೇ?

ಹಝ್ರತ್ ಮಿರ್ಝಾ ಸಾಹೇಬರು ತನ್ನಲ್ಲಿ ನಂಬಿಕೆಯಿಡದ ಯಾವ ಮುಸ್ಲಿಮರನ್ನೂ ಮೊದಲಾಗಿ ಮುಸ್ಲಿಮರಲ್ಲವೆಂದು ಹೇಳಿದ್ದಿಲ್ಲ. ಬದಲಾಗಿ ಆ ಪುಣ್ಯಾತ್ಮರನ್ನು ಮುಸ್ಲಿಂ ಮತ ಪಂಡಿತರು 'ಕಾಫಿರ್' ಎಂದೂ 'ಮುರ್ತದ್ದ್' ಎಂದೂ ಇನ್ನೂ ಏನೆಲ್ಲಾ ಅವಾಚ್ಯ ಶಬ್ದಗಳಿಂದ 12 ವರ್ಷಗಳ ಕಾಲ ಆಕ್ಷೇಪಿಸಿ ಫತ್ವಾಗಳನ್ನು ಹೊರಡಿಸಿದರು. ಈ ರೀತಿಯ ಫತ್ವಾಗಳನ್ನು ಮುಸ್ಲಿಂ ಪಂಡಿತರು ಮೇಲಿಂದ ಮೇಲೆ ಬರೆದು ಪ್ರಕಟಿಸುತ್ತಾ ಸಾಮಾನ್ಯ ಮುಸ್ಲಿಮರು ಅದನ್ನು ಸ್ವೀಕರಿಸುತ್ತಾ ಬಂದರು. ಈ ಸಂದರ್ಭದಲ್ಲೆಲ್ಲಾ ಹಝ್ರತ್ ಮಿರ್ಝಾ ಸಾಹೇಬರು ಅವರನ್ನು ಕಾಫಿರ್ ಎಂದು ಹೇಳದೆ "ಮುಸ್ಲಿಮನಾಗಿರುವ ನನ್ನನ್ನು ನೀವು ಕಾಫಿರ್ ಎಂದು

"ಮೊದಲು ನಾವು ಅವರನ್ನು ಕಾಫಿರ್ ಎಂದು ಹೇಳಿದುದಾಗಿ ರುಜುಪಡಿಸಲು ಯಾವ ಮೌಲವಿಗಾಗಲಿ, ನಮ್ಮ ಯಾವ ವಿರೋಧಿಗಾಗಲಿ, ಯಾವ ಶೈಖ್‌ಗಾಗಲಿ ಸಾಧ್ಯವಿದೆಯೇ? ಅವರು ಕುಫ್ರ್ ಪತ್ವಾಗಳನ್ನು ಹೊರಡಿಸುವ ಮೊದಲು ನಾವು ನಮ್ಮ ವಿರೋಧಿಗಳಾದ ಮುಸ್ಲಿಮರನ್ನು ಕಾಫಿರ್ ಎಂದು ಹೇಳಿದುದಾಗಿ ಏನಾದರೂ ಕಾಗದವಾಗಲಿ, ವಿಜ್ಞಾಪನೆಯಾಗಲಿ, ಕಿರುಕೃತಿಯಾಗಲಿ ನಮ್ಮ ಕಡೆಯಿಂದ ಪ್ರಕಟವಾಗಿದ್ದರೆ, ಅದನ್ನು ಅವರು ತೋರಿಸಲಿ! ಅಲ್ಲದಿದ್ದರೆ ಅವರು ಆಲೋಚಿಸಬೇಕಾಗಿದೆ; ಮೊದಲು ಅವರೇ ನಮ್ಮನ್ನು ಕಾಫಿರ್ ಎಂದು ಹೇಳಿ, ನಾವು ಎಲ್ಲಾ ಮುಸ್ಲಿಮರನ್ನು ಕಾಫಿರ್ ಎಂದು ಹೇಳಿದೆವೆಂದು ನಮ್ಮನ್ನು ಆಕ್ಷೇಪಿಸುವುದು ಎಂತಹ ವಂಚನೆಯಾಗಿದೆ."

(ಹಕೀಕತುಲ್ ವಹ್ಯ್–ಪುಟ 120)

—ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

ಕರೆಯು ಬೇಡಿರಿ" ಎಂಬುದಾಗಿ ಹಲವಾರು ವಿಧದಲ್ಲಿ ಹೇಳಿ ನೋಡಿದರು. ಆದರೆ, ಅವರ ಶತ್ರುಗಳ ಫತ್ವಾಗಳು ಮತ್ತೂ ಊರ್ಜಿತಗೊಂಡವು. ಅತ್ಯಂತ ನೀಚವೂ ನಿಕೃಷ್ಟವೂ ಆದ ಶೈಲಿಯಲ್ಲಿ ಆ ಮಹಾತ್ಮರ ಮತ್ತು ಅವರ ಅನುಯಾಯಿಗಳ ಕುರಿತು ಈ ಮತ ಪಂಡಿತರು ವಿಧಿ ಹೊರಡಿಸುತ್ತಲೇ ಇದ್ದರು. ಹೀಗೆ 12 ವರ್ಷಗಳ ಕಾಲ ಆ ಸತ್ಯಾತ್ಮರನ್ನು ಕಾಫಿರ್, ಮುರ್ತದ್ದ್, ಮುಲ್‌ಹಿದ್, ದಜ್ಜಾಲ್, ಶೈತಾನ್, ನಾಸ್ತಿಕ, ಫಿರ್‌ಔನ್, ನಂರೂದ್, "ಮಿರ್ಝಾರ ದೇವರು ಶೈತಾನ್", "ಅವರೂ ಅವರ ಅನುಯಾಯಿಗಳೂ ಕಾಫಿರರೆಂಬುದನ್ನು ಶಂಕಿಸುವವನು ಸಹ ಕಾಫಿರನಾಗುತ್ತಾನೆ", ಅವರೊಡನೆ (ಅಹ್ಮದೀಯರೊಡನೆ) ಮಾತನಾಡಬಾರದು, ಅವರ ಮಯ್ಯಿತ್ ನಮಾಝ್ ಮಾಡಬಾರದು, ಸ್ಮಶಾನದಲ್ಲಿ ದಫನ ಮಾಡಲು ಸ್ಥಳ ನೀಡಬಾರದು ಎಂಬಿತ್ಯಾದಿ ವಿವರಿಸಲಾಧ್ಯವಾದ ರೀತಿಯ ಫತ್ವಾಗಳನ್ನು ಮಿರ್ಝಾ ಸಾಹೇಬರಿಗೆದುರಾಗಿ ವಿರೋಧಿಗಳು ಹೊರಡಿಸಿದರು. ಹನ್ನೆರಡು ವರ್ಷಗಳ ಕಾಲ ಈ ರೀತಿಯ ಫತ್ವಾಗಳನ್ನು ಹೊರಡಿಸಿದ ಹಾಗೂ ಅದನ್ನು ಸ್ವೀಕರಿಸಿದವರ ಕುರಿತು ಹಝ್ರತ್ ಮಿರ್ಝಾ ಸಾಹೇಬರು ಇಸ್ಲಾಂ ಧರ್ಮದ ನಿಯಮ ಪ್ರಕಾರ 'ಕಾಫಿರ್' ಎಂದು ಕರೆದಿದ್ದರೆ, ನೀತಿವಂತರು ಅದನ್ನು ಆಕ್ಷೇಪಾರ್ಹವಾಗಿ ಕಾಣಲಾರರು. "ಮುಸ್ಲಿಮರನ್ನು 'ಕಾಫಿರ್' ಎಂದು ಕರೆದವನು ಸ್ವಯಂ ಕಾಫಿರನಾದನು" ಎಂಬ ಮುಹಮ್ಮದ್ ಪೈಗಂಬರರ ವಚನವನ್ನು 'ಸನ್ಮಾರ್ಗ'ದವರು ಒಪ್ಪುತ್ತಿರಬಹುದು.

ಇದರ ಪ್ರಕಾರ, ತಾವು ಮುಸ್ಲಿಮರೆಂದು ಘೋಷಿಸುವ ಹಝ್ರತ್ ಮಿರ್ಝಾ ಸಾಹೇಬರನ್ನೂ ಅವರ ಅನುಯಾಯಿಗಳನ್ನೂ ಕಾಫಿರ್ ಎಂದು ಫತ್ವಾ ಹೊರಡಿಸಿದ ಪಂಡಿತರೂ ಅದನ್ನು ಸ್ವೀಕರಿಸಿದ ಇತರರೂ ಮುಸ್ಲಿಮರಲ್ಲ ಎಂದು 'ಸನ್ಮಾರ್ಗ'ದವರು ಒಪ್ಪುವುದಿದ್ದರೆ ಮಾತ್ರವೇ ಅವರಿಗೆ, ಮಿರ್ಝಾ ಸಾಹೇಬರು ತನ್ನಲ್ಲಿ ನಂಬಿಕೆಯಿಡದವರನ್ನು ಮುಸ್ಲಿಮರಲ್ಲವೆಂಬುದಾಗಿ ಹೇಳಿರುವುದನ್ನು ಪ್ರಶ್ನಿಸುವ ಹಕ್ಕಿದೆ.

ಮೌದೂದಿ ಸೋದರರೇ, ನೀವು ನಮ್ಮನ್ನು "ಶುದ್ಧ ಕಾಫಿರ್" ಎಂದು ಸರ್ವಾತ್ಮನಾ ನಂಬುತ್ತಿರುವಾಗ, ನಿಮ್ಮನ್ನು "ಏವನ್ ಮುಸ್ಲಿಮ"ರೆಂದು ನಾವು ಕರೆಯಬೇಕಾದುದು ಯಾವ ನಿಮಯದ ಪ್ರಕಾರವೆಂದು ತುಸು ಹೇಳುವಿರಾ? ಮೌದೂದಿಗಳ ಹೊರತು ಇತರ ಎಲ್ಲರೂ ಕಾಫಿರ್ ಮತ್ತು ಮುಶ್ರಿಕ್‌ಗಳೆಂದು ನಂಬುತ್ತಿರುವ ನಿಮಗೆ ನೀತಿ ಪ್ರಜ್ಞೆ ಇರುತ್ತಿದ್ದರೆ ಮಿರ್ಝಾ ಸಾಹೇಬರ ಹೇಳಿಕೆಗಳನ್ನು ನೀವು ಆಕ್ಷೇಪಿಸುತ್ತಿರಲಿಲ್ಲ.

ಸಂಗ್ರಹಕಾರ, ಅಹ್ಮದಿಯಾ ಜಮಾತಿನ ಎರಡನೆಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್ ಸಾಹೇಬರು ಸಹ ಅಹ್ಮದಿಯೇತರರನ್ನು ಮುಸ್ಲಿಮರಲ್ಲವೆಂದು ಕರೆದುದಾಗಿ ತೋರಿಸಲು ಅವರ ಗ್ರಂಥಗಳಿಂದಲೂ ಕೆಲವು ವಾಕ್ಯಗಳನ್ನು ಸೇರಿಸಿದ್ದಾರೆ. ಆದರೆ, ಆ ಹೇಳಿಕೆಗಳ ಅರ್ಥವೇನೆಂಬುದಾಗಿ

ಅವರೇ ಸ್ವತಃ ವಿವರಿಸಿರುವುದನ್ನು ಸಂಗ್ರಹಕಾರರು ಗಮನಿಸದೆ ಇರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕಾರಣ, ಸತ್ಯವನ್ನು ಬಯಲಿಗೆಳೆಯಬೇಕೆಂಬ ಉದ್ದೇಶವು ಅವರಿಗಿಲ್ಲವಲ್ಲ. ಹೇಳಿಕೆಗಳನ್ನು ವಕ್ರವಾಗಿ ಉದ್ಧರಿಸಿ ಜನರನ್ನು ರೊಚ್ಚಿಗೆಬ್ಬಿಸುವುದು ಈ ಜನರ ಉದ್ದೇಶವಾಗಿದ್ದರೆ ಯಾರಿಗೆ ತಾನೆ ಏನು ಮಾಡಲು ಸಾಧ್ಯ ?

"ಮಸೀಹ್ ಮೌಊದರ ಬೈಅತ್ ಮಾಡಿರದವರು-ಅವರು ಹಝ್ರತ್ ಮಸೀಹ್ ಮೌಊದರ ಹೆಸರನ್ನೇ ಕೇಳಿರದಿದ್ದರೂ ಸರಿ, ಕಾಫಿರರೂ ಇಸ್ಲಾಂ ವೃತ್ತದಿಂದ ಹೊರಗಿನವರೂ ಆಗಿದ್ದಾರೆ" ಎಂದು ಅವರು ಹೇಳಿರುವುದರ ತಾತ್ಪರ್ಯ, ಅಂಥವರು ಪೂರ್ಣ ಅರ್ಥದಲ್ಲಿ ಮುಸ್ಲಿಮರಲ್ಲವೆಂದು ಮಾತ್ರವಾಗಿದೆ. ಕಾಫಿರ್ ಎಂಬ ಪದದ ಅರ್ಥವನ್ನು ಮೌದೂದಿಗಳಿಗೆ ನಾನು ವಿವರಿಸಿ ಹೇಳಬೇಕಾದ ಅಗತ್ಯವುಂಟೆಂದು ತೋರುವುದಿಲ್ಲ. ಕಾಫಿರ್ ಎಂದರೆ ನಂಬದವರು ಎಂದು ಅರ್ಥ. ನಂಬದೆ ಇರುವವರು – ಅವರು ತಿಳಿದು ನಂಬದಿರಲಿ, ತಿಳಿಯದೆ ನಂಬದಿರಲಿ – ಕಾಫಿರ್ ಅಥವಾ 'ನಂಬದವರು' ಆಗುತ್ತಾರೆ. ಹಝ್ರತ್ ಮಿರ್ಝಾ ಸಾಹೇಬರಲ್ಲಿ ನಂಬಿಕೆಯಿಡದವರನ್ನು "ನಂಬಿದವರು" ಎಂದು ಕರೆಯಬೇಕೆಂಬ ಮೌದೂದಿ ಸಿದ್ಧಾಂತವು ನಮಗೆ ಅರ್ಥವಾಗುವುದಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರ ಹೆಸರನ್ನು ಸಹ ಕೇಳಿರದ ಕೋಟಿಗಟ್ಟಲೆ ಮನುಷ್ಯರು ಈ ಲೋಕದಲ್ಲಿದ್ದಾರೆ. ಅವರೆಲ್ಲರನ್ನು ಮುಅ್‌ಮಿನ್ ಮತ್ತು ಮುಸ್ಲಿಂ ಎಂದು ಈ ಮೌದೂದಿಗಳು ನಂಬುತ್ತಾರೆಯೇ? ಇಲ್ಲವಾದರೆ ಮತ್ತೆ, ಅವರನ್ನು 'ಕಾಫಿರ್' ಎಂದು ಕರೆಯುವುದು 'ನಂಬದವರು' ಎಂಬ ಅರ್ಥದಲ್ಲಿ ಮಾತ್ರವಲ್ಲವೇ? ಇಸ್ಲಾಂ ವೃತ್ತದಿಂದ ಹೊರಗಿನವರು ಎಂದು ಅವರು ಹೇಳಿರುವುದು ಇಸ್ಲಾಂ ಅಥವಾ 'ಅಲ್ಲಾಹುವಿಗೆ ಸಂಪೂರ್ಣವಾಗಿ ತಲೆಬಾಗು' ಎಂಬ ವೃತ್ತದಿಂದ ಹೊರಗಿನವರು ಎಂಬ ಅರ್ಥದಲ್ಲಾಗಿದೆ. ಹಝ್ರತ್ ಮಸೀಹ್ ಮೌಊದರಾಗಲಿ ಅಥವಾ ಅಹ್ಮದಿಯಾ ಜಮಾತಿನ ಎರಡನೆಯ ಖಲೀಫರಾಗಲಿ ಇತರ ಮುಸ್ಲಿಮರ ಕುರಿತು ಮುಸ್ಲಿಮರಲ್ಲವೆಂದು ಅವರ ಗ್ರಂಥಗಳಲ್ಲಿ ಕೆಲವೆಡೆ ಬರೆದಿರುವುದು ಅವರು ಸಂಪೂರ್ಣ ರೀತಿಯ ಮುಸ್ಲಿಮರಲ್ಲವೆಂಬ ಅರ್ಥದಲ್ಲಿ ಎಂದು ನಿರೂಪಿಸುವ ವಿವರಣೆಗಳನ್ನು ಅವರ ಗ್ರಂಥಗಳಿಂದಲೇ ಧಾರಾಳವಾಗಿ ತೆಗೆದು ತೋರಿಸಬಹುದು. ಅವರು ಅಹ್ಮದಿಯೇತರ ಮುಸ್ಲಿಮರ ಕುರಿತು "ಮುಹಮ್ಮದ್‌ಪೈಗಂಬರರ ಉಮ್ಮತ್" ಎಂದೇ ಪ್ರಸ್ತಾಪಿಸಿರುವರು. ಅವರ ಗ್ರಂಥಗಳಲ್ಲೂ, ಭಾಷಣಗಳಲ್ಲೂ ಇತರ ಮುಸ್ಲಿಮರನ್ನು "ಮುಸ್ಲಿಮರು" ಎಂದೇ ಹೇಳಿರುವುದಾಗಿ ಕಾಣಬಹುದು. ಸ್ಥಳಾಭಾವದಿಂದ ಉದ್ಧಾರಣೆಗಳನ್ನು ನಾನಿಲ್ಲಿ ಸೇರಿಸುವುದಿಲ್ಲ. ಅವರಿಬ್ಬರ ಗ್ರಂಥಗಳನ್ನು ಮನಸ್ಸಿಟ್ಟು ಪಠಿಸುವ ಯಾರಿಗೂ ಇದನ್ನು ಸುಲಭದಲ್ಲೇ ಗ್ರಹಿಸಲು ಸಾಧ್ಯವಿದೆ. ಆದರೆ, ಸೂರ್ಯ ಪ್ರಕಾಶದಂತಹ ದೃಷ್ಟಾಂತಗಳ ಮುಂದೆ ಕಣ್ಣು ಮುಚ್ಚಿ ಕತ್ತಲೆ ಮಾಡುವ ಮೌದೂದಿಗಳಿಗೆ ಇದನ್ನೆಲ್ಲಾ ತಿಳಿಯಲು ಸಮಯವೆಲ್ಲಿದೆ. ಮೌದೂದಿಗಳೂ ಸೇರಿದಂತೆ ಇತರ ಮುಸ್ಲಿಂ ವಿಭಾಗದವರು ನಮ್ಮ ಕುರಿತು ಪ್ರಾರಂಭದಿಂದಲೇ ನಂಬುತ್ತಿರುವುದು, ನಾವು ನಿತ್ಯ ನರಕ ವಾಸಿಗಳಾದ ಕಾಫಿರ್ ಮತ್ತು ಮುರ್ತದ್ದ್ ಗಳಾಗಿದ್ದೇವೆ ಎಂದು. ಅಹ್ಮದೀಯರಾದ ನಾವು ಕೇವಲ ಬಲಹೀನ ಅಲ್ಪಸಂಖ್ಯಾತರಾಗಿರುವುದರಿಂದ ನಮ್ಮ ಕುರಿತು ಇವರಿಗೆ ಹಾಗೆ ಹೇಳಬಹುದು. ಆಗರೆ, ಈ ರೀತಿ ಹೇಳುವವರ ಕುರಿತು ನಾವು ಮಾತ್ರ ಏನನ್ನೂ ಹೇಳಬಾರದು. ನಾವು ಇವರನ್ನು ಪ್ರಥಮ ದರ್ಜೆಯ ಮುಸ್ಲಿಮರೆಂದೇ ಹೇಳಬೇಕೆಂಬುದು ಈ ಮೌದೂದಿಗಳ ಅಭಿಲಾಷೆಯಾಗಿರಬಹುದು. ನೀತಿಯ ಮಾನದಂಡ ಎಲ್ಲರಿಗೂ ಒಂದೇ ಎಂಬುದನ್ನು ಇವರು ಮರೆತಿದ್ದಾರೆ. ಅಹ್ಮದಿಯರಿಗೆದುರಾಗಿ ಇವರು ಏನು ಬೇಕಾದರೂ ಹೇಳಬಹುದು, ಆಕ್ಷೇಪಿಸಬಹುದು. ಅಹ್ಮದೀಯರಿಗೆ ಇವರ ಕುರಿತು ಏನನ್ನೂ ಹೇಳುವ ಅವಕಾಶವಿಲ್ಲ! "ಯಾವುದೇ ಪಂಗಡದವರೊಡನೆ ನಿಮಗಿರುವ ದ್ವೇಷವು ಅವರೊಡನೆ ಅನೀತಿಯಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ" ಎಂಬ ಖುರ್‌ಆನಿನ ಆಜ್ಞೆಯನ್ನು ಈ ಮೌದೂದಿಗಳು ಧಿಕ್ಕರಿಸುತ್ತಿದ್ದಾರೆ.

ಅಹ್ಮದಿಯಾ ಸಂಘಟನೆಗೆದುರಾಗಿ 'ಸನ್ಮಾರ್ಗ'ದ ಸಂಗ್ರಹಕಾರರು ಬರೆದಿರುವ ಇನ್ನೊಂದು ಕಠೋರವಾದ ಆಕ್ಷೇಪವು ಹಝ್ರತ್ ಮಿರ್ಝಾ ಸಾಹೇಬರ "ಆಈನಯೇ ಕಮಾಲಾತೇ ಇಸ್ಲಾಂ" ಎಂಬ ಗ್ರಂಥದ 547ನೇ ಪುಟದಲ್ಲಿ ಬರೆಯಲಾದ ಭಾಗವಾಗಿದೆ. ಸಂಗ್ರಹಕಾರನ ಭಾಷಾಂತರ ಈ ರೀತಿಯಿದೆ:

"ಹಡಬೆಗಳ ಮತ್ತು ವ್ಯಭಿಚಾರಿಣಿಗಳ ಸಂತತಿಗಳ ಹೊರತುಪಡಿಸಿ ಎಲ್ಲ ಮುಸಲ್ಮಾನರೂ ನನ್ನನ್ನು ಸ್ವೀಕರಿ

ಸಿದ್ದಾರೆ, ಮತ್ತು ನನ್ನ ಕರೆಯನ್ನು ದೃಢೀಕರಿಸಿದ್ದಾರೆ." ಹಾಗೆ ಮಿರ್ಝಾ ಸಾಹೇಬರು ಬರೆದಿರುವರಂತೆ.

ಹಝ್ರತ್ ಮಿರ್ಝಾ ಸಾಹೇಬರು ಒಬ್ಬ ಮನುಷ್ಯರಾಗಿದ್ದಾರೆ. ಆರೋಪಿಸಿರುವಂತೆಯೇ ಅವರು ಬರೆದಿದ್ದಾರೆ ಎಂದು ಸಂಕಲ್ಪಿಸುವುದಿದ್ದರೂ ಸಹ, ಶತ್ರುಗಳು ಅವರನ್ನು ಅತ್ಯಂತ ನೀಚವೂ ನಿಷ್ಠುರವೂ ಆದ ರೀತಿಯಲ್ಲಿ ನಿರಂತರವಾಗಿ ಆಕ್ಷೇಪಿಸುತ್ತಲೇ ಇದ್ದುದರಿಂದ ಮನೋವೇದನೆಯಿಂದಲೂ ಕ್ಷೋಭೆಯಿಂದಲೂ ಅವರು ಆ ರೀತಿ ಹೇಳಿದರೆಂದು ಸಮಾಧಾನ ಪಡಬಹುದು. ಹಝ್ರತ್ ನೂಹ್ (ಅ), ಹಝ್ರತ್ ಮೂಸಾ (ಅ) ಮೊದಲಾದ ಪ್ರವಾದಿಗಳು ಹೆಚ್ಚಿನ ಕೋಪವೂ ಕ್ಷೋಭವೂ ಇರುವವರಾಗಿದ್ದರೆಂದು ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳಿಂದ ತಿಳಿದು ಬರುತ್ತದೆ. ಆದರೆ, ಪವಿತ್ರ ಖುರ್‌ಆನ್, ಕೋಪ ರೋಷಾದಿ ವಿಕಾರಗಳಿಂದ ವಿಮುಕ್ತನಾಗಿರುವ ಅಲ್ಲಾಹುವಿನ ವಚನವಷ್ಟೇ. ಹಾಗಿದ್ದೂ ಹಝ್ರತ್ ಮಿರ್ಝಾ ಸಾಹೇಬರು ತನ್ನ ಎದುರಾಳಿಗಳ ಕುರಿತು ಉಪಯೋಗಿಸಿದರೆಂದು ಇವರು ಆರೋಪಿಸುವ ಪದಗಳಿಗಿಂತಲೂ ಕಠೋರವಾದ ಪದಗಳು ಮುಸ್ಲಿಮರಲ್ಲದವರ ಕುರಿತು ಆ ಪವಿತ್ರ ಗ್ರಂಥದಲ್ಲಿ ಪ್ರಯೋಗಿಸಲ್ಪಟ್ಟಿವೆ. ಉದಾಹರಣೆಗೆ, ಇಸ್ಲಾಂ ಧರ್ಮದಲ್ಲಿ ವಿಶ್ವಾಸವಿಡದ ಯಹೂದಿ-ನಸಾರಾಗಳ ಕುರಿತೂ ಮುಶ್ರಿಕ್‌ಗಳ ಕುರಿತೂ "ಉಲಾಯಿಕ ಹುಂ ಶರ್‍ರುಲ್ ಬರಿಯ್ಯ" (ಸೃಷ್ಟಿ ಜಾಲಗಳಲ್ಲಿ ಅತ್ಯಂತ ನಿಕೃಷ್ಟರೂ ದ್ರೋಹಿಗಳೂ ಅವರೇ ಆಗಿದ್ದಾರೆ) ಎಂದು ಖುರ್‌ಆನ್ ಹೇಳುತ್ತದೆ. ಹಾಗಿರುವಾಗ, ಅವರು ನಾಯಿ, ಹಂದಿ ಮೊದಲಾದವುಗಳಿಗಿಂತಲೂ ನಿಕೃಷ್ಟರೂ ದ್ರೋಹಕಾರಿಗಳೂ ಆಗಿದ್ದಾರೆಂದು ಅರ್ಥವಾಗುತ್ತದೆ. ಹಡಬೆಗಳ ಅಥವಾ ವ್ಯಭಿಚಾರಿಣಿಗಳ ಸಂತಾನಗಳು ಏನಿದ್ದರೂ ಮನುಷ್ಯರೇ ಅಲ್ಲವೇ? ಅವರಲ್ಲಿ ಸಜ್ಜನರೂ ಮಹಾತ್ಮರೂ ಕೂಡಾ ಇರಬಹುದು. ಆದುದರಿಂದ 'ವ್ಯಭಿಚಾರ ಸಂತಾನ' ಎಂದು ಹೇಳುವುದಕ್ಕಿಂತಲೂ "ಶರ್‍ರುಲ್ ಬರಿಯ್ಯ" ಎಂದು ಹೇಳುವುದು ಹೆಚ್ಚಿನ ಆರೋಪಕ್ಕೆ ಗುರಿಯಾಗುವುದಿಲ್ಲವೇ? ಖುರ್‌ಆನಿನಲ್ಲಿ ನಂಬಿಕೆಯಿಡದವರ ಕುರಿತು ಅಂಥವರು ದ್ರೋಹಿಗಳು, ಅಕ್ರಮಿಗಳು, ದುಷ್ಟರು ಎಂದು ಖುರ್‌ಆನಿನ ಹಲವೆಡೆಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಮಾತ್ರವಲ್ಲ, "ಪರಮಾತ್ಮನ ದೃಷ್ಟಿಯಲ್ಲಿ ಅತ್ಯಂತ ನಿಕೃಷ್ಟರೂ ದ್ರೋಹಿಗಳೂ ಅವಿಶ್ವಾಸಿಗಳಾಗಿದ್ದಾರೆ" ಎಂದೂ "ಅವರು ಜಾನುವಾರುಗಳಿಗಿಂತಲೂ ಕೀಳಾದವರೆ"ಂದೂ ಹಂದಿಗಳೆಂದೂ ಮಂಗಗಳೆಂದೂ ಪವಿತ್ರ ಖುರ್‌ಆನಿನಲ್ಲಿ ಹೇಳಲ್ಪಟ್ಟಿದೆ. ಮಾತ್ರವಲ್ಲ, ಕಾಫಿರರ ಕುರಿತು 'ವ್ಯಭಿಚಾರ ಸಂತತಿ' ಎಂದು ಸಹ ಅದರಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. (68:14)

ಮೌದೂದಿ ಧರ್ಮದವರಾಗಲಿ ಅವರ 'ಸನ್ಮಾರ್ಗ' ಪತ್ರಿಕೆಯಾಗಲಿ ಅದರ ಸಂಗ್ರಹಕಾರ ಎ. ಆರ್. ಅಹ್ಮದರೇ ಆಗಲಿ ಪವಿತ್ರ ಖುರ್‌ಆನಿನ ಮೇಲಿನ ಹೇಳಿಕೆಗಳಿಂದ ಉದ್ಭವಿಸುವ ಆಕ್ಷೇಪಗಳಿಗೆ ಮೊದಲಾಗಿ ಉತ್ತರವನ್ನು ನೀಡಲಿ. ಆ ನಂತರ ಅವರು ಹಝ್ರತ್ ಮಿರ್ಝಾ ಸಾಹೇಬರನ್ನು ಆಕ್ಷೇಪಿಸಿದರೆ ಸಾಕು. ಹಾಗಾದಲ್ಲಿ ಪವಿತ್ರ ಖುರ್‌ಆನಿನ ಕುರಿತು ವಿರೋಧಿಗಳು ಆರೋಪಿಸುತ್ತಿರುವುದರ ನಿಜರೂಪವು ವಾಚಕರಿಗೆ ತಿಳಿದಂತಾಗುವುದು. ಪವಿತ್ರ ಖುರ್‌ಆನಿಗೆದುರಾಗಿ ಉದ್ಭವಿಸುವ ಮೇಲಿನ ಆರೋಪಗಳಿಗೆ ಇವರಲ್ಲದಿದ್ದರೆ ಇವರ ಮೌದೂದಿ ಮತ ಪಂಡಿತರು ಸಮಂಜಸ ಉತ್ತರವನ್ನು ನೀಡಿ ತಮ್ಮ "ಖುರ್‌ಆನ್ ಸ್ನೇಹ"ವನ್ನು ಬಹಿರಂಗಪಡಿಸಿಕೊಳ್ಳಲಿ.

ಇನ್ನು, ಹಝ್ರತ್ ಮಿರ್ಝಾ ಸಾಹೇಬರ ಆ ಹೇಳಿಕೆಯ ಕುರಿತು ನೋಡುವ. ಸಂಗ್ರಹಕಾರ 'ಸನ್ಮಾರ್ಗ'ದಲ್ಲಿ ಸೇರಿಸಿರುವ ಅರಬಿ ಭಾಷೆಯ ಆ ಉದ್ಧಾರಣೆಯನ್ನು ವಾಚಕರನ್ನು ಮೋಸಗೊಳಿಸುವ ರೂಪದಲ್ಲಿ ಭಾಷಾಂತರಿಸಿದ್ದಾರೆ. ಆದರ ಸರಿಯಾದ ಅರ್ಥ ಈ ರೀತಿಯಿದೆ:

"ನನ್ನ ಆ ಗ್ರಂಥಗಳನ್ನು ಎಲ್ಲ ಮುಸಲ್ಮಾನರೂ ಸ್ನೇಹದೃಷ್ಟಿಯಿಂದ ನೋಡುತ್ತಾರೆ; ಅವುಗಳಲ್ಲಿರುವ ಜ್ಞಾನದಿಂದ ಫಲವನ್ನನುಭವಿಸುತ್ತಾರೆ; ನನ್ನನ್ನು ಅನುಮೋದಿಸುತ್ತಾರೆ; ಮತ್ತು ನನ್ನ ಕರೆಯನ್ನು ಸತ್ಯಪಡಿಸುತ್ತಾರೆ; ದುರ್‍ರಿಯತುಲ್ ಬಗಾಯಾ ಹೊರತು."*

---

* "ನನ್ನ ಆ ಗ್ರಂಥಗಳು" ಎಂದು ಮಿರ್ಝಾ ಸಾಹೇಬರು ಹೇಳಿರುವುದು, ಅವರು ಬರೆದ "ಬರಾಹಿನೆ ಅಹ್ಮದಿಯಾ" ಮತ್ತು "ಸುರ್‌ಮ ಚೆಶ್‌ಮ ಆರಿಯಾ" ಎಂಬ ಗ್ರಂಥಗಳ ಕುರಿತು. ಈ ಗ್ರಂಥಗಳಲ್ಲಿ ಇಸ್ಲಾಂ ಧರ್ಮಕ್ಕೆದುರಾಗಿ ವಿರೋಧಿಗಳು ಆರೋಪಿಸಿರುವ ಆಕ್ಷೇಪಗಳಿಗೆ ವಿವರವಾದ ಉತ್ತರವನ್ನು ನೀಡಲಾಗಿದೆ. ಇಸ್ಲಾಂ ಧರ್ಮದ ಸತ್ಯತೆಯನ್ನು ದೃಷ್ಟಾಂತಗಳ ಸಹಿತ ವಿವರಿಸಿ ಅವರನ್ನು ಪವಿತ್ರ ಇಸ್ಲಾಂ ಧರ್ಮದೆಡೆ ಆಹ್ವಾನಿಸಲಾಗಿದೆ.

—ಲೇಖಕ.

'ದುರ್ರಿಯತುಲ್ ಬಗಾಯಾ' ಎಂಬುದರ ಅರ್ಥವು ವ್ಯಭಿಚಾರದಿಂದ ಜನಿಸಿದವನು ಎಂದಲ್ಲ. ಮಾತ್ರವಲ್ಲ ಅದು ತನ್ನಲ್ಲಿ ವಿಶ್ವಾಸವಿಡದ ಮುಸ್ಲಿಮರ ಕುರಿತು ಹೇಳಿದ್ದೂ ಅಲ್ಲ. ಆ ಪದದ ಅರ್ಥವು ನೀತಿಯೂ ಮರ್ಯಾದೆಯೂ ಅನುಸರಣೆಯೂ ಇಲ್ಲದವರು ಎಂದಾಗಿದೆ. ಒಬ್ಬ ವ್ಯಕ್ತಿಯ ಕುರಿತು "ಹುವ ಇಬ್ನು ಬಗಿಯಾ" ಎಂದು ಹೇಳಿದರೆ ಅದರ ಅರ್ಥ ನೀತಿಯೂ ಸಾತ್ವಿಕತೆಯೂ ಇಲ್ಲದವನು ಎಂಬುದಾಗಿ "ತಾಜುಲ್ ಅರೂಸ್" ಎಂಬ ಪ್ರಸಿದ್ಧ ಅರಬಿ ಶಬ್ದಕೋಶದಲ್ಲಿ ವಿವರಿಸಲಾಗಿದೆ. ಸ್ವತಃ ಮಿರ್ಝಾ ಸಾಹೇಬರೇ "ಇಬ್ನು ಬಗಾಅ" ಎಂಬುದರ ಅರ್ಥವನ್ನು 'ಸರ್ಕಶ್ ಇನ್ಸಾನ್' (ಅಕ್ರಮಿಯೂ ಧಿಕ್ಕಾರಿಯೂ ಆದ ವ್ಯಕ್ತಿ) ಎಂದು ವಿವರಿಸಿದ್ದಾರೆ. (ಅಲ್ ಹಕಂ 24-2-1907).

ದುರ್ರಿಯತುಲ್ ಬಗಾಯಾ ಎಂದು ಹೇಳಿರುವುದನ್ನು ಮುಂದುವರಿಸಿ ಹಝ್ರತ್ ಮಿರ್ಝಾ ಸಾಹೇಬರು ಬರೆದಿರುವ ಒಂದು ವಾಕ್ಯವನ್ನು ಸಹ ನಮ್ಮ ಸಂಗ್ರಹಕಾರರು ಸೇರಿಸಿರುತ್ತಿದ್ದರೆ ಆ ಶಬ್ದದಿಂದ ಮಿರ್ಝಾ ಸಾಹೇಬರು ಉದ್ದೇಶಿಸಿದ ಅರ್ಥವೇನೆಂಬುದು ವಾಚಕರಿಗೆ ಮನವರಿಕೆಯಾಗುತ್ತಿತ್ತು. ಅದನ್ನು ಮುಂದುವರಿಸಿಯೇ ಹಝ್ರತ್ ಮಿರ್ಝಾ ಸಾಹೇಬರು ಬರೆದ ವಾಕ್ಯ ಈ ರೀತಿಯಿದೆ :

"ಅಲ್ಲದೀನ ಖತಮಲ್ಲಾಹು ಅಲಾ ಖಲೂಬಿಹಿಂ, ಫಹುಂ ಲಾ ಯುಖ್‌ಬಲೂನ್" (ದುರ್ರಿಯತುಲ್ ಬಗಾಯಾ ಅಂದರೆ, ಯಾರ ಹೃದಯಗಳಲ್ಲಿ ಅಲ್ಲಾಹು ಮುದ್ರೆಯೊತ್ತಿರುವನೋ ಅವರು; ಅಂಥವರು ಸತ್ಯವನ್ನು ಸ್ವೀಕರಿಸುವುದಿಲ್ಲ). ಹೃದಯದಲ್ಲಿ ಮುದ್ರೆಯೊತ್ತಲ್ಪಟ್ಟವರು ಎಂಬುದರ ತಾತ್ಪರ್ಯ ಸತ್ಯವನ್ನು ಧಿಕ್ಕಾರದಿಂದ ತಿರಸ್ಕರಿಸುವವರು ಎಂದಲ್ಲವೇ. ಆಗ ದುರ್ರಿಯತುಲ್ ಬಗಾಯಾ ಎಂದರೆ ಅಂಥವರೆಂದು ಸ್ಪಷ್ಟವಾಗುತ್ತದೆ. ನೋಡಿರಿ! ನಮ್ಮ ಸಂಗ್ರಹಕಾರನ ಅರ್ಥವೆಲ್ಲಿ. ಗ್ರಂಥಕಾರ ಸ್ವಯಂ ಉದ್ದೇಶಿಸಿರುವ ಅರ್ಥವೆಲ್ಲಿ! ಹೀಗೆ, ಈ ವಾಕ್ಯದ ಅರ್ಥವು 'ವ್ಯಭಿಚಾರ ಸಂತತಿಗಳು' ಎಂದಲ್ಲವೆಂಬುದಾಗಿ ನಂತರದ ವಾಕ್ಯದಿಂದಲೂ ಅರಬಿ ಭಾಷೆಯ ಉಪಯೋಗದಿಂದಲೂ ಹಝ್ರತ್ ಮಿರ್ಝಾ ಸಾಹೇಬರ ನಿರೂಪಣೆಯಿಂದಲೂ ಸ್ಪಷ್ಟವಾಗಿ ತಿಳಿದು ಬರುತ್ತಿರುವಾಗ, ಅದರ ಅರ್ಥ "ಹಡಬೆಗಳ ಮತ್ತು ವ್ಯಭಿಚಾರಿಣಿಗಳ ಸಂತಾನ" ಎಂದು ಮೊಂಡು ಹಿಡಿದು ತರ್ಕಿಸುತ್ತಾ ಆ ಪುಣ್ಯಾತ್ಮರನ್ನು ಆಕ್ಷೇಪಿಸುವುದು ನೀತಿವಂತರಿಗೆ ಸೇರಿದ್ದಲ್ಲ.

ಮಾತ್ರವಲ್ಲ, ಮೌದೂದಿಗಳ ಈ ಆಕ್ಷೇಪವು ಸರಿಯಾದುದಾದರೆ, ಮಿರ್ಝಾ ಸಾಹೇಬರು ಮಾತ್ರವಲ್ಲ ಇತರ ಅನೇಕ ಮಹಾತ್ಮರೂ ಇಂತಹ ಆಕ್ಷೇಪಕ್ಕೆ ಗುರಿಯಾಗುತ್ತಾರೆ. ಉದಾಹರಣೆಗೆ, ಎಲ್ಲ ಮುಸ್ಲಿಂ ವಿಭಾಗದವರೂ ಆದರಿಸುತ್ತಿರುವ ಹಝ್ರತ್ ಇಮಾಂ ಬಾಖಿರ್ (ರ) ಅವರು ಈ ರೀತಿ ಬರೆದಿದ್ದಾರೆ:

"ನಮ್ಮ ಪಂಗಡದವರ ಹೊರತು ಇತರ ಎಲ್ಲರೂ 'ಔಲಾದುಲ್ ಬಗಿಯಾ' ಆಗಿದ್ದಾರೆ." (ಫುರೂಉಲ್ ಕಾಫಿ ಪುಟ 135) ಅಂದರೆ ಎ. ಆರ್. ಅಹ್ಮದರ ಅನುವಾದ ಪ್ರಕಾರ 'ಹಡಬೆಗಳ ಮತ್ತು ವ್ಯಭಿಚಾರಿಣಿಗಳ ಸಂತಾನ'! ಹಝ್ರತ್ ಇಮಾಂ ಜಅಫರ್ ಸಾದಿಕ್ (ರ), ಹಝ್ರತ್ ಇಮಾಂ ಅಬೂ ಹನೀಫ (ರ) ಮೊದಲಾದ ಮಹಾತ್ಮರೂ ಸಹ ಇಂತಹ ಪದಗಳನ್ನು ಪ್ರಯೋಗಿಸಿರುತ್ತಾರೆ. ವಿಸ್ತಾರ ಭಯದಿಂದ ಉದ್ಧಾರಣೆಗಳನ್ನು ಸೇರಿಸುವುದಿಲ್ಲ. ಹಝ್ರತ್ ಇಮಾಂ ಬಾಖಿರ್ (ರ)ರವರ ಮೇಲಿನ ಹೇಳಿಕೆಯ ಕುರಿತು ಲಾಹೋರಿನಿಂದ ಹೊರಡುವ "ಮುಜಾಹಿದ್" ಎಂಬ ಉರ್ದು ಪತ್ರಿಕೆಯು ನೀಡಿದ ವಿವರಣೆ ಹೀಗಿದೆ :

"ವಲದುಲ್ ಬಗಾಯಾ (ವ್ಯಭಿಚಾರ ಸಂತತಿ), ಇಬ್ನುಲ್ ಹರಾಂ (ಹಡಬೆಯ ಮಗ) ಮೊದಲಾದ ಪ್ರಯೋಗ ಶೈಲಿಯು ಅರಬ್ ದೇಶದಲ್ಲೂ ಇತರ ರಾಜ್ಯಗಳಲ್ಲೂ ಸಾಮಾನ್ಯ ವಾಡಿಕೆಯಲ್ಲಿರುವ ಒಂದು ಪ್ರಯೋಗವಾಗಿದೆ. ಸತ್ಕರ್ಮವನ್ನು ತ್ಯಜಿಸಿ, ದುಷ್ಕರ್ಮವನ್ನು ಕೈಗೊಂಡಿರುವ ವ್ಯಕ್ತಿಗಳ ಕುರಿತು, ಅವರ ಜನನವೂ ವಂಶಾವಳಿಯೂ ಒಳ್ಳೆಯದೇ ಆಗಿದ್ದರೂ ಸಹ, ವಲದುಲ್ ಹರಾಂ, ಇಬ್ನುಲ್ ಹರಾಂ ಎಂದೆಲ್ಲಾ ಕರೆಯಲ್ಪಡುತ್ತದೆ. ಆದುದರಿಂದ ಇಮಾಂ ಬಾಖಿರ್(ರ) ರವರು ತನ್ನ ಎದುರಾಳಿಗಳ ಕುರಿತು ಔಲಾದುಲ್ ಬಗಾಯಾ ಎಂದು ಹೇಳಿರುವುದರಲ್ಲಿ ಆಕ್ಷೇಪಾರ್ಹವಾಗಿ ಏನೂ ಇಲ್ಲ" (ಮುಜಾಹಿದ್ 4-3-1936)

ಸಂಕ್ಷಿಪ್ತವಾಗಿ, ಮೇಲೆ ಹೇಳಿದ ಮೂವರು ಮಹಾತ್ಮರಾದ ಇಮಾಂಗಳ ಹೇಳಿಕೆಗಳಿಂದಲೂ 'ಮುಜಾಹಿದ್' ಪತ್ರಿಕೆಯ ವಿವರಣೆಯಿಂದಲೂ 'ದುರ್ರಿಯತುಲ್ ಬಗಾ..

ಯಾ' ಎಂಬ ಪ್ರಯೋಗಕ್ಕೆ ವ್ಯಭಿಚಾರದಿಂದ ಜನಿಸಿದವನು ಎಂಬ ಅರ್ಥ ಇಲ್ಲವೆಂದೂ ಬದಲಾಗಿ ಧಿಕ್ಕಾರಿ, ಅಸಭ್ಯ, ದುಷ್ಕರ್ಮಿ ಎಂಬಿತ್ಯಾದಿ ಅರ್ಥವೆಂದೂ ವ್ಯಕ್ತವಾಗುತ್ತದೆ. ಹಝ್ರತ್ ಮಿರ್ಝಾ ಸಾಹೇಬರು ಉದ್ದೇಶಿಸಿರುವ ಅರ್ಥವೂ ಇದೇ ಆಗಿದೆ. ಮಾತ್ರವಲ್ಲ, ಇದೇ ರೀತಿಯ ಪ್ರಯೋಗವು ಇತರ ಭಾಷೆಗಳಲ್ಲಿ, ನಮ್ಮ ಕನ್ನಡ ಭಾಷೆಯಲ್ಲಿ ಸಹ ಇದೆ. ಕೆಲವರು ತಮ್ಮ ಸ್ವಂತ ಮಕ್ಕಳನ್ನೇ ಅವರು ತುಂಟತನ ತೋರಿಸುವಾಗ, ಹಡಬೆಗೆ ಹುಟ್ಟಿದವನು ಹಾದರೆಗೆ ಹುಟ್ಟಿದವನು ಎಂದು ಹೇಳುವುದಿದೆ. ನಮ್ಮ ರಾಜ್ಯದ ಮುಸ್ಲಿಮರೆಡೆಯಲ್ಲಿ 'ಹರಾಂ ಕಾ ಬೇಟಾ' ಎಂಬ ಪ್ರಯೋಗವು ಸರ್ವ ಸಾಮಾನ್ಯವಾಗಿದೆ. ಈ ರೀತಿ ಹೇಳುವುದರ ಅರ್ಥವು ಆ ಹೇಳಲ್ಪಟ್ಟ ವ್ಯಕ್ತಿ ವ್ಯಭಿಚಾರದಿಂದ ಜನಿಸಿದವನು ಎಂಬುದಾಗಿ, ಹೇಳಿದವನೋ ಕೇಳುವವರೋ ಯಾರೂ ಸಹ ಅರ್ಥ ಮಾಡುವುದಿಲ್ಲ. ಆದುದರಿಂದ 'ದುರ್‍ರಿಯತುಲ್ ಬಗಾಯಾ' ಎಂಬ ಪದಕ್ಕೆ ಸಂಗ್ರಹಕಾರ ಕೊಟ್ಟಿರುವ ಭಾಷಾಂತರ, ಆ ಪದಕ್ಕೆ ಇಲ್ಲದ ತಪ್ಪು ಅರ್ಥವೂ ಆ ಜಾಗದಲ್ಲಿ ಹೊಂದಿಕೊಳ್ಳದ ಅರ್ಥವೂ ಗ್ರಂಥ ಕರ್ತರು ಉದ್ದೇಶಿಸಿಲ್ಲದ ಅರ್ಥವೂ ಆಗಿದೆ.

ಹಝ್ರತ್ ಮಿರ್ಝಾ ಸಾಹೇಬರು 'ಆಈನಯೇ ಕಮಾಲಾತೆ ಇಸ್ಲಾಂ' ಎಂಬ ಗ್ರಂಥವನ್ನು ಬರೆದ ಕಾಲದಲ್ಲಿ (1893) ತನ್ನ ಎದುರಾಳಿಗಳಾದ ಮುಸ್ಲಿಮರನ್ನು ಕಾಫಿರ್ ಎಂದು ಕರೆದಿರಲಿಲ್ಲ. ಅವರನ್ನು ಅನುಸರಿಸಿ ನಮಾಝ್ ಮಾಡಬಾರದೆಂದು ಸಹ ತನ್ನ ಶಿಷ್ಯರೊಡನೆ ಹೇಳಿರಲಿಲ್ಲ. ಬದಲಾಗಿ, ಎಲ್ಲ ವಿಷಯಗಳಲ್ಲೂ ಇತರ ಮುಸ್ಲಿಮರೊಡನೆ ಸಹಕರಿಸಿ ಅವರೊಡನೆ ಸಹ ಬಾಳುವೆ ನಡೆಸಲು ಶ್ರಮಿಸಬೇಕೆಂದು ಉಪದೇಶಿಸುತ್ತಿದ್ದರು. ಮಾತ್ರವಲ್ಲ, ತನ್ನ ಅನುಯಾಯಿಗಳಿಗೆ 'ಅಹ್ಮದಿಯಾ ಜಮಾತ್' ಎಂಬ ಪ್ರತ್ಯೇಕ ವೃತ್ತವನ್ನು ಸಹ ಆ ವೇಳೆಗೆ ಅವರು ಮಾಡಿರಲಿಲ್ಲ. ತನ್ನನ್ನು ಕಾಫಿರ್ ಎಂದು ಕರೆದವರನ್ನು ಪ್ರತಿಯಾಗಿ ಕಾಫಿರ್ ಎಂದು ಅವರು ಹೇಳಿದ್ದೇ 1906 ರಲ್ಲಿ. ಹೀಗಿರುವಾಗ 'ಆಈನಯೇ ಕಮಾಲಾತೆ ಇಸ್ಲಾಂ' ಎಂಬ ಗ್ರಂಥದಲ್ಲಿ (1893) ಅವರು ತನ್ನಲ್ಲಿ ನಂಬಿಕೆಯಿಡದ ಎಲ್ಲಾ ಮುಸ್ಲಿಮರನ್ನೂ ಹಡಬೆಗಳ ಸಂತಾನವೆಂದು ಕರೆದುದಾಗಿ ಹೇಳುವುದು ನೀತಿಯೂ ವಿವೇಕ ಬುದ್ಧಿಯೂ ಒಪ್ಪದ ವಿಚಾರವಾಗಿದೆ.

ಅದೇ ಗ್ರಂಥದ 535–536 ಪುಟಗಳಲ್ಲಿ ವಿಕ್ಟೋರಿಯಾ ಮಹಾರಾಣಿಯನ್ನು ಸಂಬೋಧಿಸುತ್ತಾ, ಮುಸ್ಲಿಮರೊಡನೆ ಪ್ರತ್ಯೇಕ ರೀತಿಯಲ್ಲಿ ಸಹತಾಪದಿಂದ ವರ್ತಿಸಬೇಕೆಂದು ಎಚ್ಚರಿಸಿಕೊಂಡು, ನಂತರ ಹಝ್ರತ್ ಮಿರ್ಝಾ ಸಾಹೇಬರು ಈ ರೀತಿ ಬರೆದಿರುವರು:

"ಎಲೈ ಚಕ್ರವರ್ತಿನಿ, ಕೊನೆಯದಾಗಿ ನಾನು ನಿಮ್ಮೊಡನೆ ದೇವರ ಹೆಸರಿನಲ್ಲಿ ಉಪದೇಶಿಸುತ್ತೇನೆ; ಮುಸಲ್ಮಾನರು ನಿಮ್ಮ ಪ್ರತ್ಯೇಕ ಬಾಹುಗಳಾಗಿದ್ದಾರೆಂಬುದನ್ನು ತಿಳಿಯಿರಿ. ನಿಮ್ಮ ಆಡಳಿತದೊಳಗೆ ನಿಮಗೆ ತಿಳಿದಿರುವಂತಹ ಒಂದು ಮಹತ್ವವು ಅವರಿಗಿದೆ. ಆದುದರಿಂದ ಮುಸ್ಲಿಮರನ್ನು ಪ್ರತ್ಯೇಕ ದೃಷ್ಟಿಯಿಂದ ನೋಡಿಕೊಂಡು, ಅವರ ಕಣ್ಣುಗಳನ್ನು ತಂಪಾಗಿಸಿ, ಅವರ ಹೃದಯಗಳನ್ನು ಸಂತೃಪ್ತಗೊಳಿಸಿರಿ. ಅವರಲ್ಲಿ ಹೆಚ್ಚಿನವರನ್ನು ನಿಮ್ಮ ಮಿತ್ರರನ್ನಾಗಿ ಮಾಡಿಕೊಳ್ಳಿರಿ. ಯಾಕೆಂದರೆ, ಅವರು ಸಾಧಾರಣ ಒಂದು ಸಾವಿರ ವರ್ಷಗಳಷ್ಟು ಕಾಲ ಆಳ್ವಿಕೆ ನಡೆಸಿದ ಒಂದು ಭೂಮಿಯನ್ನು ಈಗ ಪರಮಾತ್ಮನು ನಿಮಗೆ ಕರುಣಿಸಿದ್ದಾನೆ. ಆದುದರಿಂದ ನೀವು ದೇವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತಾ ಅವರೊಡನೆ ಔದಾರ್ಯದಿಂದ ವರ್ತಿಸಿರಿ. ಖಂಡಿತವಾಗಿಯೂ ಹಾಗೆ ಮಾಡುವವರನ್ನು ಅಲ್ಲಾಹು ಪ್ರೀತಿಸುತ್ತಾನೆ."

ಈ ರೀತಿಯಾಗಿ 'ಆಈನಯೇ ಕಮಾಲಾತೆ ಇಸ್ಲಾಂ' ಎಂಬ ಗ್ರಂಥದಲ್ಲಿ ಮುಸ್ಲಿಮರೊಡನೆ ಸ್ನೇಹ ಸಹಾನುಭೂತಿಯನ್ನು ಪ್ರಕಟಿಸಿದ ಆ ಮಹಾತ್ಮರು ಅದೇ ಗ್ರಂಥದಲ್ಲಿ ತನ್ನನ್ನು ಸ್ವೀಕರಿಸದ ಎಲ್ಲಾ ಮುಸ್ಲಿಮರ ಕುರಿತು "ಹಡಬೆಗಳ ಸಂತಾನ"ವೆಂದು ಹೇಳಿರುವುದಾಗಿ ತಿಳಿಯಲು ಸಾಧ್ಯವಿದೆಯೇ ?

'ಆಈನಯೇ ಕಮಾಲಾತೆ ಇಸ್ಲಾಂ' ಎಂಬ ಗ್ರಂಥದಿಂದ ಮೊದಲು ಉದ್ಧರಿಸಲಾದ ವಾಕ್ಯದಲ್ಲಿರುವ "ಆ ಗ್ರಂಥಗಳು" ಎಂಬ ಪದದ ಉದ್ದೇಶವು ಪ್ರಧಾನವಾಗಿ ಇಸ್ಲಾಂ ಧರ್ಮದ ಸತ್ಯತೆಯನ್ನೂ ಶ್ರೇಷ್ಠತೆಯನ್ನೂ ವಿವರಿಸುವಂಥದ್ದೂ ಇಸ್ಲಾಮಿನ ಎದುರಾಳಿಗಳ ಆಕ್ಷೇಪಗಳಿಗೆ ಸರಿಯಾದ ಉತ್ತರವನ್ನು ನೀಡಿರುವಂಥದ್ದೂ ಆದ ಗ್ರಂಥಗಳೆಂದು ಅದೇ ಗ್ರಂಥದ ಅದೇ ಪುಟದಲ್ಲಿ ಅವರು ವ್ಯಕ್ತಪಡಿಸಿದ್ದಾರೆ. ಅದು ಬರಾಹಿನೆ ಅಹ್ಮದಿಯಾ ಮತ್ತು ಸುರ್‌ಮ ಚೆಶ್‌ಮೆ ಆರಿಯಾ ಎಂಬ ಗ್ರಂಥಗಳ

ಕುರಿತಾಗಿದೆ. ಈ ಎರಡು ಗ್ರಂಥಗಳೂ ಅವರು 'ವಾಗ್ದತ್ತ ಮಸೀಹ್' ಎಂದು ವಾದಿಸುವುದಕ್ಕೆ ಮೊದಲು ಬರೆದುದಾಗಿವೆ. ಅವುಗಳನ್ನು ಮುಸ್ಲಿಮರು ಅತಿಯಾಗಿ ಆದರಿಸಿ ಪ್ರಶಂಸಿದರು. "ಬರಾಹಿನೆ ಅಹ್ಮದಿಯಾ" ಎಂಬ ಗ್ರಂಥವನ್ನು ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿ ಮುಗಿಲೆತ್ತರಕ್ಕೆ ಹೊಗಳಿದರು. "ಸುರ್‌ಮ ಚೆಶ್‌ಮೆ ಆರಿಯಾ" ಎಂಬ ಗ್ರಂಥವನ್ನು 'ಮುಸ್ಲಿಂ ಬುಕ್ ಡಿಪೋ, ಲಾಹೋರ್' ಅದರ ಸ್ವಂತ ಖರ್ಚಿನಿಂದ ಮುದ್ರಿಸಿ ಪ್ರಕಟಿಸಿತು. ಹೀಗೆ, ಆ ಎರಡು ಗ್ರಂಥಗಳನ್ನೂ ಸಾಮಾನ್ಯವಾಗಿ ಎಲ್ಲ ಮುಸ್ಲಿಮರು ಹಾರ್ದಿಕವಾಗಿ ಸ್ವೀಕರಿಸಿದ್ದರು. ಆದರೆ, ಮುಸ್ಲಿಂ ವಿರೋಧಿಗಳಾದ ಕೆಲವು ಪ್ರಮುಖ ಪಂಡಿತರು ಅವುಗಳನ್ನು ಟೀಕಿಸಿ ಬರೆದರು. ಆದುದರಿಂದ ಆ ಗ್ರಂಥಗಳನ್ನು ಸ್ನೇಹ ದೃಷ್ಟಿಯಿಂದ ನೋಡದವರು 'ದುರ್‍ರಿಯತುಲ್ ಬಗಾಯಾ' ಆಗಿರುವರೆಂದು ಬರೆದುದು ಇಸ್ಲಾಮಿನ ಅಂತಹ ಕಠಿಣ ಶತ್ರುಗಳ ಕುರಿತೇ ಹೊರತು ಮುಸ್ಲಿಮರ ಕುರಿತಾಗಿರಲು ಸಾಧ್ಯವಿಲ್ಲ.

ಮಿರ್ಝಾ ಸಾಹೇಬರು ಬರೆದಿರುವ ಉದ್ಧರಣೆಯಲ್ಲಿ 'ನನ್ನ ಕರೆಯನ್ನು ಸತ್ಯಪಡಿಸಿದ್ದಾರೆ' ಎಂಬ ವಾಕ್ಯವು ಪ್ರತ್ಯೇಕ ಗಮನಾರ್ಹವಾಗಿದೆ. ಅದರ ಅರ್ಥವು ಇಸ್ಲಾಂ ಧರ್ಮಕ್ಕೆ ಕರೆ ಎಂದಾಗಿದೆ.

"ನನ್ನ ಕರೆ" ಎಂದು ಆ ಸತ್ಯಾತ್ಮರು ಹೇಳಿರುವುದು ಇಸ್ಲಾಮಿಗೆ ಕರೆ ಎಂಬುದಾಗಿ ಅದೇ ಗ್ರಂಥದ 388-389 ಪುಟಗಳಲ್ಲಿನ ಅವರ ವಿವರಣೆಯಿಂದ ತಿಳಿದು ಬರುತ್ತದೆ. ಅದು ಈ ರೀತಿಯಿದೆ: "ನಿಶ್ಚಯವಾಗಿಯೂ ನಾನು ಇಸ್ಲಾಂ ಧರ್ಮದಲ್ಲಿ ಅನುರಕ್ತನೂ (ಆಶಿಕ್) ಸರ್ವಮಾನವರಲ್ಲಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರ್ (ಸ) ರವರಿಗೆ ಅರ್ಪಿತನೂ ಆ ಪುಣ್ಯಾತ್ಮರ ಸೇವಕನೂ ಆಗಿರುವೆನೆಂಬುದನ್ನು ಪರಮಾತ್ಮನು ಬಲ್ಲನು. ನನ್ನ ಯೌವನಾರಂಭದಿಂದಲೇ ಆ ಪ್ರೇಮವು ನನ್ನಲ್ಲಿ ಅಂಕುರಿಸಿತು. ಹಾಗೆ, ವಿರೋಧಿಗಳನ್ನು ಅಲ್ಲಾಹುವಿನ ಪ್ರಕಾಶಮಾನವಾದ ಧರ್ಮದೆಡೆ ಆಹ್ವಾನಿಸಲಿಕ್ಕಾಗಿ (ಬರಾಹಿನೆ ಅಹ್ಮದಿಯಾ ಎಂಬ) ಗ್ರಂಥವನ್ನು ಬರೆಯಲು ದೈವ ಸಹಾಯವು ನನಗೆ ದಾರಿ ತೋರಿಸಿತು. ಅಂತೆಯೇ ಪ್ರತಿಯೊಬ್ಬ ಎದುರಾಳಿಗೂ ನಾನು ಆ ಗ್ರಂಥವನ್ನು ಕಳುಹಿಸಿ ಯುವ-ವೃದ್ಧ ವ್ಯತ್ಯಾಸವಿಲ್ಲದೆ ಎಲ್ಲರನ್ನೂ ಇಸ್ಲಾಂ ಧರ್ಮಕ್ಕೆ ಆಹ್ವಾನಿಸಿ, ದೃಷ್ಟಾಂತಗಳನ್ನು ತೋರಿಕೊಡಬಹುವೆಂದು ಸತ್ಯಾನ್ವೇಷಿಗಳಿಗೆ ವಾಗ್ದಾನವನ್ನು ನೀಡಿದೆನು."

ಹಝ್ರತ್ ಮಿರ್ಝಾ ಸಾಹೇಬರ 'ಇಸಾಲಯೆ ಔಹಾಂ' ಎಂಬ ಗ್ರಂಥದ 1ನೇ ಆವೃತ್ತಿ 112ನೇ ಪುಟದಲ್ಲಿರುವ ಹೇಳಿಕೆಯು ಸಹ ಇದನ್ನೇ ವ್ಯಕ್ತಪಡಿಸುತ್ತದೆ. ಅದರಲ್ಲಿ ಅವರು ಈರೀತಿ ಬರೆದಿರುವರು:

"ವಿಶ್ವಾಸದ ಈ ಶಕ್ತಿಯಿಂದಿರುವ ಆವೇಶದಿಂದಲೇ ಸಾಮಾನ್ಯವಾಗಿ ಎಲ್ಲರನ್ನೂ ಇಸ್ಲಾಮಿಗೆ ಆಹ್ವಾನಿಸಲು ನಾನು ತಯಾರಾದುದು. ಇಸ್ಲಾಂ ಧರ್ಮಕ್ಕೆ ಆಹ್ವಾನಿಸಿಕೊಂಡಿರುವ 12000ದಷ್ಟು ವಿಜ್ಞಾಪನೆಗಳನ್ನು ರಿಜಿಸ್ಟರ್ ಮಾಡಿ ಎಲ್ಲಾ ಸಮುದಾಯದ ಪ್ರಮುಖರಿಗೂ ಪಂಡಿತರಿಗೂ ರಾಜರುಗಳಿಗೂ ಕಳುಹಿಸಿದೆ. ಒಂದು ಪತ್ರವನ್ನೂ ಒಂದು ವಿಜ್ಞಾಪನೆಯನ್ನೂ ರಿಜಿಸ್ಟರ್ ಮಾಡಿ ಬ್ರಿಟಿಷ್ ಆಡಳಿತದ ಯುವರಾಜರಾದ ರಾಜಕುಮಾರನ ಹೆಸರಿನಲ್ಲೂ ಇಂಗ್ಲೆಂಡಿನ ಪ್ರಧಾನ ಮಂತ್ರಿ ಗ್ಲೇಡ್‌ಸ್ಟನ್‌ರ ಹೆಸರಿನಲ್ಲೂ ಕಳುಹಿಸಿದೆ. ಅದೇ ರೀತಿ ಬಿಸ್ಮಾರ್ಕ್ ರಾಜಕುಮಾರನ ಹೆಸರಿಗೂ ಇತರ ಪ್ರಮುಖ ಮೇಧಾವಿಗಳ ಹೆಸರಿನಲ್ಲಿ ಇತರ ರಾಜ್ಯಗಳಿಗೂ ವಿಜ್ಞಾಪನೆಗಳು ಕಳುಹಿಸಲ್ಪಟ್ಟವು."

ಮೇಲಿನ ಹೇಳಿಕೆಗಳಲ್ಲಿ ತೋರಿಸಿದ 'ಕರೆ'ಯೇ ಆಈನಯೇ ಕಮಾಲಾತೆ ಇಸ್ಲಾಮ್‌ನಲ್ಲಿ ಹೇಳಿದ "ನನ್ನ ಕರೆಯನ್ನು ಸತ್ಯಪಡಿಸುತ್ತಾರೆ" ಎಂಬುದು ಸ್ಪಷ್ಟ. ಅಂದರೆ, ಇಸ್ಲಾಂ ಧರ್ಮಕ್ಕೆ ಇತರ ಮತಸ್ಥರನ್ನು ನಾನು ಆಹ್ವಾನಿಸುತ್ತಿರುವುದನ್ನು ಎಲ್ಲ ಮುಸ್ಲಿಮರೂ ಅನುಮೋದಿಸುತ್ತಾರೆ ಮತ್ತು ಸತ್ಯಪಡಿಸುತ್ತಾರೆ ಎಂದರ್ಥ.

ಒಬ್ಬ ವ್ಯಕ್ತಿ ಮತ್ತೆ ಮತ್ತೆ ಆವರ್ತಿಸಿ ಹೇಳಿರುವ ಹಾಗೂ ಅವರ ಸ್ಪಷ್ಟವಾದ ಹೇಳಿಕೆಗಳಿಂದ ವ್ಯಕ್ತವಾಗುವ ವಿಚಾರಗಳನ್ನು ನೋಡದೆಯೇ, ಅದರ ಮುಂದೆ ಕಣ್ಣು ಮುಚ್ಚಿ, ಅವರ ಬರಹದಿಂದಲೋ ಹೇಳಿಕೆಯಿಂದಲೋ ಯಾವುದಾದರೊಂದು ವಾಕ್ಯವನ್ನು ದುರರ್ಥ ಕೊಟ್ಟು ಎತ್ತಿ ತೋರಿಸುತ್ತಾ ಆಕ್ಷೇಪಿಸುವುದು ಸತ್ಯ ನಿಷೇಧಿಗಳು ಮೊದಲಿಂದಲೂ ಸ್ವೀಕರಿಸಿ ಬಂದ ಕ್ರಮವಾಗಿದೆ. ಇದಕ್ಕೆ ಅತ್ಯುತ್ತಮ ಉದಾಹರಣೆಯನ್ನು ಸತ್ಯಾತ್ಮರ ಸಾರ್ವಭೌಮರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರ ಚರಿತ್ರೆಯಲ್ಲಿ ನಮಗೆ ಕಾಣಬಹುದು. ಹಝ್ರತ್ ಅಹ್ಮದ್ (ಅ)ರನ್ನು ಆಕ್ಷೇಪಿಸುವವರು ಸಹ ಅದೇ ಹಾದಿಯನ್ನೇ ಸ್ವೀಕರಿಸಿರುವುದಾಗಿ ಕಂಡು ಬರುತ್ತದೆ. ಇದು ಒಂದೆಡೆ ಅತ್ಯಂತ ದುಃಖಕರ ಸಂಗತಿಯಾದರೆ, ಇನ್ನೊಂದೆಡೆ ಆಕ್ಷೇಪಿಸುವವರ ನಿಜ ರೂಪವನ್ನು ತಿಳಿಸಿಕೊಡಲು ಪರ್ಯಾಪ್ತವಾಗಿರುವ ಕಾರಣ ಆಶ್ವಾಸದಾಯಕವೂ ಆಗಿದೆ.

# ಪವಿತ್ರ ಕಅಬ ಮಸೀದಿಯಲ್ಲಿ ಸಂಭವಿಸಿದ ಘಟನೆ ಅತ್ಯಧಿಕ ವ್ಯಸನಕರವಾಗಿದೆ.

## ಅತ್ಯಂತ ಪವಿತ್ರವಾದ ಈ ಮಂದಿರದ ಪಾವಿತ್ರ್ಯ ಭಂಗಗೊಳಿಸುವ ಯತ್ನವು ನಮ್ಮ ಹೃದಯವನ್ನು ದುಃಖಕ್ಕೆ ಗುರಿಮಾಡಿದೆ.

**(ಅಹ್ಮದಿಯಾ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್ ಅವರು ನವೆಂಬರ್ 24ರಂದು ರಬ್ವಾದ ಮಸ್ಜಿದ್ ಅಖ್ಸಾದಲ್ಲಿ ಮಾಡಿದ ಖುತ್‌ಬಾ ಪ್ರವಚನ).**

"ಕಳೆದ ಕೆಲವು ದಿನಗಳನ್ನು ನೀವು ಮತ್ತು ನಾನು ಬಹಳ ಗಾಬರಿಯಿಂದಲೂ ವ್ಯಸನದಿಂದಲೂ ಕಳೆದೆವು. ಇದೊಂದು ಸಂಭವಿಸಬಾರದ ಘಟನೆಯಾಗಿತ್ತು. ಆದರೆ ಅದು ಸಂಭವಿಸಿತು. ಗೊಂದಲಗಾರರು ಮಸ್ಜಿದುಲ್ ಹರಾಮ್ ಪ್ರವೇಶಿಸಿ ಅಲ್ಲಿ ಗಲಭೆಯ ಪರಿಸ್ಥಿತಿಯನ್ನುಂಟುಮಾಡಿದರು. ಅಲ್ಲಾಹುವಿನ ಅನುಗ್ರಹದಿಂದ ಅಲ್ಲಿನ ಸರಕಾರವು ಪರಿಸ್ಥಿತಿಯ ಮೇಲೆ ನಿಯಂತ್ರಣ ಹೊಂದಿತು. ಅಲ್ ಹಮ್ದು ಲಿಲ್ಲಾಹ್ (ಎಲ್ಲಾ ಸ್ತುತಿಯೂ ಅಲ್ಲಾಹನಿಗೆ)

ಈ ಸಂಭವ ಒಂದು ಸಾಮಾನ್ಯ ಸಂಭವವಲ್ಲ. ಒಂದು ಅತ್ಯಂತ ಪವಿತ್ರಮತ್ತು ಮಹತ್ವದ ಮಂದಿರವನ್ನು ಅಪವಿತ್ರಗೊಳಿಸಲು ಯತ್ನಿಸಲಾಯಿತು. ಇದರಿಂದ ನಮ್ಮ ಹೃದಯ ದುಃಖಾಕ್ರಾಂತವಾಯಿತು. ನಾವು ದೇವರ ಸನ್ನಿಧಿಯಲ್ಲಿ ತಲೆಬಾಗಿ ಪ್ರಾರ್ಥಿಸಿದೆವು.

ನಾವು ಒಂದು ಸೆಕೆಂಡಿನಷ್ಟು ಸಮಯ ಸಹ ಈ ಪವಿತ್ರಾಲಯದ ಅವಮರ್ಯಾದೆಯನ್ನು ಸಹಿಸಲಾರೆವು. ಆದರೆ ನಾವು ಏನು ಮಾಡಬಹುದಾಗಿತ್ತು? ನಮ್ಮ ಬಳಿ ಏನು ಇದೆಯೋ ಅದನ್ನೇ ಅರ್ಪಿಸಲು ನಮಗೆ ಸಾಧ್ಯವಿತ್ತು. ನಮ್ಮ ಬಳಿ ಪ್ರಜ್ಞೆಯಿಂದ ಕೂಡಿದ ಹೃದಯವಿದೆ- ಅದು ಯಥಾರ್ಥವನ್ನು ತಿಳಿದು ಅಶಾಂತಗೊಳ್ಳುತ್ತದೆ. ನಮ್ಮ ಬಳಿ ಕಣ್ಣೀರಿದೆ– ನಾವು ದೇವರ ಸನ್ನಿಧಿಯಲ್ಲಿ ಕಣ್ಣೀರಿಳಿಸುತ್ತಾ ಪ್ರಾರ್ಥಿಸುತ್ತೇವೆ. ನಮ್ಮ ಬಳಿ ನೊಂದ ಹೃದಯದಿಂದ ಹೊರಟ ನಿಡುಸುಯ್‌ಗಳಿವೆ -ಅವು ಪ್ರಾರ್ಥನೆಯ ರೂಪದಲ್ಲಿ ಆಕಾಶವನ್ನು ತಲುಪಲು ಸಮರ್ಥವಾಗಿವೆ.

ನೀವು ದೇವರಿಗಾಗಿ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗಾಗಿ ನಿಮ್ಮ ಜೀವನವನ್ನು ವ್ಯಯಗೊಳಿಸಿದರೆ ನೀವು ದೇವರ ಸಂತೃಪ್ತಿಯನ್ನು ಗಳಿಸಿ ಸಕಲ ಬಹುಮಾನಗಳನ್ನು ಪಡೆಯುವಿರಿ.

ನಾವು ದೇವರ ವಿನೀತದಾಸರಾಗಿದ್ದೇವೆ. ನಾವು ವಿನಮ್ರರಾಗಿ ದೈವ ಸನ್ನಿಧಿಯಲ್ಲಿ ತಲೆಬಾಗಿದೆವು. ನಾವು ಈ ಕೆಲವು ದಿನಗಳನ್ನು ಮುಖ್ಯವಾಗಿ ಪ್ರಾರ್ಥಿಸುತ್ತಾ ಕಳೆದೆವು. ಇನ್ನು ಮುಂದೆ ಯಾವುದೇ ಗೊಂದಲಗಾರನಿಗೆ ಈ ರೀತಿಯ ಧೈರ್ಯ ತೋರುವ ಅವಕಾಶ ಉಂಟಾಗದಿರಲಿಯೆಂದು ನಾವು ಪ್ರಾರ್ಥಿಸಿದೆವು.

ಪವಿತ್ರ ಕಅಬದ ಸಂಬಂಧ ಕೇವಲ ಹಜ್ ಕರ್ಮವನ್ನು ಮಾತ್ರ ಅವಲಂಬಿಸಿಲ್ಲ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಮಹತ್ತ್ವದ ಆಗಮನದೊಂದಿಗೆಯೂ ಸಂಬಂಧ ಹೊಂದಿದೆ. ಈ ಆಗಮನವನ್ನು ಪ್ರತೀಕ್ಷಿಸಲಿಕ್ಕಾಗಿ ಇಸ್ಮಾಯಿಲ್ ಸಂತತಿಯನ್ನು ಎರಡೂವರೆ ಸಹಸ್ರ ವರ್ಷಗಳ ವರೆಗೆ ಸಿದ್ಧಗೊಳಿಸಲಾಯಿತು, ಪೈಗಂಬರರ ಆಗಮನದ ನಂತರ ಸಕಲ ಮನುಷ್ಯರನ್ನು ದೇವರ ಸನ್ನಿಧಿಯಲ್ಲಿ ಒಂದುಗೂಡಿಸುವ ಮಹತ್ತ್ವದ ಜವಾಬ್ದಾರಿಯನ್ನು ನಿರ್ವಹಿಸಲು ಈ ಏರ್ಪಾಡು ಮಾಡಲಾಗಿತ್ತು."

[ಹಝ್ರತ್ ಖಲೀಫತುಲ್ ಮಸೀಹ್ III ಅವರು ನೀಡಿದ ಖುತ್‌ಬಾ ಸಂದೇಶದ ಒಂದು ಸಂಕ್ಷಿಪ್ತ ರೂಪವನ್ನು ಮಾತ್ರ ಮೇಲೆ ಕೊಡಲಾಗಿದೆ. ಹಝ್ರತ್ ಸಾಹೇಬರು ಕೆಲವು ವರ್ಷಗಳ ಹಿಂದೆ "ತಅಮೀರೆ ಬೈತುಲ್ಲಾಹ್ ಕೆ ತೇಯೀಸ್ ಅಝೀಮುಶ್ಶಾನ್ ಮಕಾಸಿದ್"-ಕಅಬ ನಿರ್ಮಾಣದ ಇಪ್ಪತ್ತಮೂರು ಮಹತ್ತ್ವದ ಉದ್ದೇಶಗಳು- ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ತನ್ನ ಖುತುಬಾಗಳನ್ನು ಪುನಃ ಓದಲು ಸಹ ಉಪದೇಶಿಸಿದರು. ಕಅಬದ ಮಹತ್ವವನ್ನೂ ಅದರ ನಿರ್ಮಾಣದ ಉದ್ದೇಶಗಳನ್ನೂ ಪುನಃ ತಮ್ಮ ಮನಸ್ಸಿನಲ್ಲಿ ನೆಲೆಯೂರುವಂತೆ ಮಾಡಿ ಆ ಉದ್ದೇಶಗಳನ್ನು ಸರಿಯಾಗಿ ಪೂರ್ಣಗೊಳಿಸುವವರಂತಾಗಲು ಇದು ಅತ್ಯಾವಶಕವೆಂದು ಅವರು ಹೇಳಿದರು]

●

# ಪ್ರಶ್ನೋತ್ತರ

**ಪ್ರಶ್ನೆ:** 1953ರಲ್ಲಿ ಅಬುಲ್ ಆಲಾ ಮೌದೂದಿಯವರಿಗೆ ಪಾಕಿಸ್ತಾನದಲ್ಲಿ ಮಾರ್ಷಲ್ ಲಾ ಕೋರ್ಟು ಮರಣದಂಡನೆ ಶಿಕ್ಷೆ ವಿಧಿಸಿದ್ದಿತ್ತಲ್ಲವೇ ? ಅವರ ಮೇಲೆ ಆರೋಪಿಸಲಾದ ಅಪರಾಧ ಅವರು 'ಖಾದಿಯಾನಿ ಮಸ್ಅಲ' ಎಂಬ ಕಿರುಹೊತ್ತಗೆ ಬರೆದುದೇದಾಗಿತ್ತೆಂದು ಮೌದೂದಿಗಳು ಹೇಳುತ್ತಾರೆ. ಇದರ ವಾಸ್ತವಾಂಶ ವೇನು ?

**ಉತ್ತರ :** ಅದು ಸರಿಯಲ್ಲ. ಮಿಲಿಟರಿ ಕೋರ್ಟು ಮೌದೂದಿಯವರಿಗೆ ಶಿಕ್ಷೆ ನೀಡುದುದರ ಸಂಬಂಧಿಸಿ ಅಂದು 'ಇಂಟರ್ ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ ಡೈರೆಕ್ಟರೇಟ್' ಹೊರಡಿಸಿದ ಹೇಳಿಕೆ ಈ ರಿ ತಿ ಇದೆ :

"ಮಿಲಿಟರಿ ಕೋರ್ಟಿನ ಮುಂದೆ ವಿಚಾರಣೆ ನಡೆಸಲ್ಪಟ್ಟ ಮೌಲಾನ ಸಯ್ಯಿದ್ ಅಬುಲ್ ಆಲಾ ಮೌದೂದಿಗೆ ಮರಣದಂಡನೆ ವಿಧಿಸಲಾಗಿದೆ. ಅವರ ಮೇಲೆ ಹೊರಿಸಲಾದ ಅಪರಾಧಗಳಲ್ಲಿ ಆಡಳಿತಕ್ಕೆದುರಾಗಿ ವಿದ್ವೇಷವನ್ನೂ ಅವಿಶ್ವಾಸವನ್ನೂ ಹರಡಿಸಿದ ಹಾಗೂ ಸೈನ್ಯಗಳೆಡೆಯಲ್ಲಿ ವಿದ್ರೋಹಕಾರಕ ಪ್ರಚಾರ ಕಾರ್ಯಗಳನ್ನು ನಡೆಸಿದ ಅಪರಾಧಗಳೂ ಸೇರಿವೆ. ಮಾರ್ಷಲ್ ಲಾ ಜಾರಿಗೊಂಡಾಗ ಮಾರ್ಚ್ 28ನೇ ತಾರೀಕಿನಂದು ಅವರನ್ನು ಕೈದು ಮಾಡಲಾಗಿತ್ತು. ಇದರ ಮೊದಲು 1948 ರಲ್ಲಿ 'ಪಾಕಿಸ್ತಾನ ಸಂರಕ್ಷಣ ನಿಯಮ' ಪ್ರಕಾರ ಅವರನ್ನು ದಸ್ತಗಿರಿ ಮಾಡಿ 18 ತಿಂಗಳ ಕಾಲ ಸೆರೆಮನೆಯಲ್ಲಿಡಲಾಗಿತ್ತು".

ಇದರಿಂದ ಮೌದೂದಿ ಸಾಹೇಬರ ಮೇಲೆ ಆರೋಪಿಸಲ್ಪಟ್ಟ ಅಪರಾಧವೇನೆಂದು ವ್ಯಕ್ತವಾಗುತ್ತದೆಯಷ್ಟೇ. 'ಖಾದಿಯಾನಿ ಮಸ್ಅಲ' ಎಂಬ ಪುಸ್ತಕ ಬರೆವ ಕಾರಣದಿಂದಲ್ಲವೆಂದು ಸಹ ಸ್ಪಷ್ಟವಾಗುತ್ತದೆ. ಒಂದು ಪುಸ್ತಕವನ್ನು ಬರೆವ ಕಾರಣದಿಂದ ಅವರಿಗೆ ಗಲ್ಲು ಶಿಕ್ಷೆ ವಿಧಿಸಲ್ಪಟ್ಟಿದ್ದರೆ ಅಷ್ಟು ಆಕ್ಷೇಪಾರ್ಹವಾದ ಪುಸ್ತಕವನ್ನು ಅದರ ಮೊದಲೇ ಸರಕಾರ ರದ್ದುಗೊಳಿಸಬೇಕಿತ್ತಲ್ಲವೇ? ಆದರೆ ಆ ಕಾಲದಲ್ಲಾಗಲಿ ಅದರ ನಂತರವಾಗಲಿ ಆ ಪುಸ್ತಕವನ್ನು ಸರಕಾರ ರದ್ದುಗೊಳಿಸಲಿಲ್ಲ. ತದ್ವಿರುದ್ಧವಾಗಿ ಅದರ ಹಲವು ಆವೃತ್ತಿಗಳು ಮುದ್ರಿಸಲ್ಪಟ್ಟಿವೆ. ಒಟ್ಟಾರೆ 'ಖಾದಿಯಾನಿ ಮಸ್ಅಲ' ಎಂಬ ಪುಸ್ತಕ ಬರೆದುದು ಮರಣದಂಡನೆ ಶಿಕ್ಷೆಗೆ ಕಾರಣವೆಂದು ಹೇಳುವುದು ಸಂಪೂರ್ಣ ಅಸತ್ಯವೂ ಅಸಂಗತವೂ ಆಗಿದೆ.

**ಪ್ರಶ್ನೆ:** ಅಹ್ಮದಿಯಾ ಮುಸ್ಲಿಂ ಜಮಾಅತಿಗೆ 'ಅಹ್ಮದಿಯಾ' ಎಂದು ಹೆಸರಿಟ್ಟದ್ದು ಅದರ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರ ಹೆಸರಿನ ಸಂಬಂಧಿಸಿಯೆಂದು ಹೇಳುವುದು ಸರಿಯೇ ?

**ಉತ್ತರ:** ಸರಿಯಲ್ಲ. 'ಅಹ್ಮದಿಯಾ' ಎಂಬ ಹೆಸರು ಇಟ್ಟದ್ದು ಅದರ ಸ್ಥಾಪಕರ ಹೆಸರನ್ನು ಪರಿಗಣಿಸಿಯಲ್ಲ; ಬದಲಾಗಿ ಮುಹಮ್ಮದ್ ಮುಸ್ತಫಾ (ಸ) ರವರ ಒಂದು ಗುಣನಾಮವಾದ ಅಹ್ಮದ್ ಎಂಬ ಹೆಸರಿನ ಸಂಬಂಧದಲ್ಲಾಗಿದೆ.

ಹಝ್ರತ್ ಅಹ್ಮದ್ (ಅ.) ಅಲ್ಲಾಹುವಿನ ಆಜ್ಞೆಯನ್ನನುಸರಿಸಿ ತನ್ನ ವಿಶ್ವಾಸಿಗಳಿಂದ ಬೈಅತ್ ಸ್ವೀಕರಿಸಲು ತೊಡಗಿ 11 ವರ್ಷಗಳ ವರೆಗೆ ತನ್ನ ಶಿಷ್ಯವೃಂದಕ್ಕೆ ಪ್ರತ್ಯೇಕ ಹೆಸರು ನಿರ್ದೇಶಿಸಿರಲಿಲ್ಲ. ಹಾಗಿರುವಾಗ 1901ರಲ್ಲಿ ಹೊಸ ಖಾನೇಶುಮಾರಿ ತೆಗೆಯುವುದರ ಸಂಬಂಧಿಸಿ ಸರಕಾರದಿಂದ ಘೋಷಣೆಯುಂಟಾಗಿತ್ತು. ಆಗ ಹಝ್ರತ್ ಅಹ್ಮದ್ (ಅ) ತನ್ನ ಜಮಾಅತು ಇತರ ಮುಸ್ಲಿಂ ವಿಭಾಗಗಳಿಂದ ಗುರುತಿಸಲ್ಪಡಲಿಕ್ಕಾಗಿ ಅದಕ್ಕೆ 'ಮುಸಲ್ಮಾನ್ ಫಿರ್ಖಾ ಅಹ್ಮದಿಯಾ' ಎಂದು ನಾಮಕರಣ ಮಾಡಿದುದಾಗಿ ತಿಳಿಸಿದರು.

ಇದರ ಸಂಬಂಧಿಸಿ ಅವರು ಅಂದು ಹೊರಡಿಸಿದ ಒಂದು ಹೇಳಿಕೆ ಈ ರೀತಿ ಇದೆ:

ಈ ಜಮಾಅತಿಗೆ 'ಮುಸಲ್ಮಾನ್ ಫಿರ್ಖಾ ಅಹ್ಮದಿಯಾ' ಎಂದು ನಾಮಕರಣ ಮಾಡಿದುದರ ಕಾರಣ ಇದಾಗಿದೆ: ನಮ್ಮ ನಬಿ (ಸ) ರವರಿಗೆ ಮುಹಮ್ಮದ್ ಎಂದೂ ಅಹ್ಮದ್ ಎಂದೂ ನಾಮಗಳಿವೆ. ಎರಡು, ಎರಡು ವಿಧ ಗುಣಗಳನ್ನು ಸೂಚಿಸುತ್ತವೆ. ಮುಹಮ್ಮದ್ ಎಂಬ ಹೆಸರು ಜಲಾಲೀ (ಪ್ರತಾಪ ಸೂಚಕ) ಆಗಿದೆ. ಖಡ್ಗದಿಂದ ಇಸ್ಲಾಮನ್ನು ನಾಶಪಡಿಸಲು ಶ್ರಮಿಸಿದ, ಅನೇಕ ಮುಸ್ಲಿಮರನ್ನು ಕೊಂದ ಶತ್ರುಗಳನ್ನು ಪ್ರತಿರೋ

ಧಿಸಲಿಕ್ಕಾಗಿ ಅವರು ಖಡ್ಗದಿಂದಲೇ ವೈರಿಗಳನ್ನು ಎದುರಿಸಿ ವಿಜಯ ಗಳಿಸುವರೆಂಬ ಒಂದು ಭವಿಷ್ಯ ಸೂಚನೆ ಅದರಲ್ಲಡಕವಾಗಿದೆ. ಆದರೆ ಅಹ್ಮದ್ ಎಂಬ ಹೆಸರು ಜಮಾಲೀ ( ಅಲಂಕಾರದ್ಯೋತಕ ) ಆಗಿದೆ. ಸೌಹಾರ್ದ, ಸಹನೆ, ಕ್ಷಮೆ, ಸದ್ವರ್ತನೆಗಳ ಮೂಲಕ ಜನರ ಹೃದಯಗಳನ್ನು ವಶಪಡಿಸಿ ಶಾಂತಿ ಮತ್ತು ಸಮಾಧಾನವನ್ನು ಸ್ಥಾಪಿಸುವ ವ್ಯಕ್ತಿಯೆಂದು ಈ ಹೆಸರು ಸೂಚಿಸುತ್ತದೆ. ಎರಡು ಹೆಸರುಗಳ ಗುಣಗಳು ನಬಿ (ಸ) ರವರ ಜೀವಿತದಲ್ಲೇ ಪ್ರಕಟವಾಗಿವೆ. ಮಕ್ಕಾ ಜೀವಿತದಲ್ಲಿ ಅಹ್ಮದ್ ಎಂಬ ಹೆಸರಿನಲ್ಲಿ ಅಡಕವಾದ ಗುಣಗಳೂ ಮದೀನಾ ಜೀವಿತದಲ್ಲಿ ಮುಹಮ್ಮದ್ ಎಂಬ ಹೆಸರಿನ ಗುಣಗಳೂ ಗೋಚರವಾಗಿದ್ದುವು. ಇದಲ್ಲದೆ, ಅಂತ್ಯಕಾಲದಲ್ಲಿ ಅಹ್ಮದ್ ಎಂಬ ಹೆಸರಿನ ಪ್ರತಿಛಾಯೆಯಲ್ಲಿ 'ಜಮಾಲೀ' ಗುಣಗಳನ್ನು ಪ್ರದರ್ಶಿಸುವ ಒಬ್ಬ ಪ್ರತಿಪುರುಷ ಆವಿರ್ಭವಿಸುವರೆಂದೂ ಅವರ ಮೂಲಕ ಧರ್ಮಯುದ್ಧಗಳು ಅಂತ್ಯಗೊಂಡು ಲೋಕದಲ್ಲಿ ಶಾಂತಿಯೂ ಸಮಾಧಾನವೂ ಸ್ಥಾಪಿಸಲ್ಪಡುವುದೆಂದೂ ಸಹ ಭವಿಷ್ಯ ನುಡಿ ಇದೆ. ಆ ಭವಿಷ್ಯೋಕ್ತಿ ನನ್ನ ಮೂಲಕ ಪೂರ್ತಿಯಾಗುತ್ತಿದೆ. ಆ ಸಂಬಂಧದಲ್ಲಿ ಈ ವಿಭಾಗಕ್ಕೆ 'ಮುಸಲ್ಮಾನ್ ಫಿರ್ಖಾ' ಅಹ್ಮದಿಯಾ ಎಂದು ಹೆಸರಿಸುವುದು ಅನುಯೋಜ್ಯವಾಗಿ ಗಣಿಸಲ್ಪಡುತ್ತದೆ. (ತಬ್ಲೀಗೆ ರಿಸಾಲತ್) □

# ಹಝ್ರತ್ ಈಸಾನಬಿ ಮರಣ ಹೊಂದಿರುವರು

### ಕೆನ್ಯಾದ ಪ್ರಧಾನ ಖಾಝಿಯ ಫತ್ವಾ

ಆಫ್ರಿಕಾ ಖಂಡದ ಕೆನ್ಯಾ ರಾಜ್ಯದ ಪ್ರಧಾನ ಖಾಝಿ ಶೇಖ್ ಇಬಾದುಲ್ಲಾಹ್ ಸಾಲಿಹ್ ಫಾರಸೀ ಸಾಹೇಬರು ಈಸಾನಬಿ ಅಲೈಹಿಸ್ಸಲಾಮರ ಕುರಿತು ಇತ್ತೀಚೆಗೆ ಒಂದು ಫತ್ವಾ ನೀಡಿರುವರು. ಮೊಂಬಾಸಾದ ಒಬ್ಬ ಸುನ್ನೀ ಮುಸ್ಲಿಮರಾದ ಇಸ್ಮಾಯಿಲ್ ಅಬ್ದುಲ್ಲಾ ಎಂಬವರು "ದೇವರ ಪ್ರವಾದಿಯಾದ ಈಸಾನಬಿ (ಅ) ಜೀವಿಸಿರುವರೋ ಮರಣ ಹೊಂದಿರುವರೋ?" ಎಂದು ಪ್ರಶ್ನಿಸಿದುದಕ್ಕೆ ಉತ್ತರವಾಗಿ ನೈರೋಬಿಯದ ಅಂಜುಮನ್ ಹಿಮಾಯತುಲ್ ಇಸ್ಲಾಮ್ ಸಂಘದ ವತಿಯಿಂದ ಸ್ವಾಹಿಲಿ ಭಾಷೆಯಲ್ಲಿ ಪ್ರಕಟಗೊಳ್ಳುತ್ತಿರುವ ತ್ರೈಮಾಸಿಕ ಪತ್ರಿಕೆಯಲ್ಲಿ ಅವರು ಈ ರೀತಿ ಉತ್ತರಿಸಿರುವರು:- "ಹಝ್ರತ್ ಈಸಾನಬಿ ಮರಣ ಹೊಂದಿರುವರೆಂದು ದೃಢವಾಗಿ ನಂಬುವುದು ಉತ್ತಮವಾಗಿದೆ. ಸೂರತ್ ಆಲ್ ಇಮ್ರಾನ್ ಆಯತ್ 144ರಲ್ಲಿ ಮತ್ತು ಸೂರತ್ ಅಂಬಿಯಾ ಆಯತ್ 34ರಲ್ಲಿ ಇದು ವ್ಯಕ್ತವಾಗಿ ಸೂಚಿತವಾಗಿದೆ. "ಇನ್ನೀ ಮುತವಫ್ಫೀಕ" ಎಂಬ ವಾಕ್ಯವನ್ನು ಸರಿಯಾಗಿ ಭಾಷಾಂತರಿಸಿದರೆ ಇದೇ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಇದೇ ಸಂಗತಿ ಸಹೀಹ್ ಬುಖಾರಿ ಗ್ರಂಥದ ಮೂರನೇಯ ಅಧ್ಯಾಯದ 79ನೇ ಪುಟದಲ್ಲಿ ವಿವರಿಸಲಾಗಿದೆ. ಇಮಾಮ್ ಮಾಲಿಕ್ ಇದೇ ಅಭಿಪ್ರಾಯ ಹೊಂದಿದ್ದರೆಂದು ಮಜ್‌ಮವುಲ್ ಬಹಾರುಲ್ ಅನ್‌ವಾರ್ ಅಧ್ಯಾಯ 1 ಪುಟ 282ರಲ್ಲಿ ವ್ಯಕ್ತವಾಗಿದೆ. ಇಮಾಮ್ ಮುಹಮ್ಮದುಲ್ ಗಝ್ಝಾಲಿ ಇದೇ ಅಭಿಪ್ರಾಯವನ್ನು "ನಾದಿರತುನ್ ಫಿಲ್ ಖುರ್‌ಆನ್" ಎಂಬ ಗ್ರಂಥದ 37 ಮತ್ತು 44ನೇ ಪುಟಗಳಲ್ಲಿ ವ್ಯಕ್ತಗೊಳಿಸಿರುವರು.

ಈಸಾನಬಿ ಶಿಲುಬೆಯಲ್ಲಿ ಮರಣಹೊಂದಿದರೆನ್ನುವ ಹೇಳಿಕೆಯನ್ನು ಪವಿತ್ರ ಖುರ್ ಆನ್ ನಿರಾಕರಿಸಿದೆ. ಅವರು ಶಿಲುಬೆಯಲ್ಲಿ ಮರಣ ಹೊಂದುವ ದುಃಖದಿಂದ ರಕ್ಷಿಸಲ್ಪಟ್ಟಿದ್ದರು."

ಈ ಪತ್ರಿಕೆಯ ಸಂಪಾದಕ ಕೆನ್ಯಾದ ಮಾಜಿ ಪ್ರಧಾನ ಖಾಝಿ ಶೇಖ್ ಮುಹಮ್ಮದ್ ಕಾಸಿಮ್ ಮಝ್ರೂಯಿ ಎಂಬವರು. ಈ ಪತ್ರಿಕೆಯ ಹೆಸರು "ಸೌತೆ ಯಾ ಹಖ್ಖೀ" (ಸತ್ಯದ ಧ್ವನಿ) ಎಂದಾಗಿದೆ. ಇದು ಮೊಂಬಾಸಾದಿಂದ ಹೊರಡುತ್ತಿದೆ. ಈ ಫತ್ವಾ 1976ನೇ ಇಸವಿಯ ಒಕ್ಟೋಬರ್ ತಿಂಗಳ ಸಂಚಿಕೆಯ 6ನೇ ಪುಟದಲ್ಲಿ ಪ್ರಕಟವಾಗಿದೆ. ದಕ್ಷಿಣ ಆಫ್ರಿಕಾದ ಅಹ್ಮದಿಯಾ ಕೇಂದ್ರದಿಂದ ಹೊರಡುವ ತ್ರೈಮಾಸಿಕ "ಅಲ್ ಅಸರ್" ಪತ್ರಿಕೆಯ 15ನೇ ಸಂಪುಟದ ಒಂದನೆಯ ಸಂಚಿಕೆಯಲ್ಲಿ ಈ ವರ್ಷ ಇದು ಪ್ರಕಟವಾಗಿದೆ.

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಪ್ರೊ। ಸಲಾಮರಿಗೆ ಪಾಕಿಸ್ತಾನದ ರಾಯಭಾರಿಯ ಸನ್ಮಾನ

ಲಂಡನಿನಲ್ಲಿರುವ ಪಾಕಿಸ್ತಾನದ ರಾಯಭಾರಿ ಬ್ರಿಗೇಡಿಯರ್ (ನಿವೃತ್ತ) ಫಜ್ಲುರ್ರಹ್ಮಾನ್ ಖಾನ್ ಅವರು ಪಾಕಿಸ್ತಾನದ ಪ್ರಥಮ ನೋಬೆಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಅಬ್ದುಸ್ಸಲಾಮರ ಗೌರವಾರ್ಥ ತನ್ನ ನಿವಾಸದಲ್ಲಿ ಈದುಲ್ ಅಝ್‌ಹಾ ದಿನದಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಅನೇಕ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

## ಬ್ರಿಟನಿನಲ್ಲಿ 5 ಮಸೀದಿಗಳ ನಿರ್ಮಾಣ ಯೋಜನೆ

ಲಂಡನಿನ ಅಹ್ಮದಿಯಾ ಘಟಕದ ವತಿಯಿಂದ ಬ್ರಿಟನಿನಲ್ಲಿ 5 ಮಸೀದಿಗಳನ್ನೂ ಮಿಶನ್ ಕೇಂದ್ರಗಳನ್ನೂ ಸ್ಥಾಪಿಸುವ ಯೋಜನೆಯೊಂದನ್ನು ಲಂಡನಿನ ಅಹ್ಮದಿಯಾ ಮಿಶನರಿ ಮೌಲಾನ ಶೈಕ್ ಮುಬಾರಕ್ ಅಹ್ಮದರು ಈದುಲ್ ಅಝ್‌ಹಾ ದಿನದಂದು ಮುಂದಿಟ್ಟರು. ನಿರ್ಮಾಣದ ಖರ್ಚಿಗಾಗಿ 10 ವರ್ಷ ಪ್ರಾಯದ ಎಲ್ಲಾ ಅಹ್ಮದಿ ಮಕ್ಕಳು 5 ಪೌಂಡ್, 5ರಿಂದ 10 ವರ್ಷ ಪ್ರಾಯದ ಮಕ್ಕಳು 10 ಪೌಂಡ್, ಉದ್ಯೋಗದಲ್ಲಿಲ್ಲದ ಮಹಿಳೆಯರು 15 ಪೌಂಡ್, ಉದ್ಯೋಗದಲ್ಲಿರುವ ಮಹಿಳೆಯರು ಅರ್ಧ ತಿಂಗಳ ಸಂಬಳ ನೀಡಬೇಕೆಂದು ಶೈಕ್ ಸಾಹೇಬರು ಕೇಳಿದರು. ಪುರುಷರಿಗೆ ಒಂದು ಮಿತಿಯನ್ನು ನಿಶ್ಚಯಿಸಲಾಗಿಲ್ಲವೆಂದೂ, ಅವರು ತಮ್ಮಿಂದ ಸಾಧ್ಯವಾಗುವ ಅತ್ಯಧಿಕ ಮೊತ್ತವನ್ನು ನೀಡಬೇಕೆಂದೂ ಎಲ್ಲಾ ವಿಧ ಪರಿಶ್ರಮಕ್ಕೂ ಅವರು ಸನ್ನದ್ಧರಾಗಿರಬೇಕೆಂದೂ ಶೈಕ್ ಸಾಹೇಬರು ಉಪದೇಶಿಸಿದರು.

## ಇಸ್ಲಾಂ ಮತ ತತ್ವಜ್ಞಾನದ 50,000 ಪ್ರತಿಗಳು

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದರು ಬರೆದ ಗ್ರಂಥ 'ಇಸ್ಲಾಂ ಮತ ತತ್ವಜ್ಞಾನ'ದ 50.000 ಪ್ರತಿಗಳು ಲಂಡನಿನಿಂದ ಇಂಗ್ಲಿಷ್‌ನಲ್ಲಿ ಪುನರ್ಮುದ್ರಣಗೊಂಡಿರುತ್ತವೆ. ಈ ಆವೃತ್ತಿಯನ್ನು ಸರ್ ಮುಹಮ್ಮದ್ ಝಫರುಲ್ಲಾ ಖಾನ್ ಸಾಹೇಬರು ಭಾಷಾಂತರಿಸಿರುವರು. ಇದು 1896ನೇ ಇಸವಿ ಡಿಸೆಂಬರ್ 26ರಿಂದ 29ರ ವರೆಗೆ ಲಾಹೋರಿನಲ್ಲಿ ಜರಗಿದ ಸರ್ವ ಧರ್ಮ ಸಮ್ಮೇಳನದಲ್ಲಿ ಪ್ರಸ್ತುತ ಪಡಿಸಿದ ಒಂದು ಉಪನ್ಯಾಸವಾಗಿದೆ. ಮನುಷ್ಯನ ಧಾರ್ಮಿಕ ಜೀವನಕ್ಕೆ ಸಂಬಂಧಿಸಿದ ಐದು ಪ್ರಧಾನ ವಿಷಯಗಳ ಕುರಿತು ಈ ಉಪನ್ಯಾಸದಲ್ಲಿ ಪ್ರತಿಪಾದಿಸಲಾಗಿದೆ.

## ನೈಜೀರಿಯೊದ ಇನ್ನೊಂದು ರೇಡಿಯೋ ನಿಲಯದಿಂದ 'ವಾಯ್ಸ್ ಓಫ್ ಇಸ್ಲಾಂ' ಪ್ರಸಾರ

ಆಕ್ಟೋಬರ್ ತಿಂಗಳಿನಿಂದ ಅಬಾದಾನಿನ ಔಯೂ ರೇಡಿಯೋ ನಿಲಯದಿಂದ ಸಹ ಎಲ್ಲಾ ಗುರುವಾರ ರಾತ್ರೆ ಒಂಭತ್ತೂವರೆ ಗಂಟೆಯಿಂದ ಹತ್ತು ಗಂಟೆಯ ತನಕ 'ವಾಯ್ಸ್ ಓಫ್ ಇಸ್ಲಾಂ' (ಇಸ್ಲಾಮಿನ ಧ್ವನಿ) ಎಂಬ ಕಾರ್ಯಕ್ರಮವನ್ನು ಆರಂಭಿಸಲಾಗಿದೆಯೆಂದು 'ಟ್ರುತ್'ವಾರ ಪತ್ರಿಕೆ (19-10-79) ವರದಿ ಮಾಡಿದೆ.

ಔಗನ್ ರೇಡಿಯೋ ನಿಲಯದಲ್ಲಿ ಎಲ್ಲಾ ಶುಕ್ರವಾರ ರಾತ್ರೆ ಎಂಟೂವರೆಯಿಂದ ಒಂಭತ್ತರ ವರೆಗೆ ಇದೇ ರೀತಿಯ ಕಾರ್ಯಕ್ರಮವಿರುವುದನ್ನು ಇಲ್ಲಿ ಸ್ಮರಿಸಬಹುದು.

## ನೈಜೀರಿಯಾದಲ್ಲಿ ಮತ್ತೊಂದು ಮಸೀದಿ

ನೈಜೀರಿಯಾದ ಬೆಂಡಲ್ ಪ್ರಾಂತ್ಯದ ರಾಜಧಾನಿ ಬನೀನಿನಲ್ಲಿ ಒಂದು ಮನೋಹರವಾದ ಅಹ್ಮದಿಯಾ ಮಸೀದಿ ನಿರ್ಮಾಣಗೊಂಡಿದೆಯೆಂದು ನೈಜೀರಿಯಾದ ಮಿಶನರಿ ಮುಹಮ್ಮದ್ ಅಜ್ಮಲ್ ಶಾಹಿದ್ ಅವರು ತಿಳಿಸಿರುವರು. ಮಸೀದಿಯ ಸಮೀಪವೇ ಒಂದು ಮಿಶನ್ ಹೌಸಿಗೆ ಸಹ ತಳಪಾಯ ಹಾಕಲಾಗಿದೆ. ಕೋರಾ

ಪ್ರಾಂತ್ಯದ ರಾಜಧಾನಿಯಲ್ಲಿ ಕೂಡ ಸ್ಥಳ ಖರೀದಿಸಲಾಗಿದೆಯೆಂದೂ ಹೊಸ ವರ್ಷದ ಪ್ರಾರಂಭದಲ್ಲಿ ಔರ್ ಸಾನ್ ಎಂಬಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಲಾಗುವುದೆಂದೂ ಸಹ ಅವರು ತಿಳಿಸಿರುವರು.

## ಜೂರಿಕ್ ಮಸೀದಿಗೆ ಮಲೇಶ್ಯಾದ ಉಪ ಪ್ರಧಾನಿಯ ಭೇಟಿ

ಮಲೇಶ್ಯಾದ ಉಪ ಪ್ರಧಾನಿ ಮುಹಾತಿರಿಬ್ನು ಮುಹಮ್ಮದ್ ಅಕ್ಟೋಬರ್ 13ರಂದು ಹಲವು ಸಂಗಡಿಗರೊಂದಿಗೆ ಜೂರಿಕ್(ಸ್ವಿಜರ್ಲೆಂಡ್)ನಲ್ಲಿರುವ ಮಸ್ಜಿದ್ ಮಹಮೂದ್ ಎಂಬ ಅಹ್ಮದಿಯಾ ಮಸೀದಿಗೆ ಭೇಟಿ ನೀಡಿದರು. ಅಹ್ಮದಿಯಾ ಮಿಶನರಿ ನಸೀಂ ಮಹ್‌ದಿಯವರು ಅವರನ್ನು ಸ್ವಾಗತಿಸಿದರು. ಉಪ ಪ್ರಧಾನಿಯವರು ಮಸೀದಿಗೆ ಪ್ರವೇಶಿಸುತ್ತಲೇ ಎರಡು ರಕ್‌ಅತ್ ನಫಲ್ ನಮಾಝ್ ಮಾಡಿದರು. ಅದರ ನಂತರ ಅರ್ಧ ಗಂಟೆ ಕಾಲ ಮಿಶನ್ ಹೌಸಿನ ಲೆಕ್ಚರ್ ರೂಮಿನಲ್ಲಿ ಸ್ವಿಜರ್ಲೆಂಡಿನ ಮುಸಲ್ಮಾನರ ಕುರಿತು ಮತ್ತು ಅಹ್ಮದಿಯಾ ಸಂಘಟನೆಯ ಬಗ್ಗೆ ಮಾತುಕತೆ ನಡೆಸಿದರು. ಗಣ್ಯ ಅತಿಥಿಗಳ ಗೌರವಾರ್ಥ ಅವರಿಗೆ ಅಹ್ಮದಿಯಾ ಸಾಹಿತ್ಯಗಳನ್ನು ನೀಡಲಾಯಿತು. ಬಹಳ ಸಂತೋಷದಿಂದ ಅವುಗಳನ್ನು ಅವರು ಸ್ವೀಕರಿಸಿದರು.

## ಮೊರಿಶ್ಯಸ್‌ನಲ್ಲಿ ಪ್ರಚಾರ ದಿನ

ಮೊರಿಶ್ಯಸ್ ಅಹ್ಮದಿಯಾ ಘಟಕದ ವತಿಯಿಂದ ಜುಲಾಯಿ 22ರಂದು ಪ್ರಚಾರ ದಿನವನ್ನು ಆಚರಿಸಲಾಯಿತು. ಮೊರಿಶ್ಯಸ್‌ನ ಜನತೆಗೆ ಯಥಾರ್ಥ ಇಸ್ಲಾಮಿನ ಸಂದೇಶವನ್ನು ತಲಪಿಸುವ ಸತ್ಕಾರ್ಯದಲ್ಲಿ 300 ಮಂದಿ ಉತ್ಸಾಹಿ ಅಹ್ಮದಿಯರು ಭಾಗವಹಿಸಿದರು. ಅನೇಕ ಉಚಿತ ಕಿರುಹೊತ್ತಗೆಗಳನ್ನು ಹಂಚಲಾಯಿತಲ್ಲದೆ 3500 ರೂಪಾಯಿಗಳ ಪುಸ್ತಕಗಳನ್ನು ಒಂದೇ ದಿನದಲ್ಲಿ ಮಾರಲಾಯಿತೆಂದು ಮೊರಿಶ್ಯಸ್‌ನ ಮಿಶನರಿ ಸಿದ್ದೀಕ್ ಅಹ್ಮದ್ ಮುನವ್ವರ್ ತಿಳಿಸಿರುವರು.

## ಅಮೇರಿಕದಲ್ಲಿ 10 ಲಕ್ಷ ಪ್ರತಿ ಖುರ್‌ಆನ್ ಭಾಷಾಂತರ

ಲೋಕದಾದ್ಯಂತ ಖುರ್‌ಆನಿನ ಭಾಷಾಂತರ ಮತ್ತು ವ್ಯಾಖ್ಯಾನಗಳನ್ನು ಪ್ರಚುರಪಡಿಸುವ ಒಂದು ಯೋಜನೆಯನ್ನು ಅಹ್ಮದಿಯಾ ಸಂಘಟನೆ ಹಾಕಿಕೊಂಡಿದೆಯೆಂದು ರಬ್ವಾದಲ್ಲಿ ಸೇರಿದ ಅಹ್ಮದಿಯಾ ಯುವಜನ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಮಾತನಾಡುತ್ತಾ ಅಕ್ಟೋಬರ್ 21ರಂದು ಅಹ್ಮದಿಯಾ ಖಲೀಫರು ಬಹಿರಂಗಪಡಿಸಿದರು. ಆ ಯೋಜನೆಯನ್ವಯ ಅಮೇರಿಕದಲ್ಲಿ 10 ಲಕ್ಷ ಪ್ರತಿ ಖುರ್‌ಆನ್ ಭಾಷಾಂತರವನ್ನು ಮುದ್ರಿಸಲು ಈಗಾಗಲೇ ಆರಂಭಿಸಲಾಗಿದೆಯೆಂದು ಅವರು ನುಡಿದರು.

## ಜಪಾನಿನಲ್ಲಿ ದ್ವಿತೀಯ ಪ್ರಚಾರ ಕೇಂದ್ರ

ಜಪಾನಿನ ಮೂರನೇ ಪ್ರಸಿದ್ಧ ನಗರವಾದ ಯೊಕೊಹಾಮಾದಲ್ಲಿ ಸಪ್ಟೆಂಬರ್ 3ರಂದು ದ್ವಿತೀಯ ಅಹ್ಮದಿಯಾ ಪ್ರಚಾರ ಕೇಂದ್ರ ಸ್ಥಾಪಿಸಲ್ಪಟ್ಟಿತು. ಮಗ್‌ಫೂರ್ ಅಹ್ಮದ್ ಮುನೀಬ್ ಅವರು ಮಿಶನ್ ಹೌಸಿನ ಮೇಲ್ನೋಟವನ್ನು ವಹಿಸಿಕೊಂಡಿದ್ದಾರೆ. ಟೋಕಿಯೋದಲ್ಲಿ ಈಗಾಗಲೇ ಅಹ್ಮದಿಯಾ ಪ್ರಚಾರ ಕೇಂದ್ರವಿದೆ. ಅದರ ಮಿಶನರಿ ಅತಾಉಲ್ ಮುಜೀಬ್ ರಾಶಿದ್ ಅವರು.

## ಘಾನದಿಂದ ಖುರ್‌ಆನಿನ 10,000 ಇಂಗ್ಲಿಷ್ ಪ್ರತಿಗಳು

ಘಾನಾದ ಅಹ್ಮದಿಯಾ ಘಟಕದ ವತಿಯಿಂದ ಖುರ್‌ಆನಿನ 10 ಸಾವಿರ ಇಂಗ್ಲಿಷ್ ಪ್ರತಿಗಳನ್ನು ಅರಬಿ ಮೂಲ ಸಹಿತ ಮುದ್ರಿಸಲಾಗಿದೆಯೆಂದು ಅಕ್ರಾದ ಪಾಮ್ ಕೋರ್ಟ್‌ನಲ್ಲಿ ಸೇರಿದ ಸಮಾರಂಭದಲ್ಲಿ ಅಲ್ಲಿನ ಅಮೀರ್ ಮತ್ತು ಮಿಶನರಿ ಮೌಲವಿ ಅಬ್ದುಲ್ ವಹಾಬ್ ಆದಂ ಅವರು ಬಹಿರಂಗ ಪಡಿಸಿದರು. ಆವಶ್ಯಕತೆಯನುಸಾರ ಇನ್ನೂ ಹೆಚ್ಚಿನ ಪ್ರತಿಗಳನ್ನು ಮುದ್ರಿಸಲಾಗುವುದೆಂದು ಸಹ ಅವರು ನುಡಿದರು. ತವಾಈ ಭಾಷೆಯಲ್ಲಿ ಸಹ ಖುರ್‌ಆನಿನ ಭಾಷಾಂತರ ತಯಾರಿದೆಯೆಂದೂ ಸದ್ಯೋಭವಿಷ್ಯದಲ್ಲಿ ಅದನ್ನು ಪ್ರಕಟಿಸಲಾಗುವುದೆಂದೂ ಅವರು ಹೇಳಿದರು.

## ಜಾಗತಿಕ ಸರ್ವಧರ್ಮ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿ

ಅಗಸ್ಟ್ 19ರಿಂದ 25 ರ ವರೆಗೆ ಬಾತ್‌ನಲ್ಲಿ ವೇದಾಂತ ಸಂಘಟನೆಯ ವತಿಯಿಂದ ಒಂದು ಜಾಗತಿಕ

ಸರ್ವಧರ್ಮ ಸಮ್ಮೇಳನ ಜರಗಿತು. ಅಹ್ಮದಿಯಾ ಮುಸ್ಲಿಂ ಪ್ರತಿನಿಧಿಯಾಗಿ ಸರ್ ಮುಹಮ್ಮದ್ ಝುಫ ರುಲ್ಲಾ ಖಾನರು ಆ ಸಮ್ಮೇಳನದಲ್ಲಿ ಭಾಗವಹಿಸಿದರು. "ಇಸ್ಲಾಮಿನ ಸಂದೇಶ" ಎಂಬ ವಿಷಯದಲ್ಲಿ ಅವರು ಭಾಷಣವಿತ್ತರು.

ಲೋಕದ ವಿವಿಧ ಮತಸ್ಥರನ್ನೂ ದಾರ್ಶನಿಕರ ರನ್ನೂ, ವಿಜ್ಞಾನಿಗಳನ್ನೂ ರಾಜಕಾರಣಿಗಳನ್ನೂ ಆರ್ಥಿಕ ತಜ್ಞರನ್ನೂ ಆಹ್ವಾನಿಸಿ ಲೋಕವಿಂದು ಎದುರಿಸುತ್ತಿರುವ ನೈತಿಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳ ಬಗ್ಗೆ ವಿಚಾರ ವಿಮರ್ಶೆ ನಡೆಸಿ ಸೂಕ್ತ ಪರಿಹಾರ ಕಂಡು ಹಿಡಿಯು ವುದು ಸಮ್ಮೇಳನದ ಉದ್ದೇಶವಾಗಿತ್ತು.

## ಉತ್ತರ ಪ್ರದೇಶದಲ್ಲಿ ವಾರ್ಷಿಕ ಸಮ್ಮೇಳನ

ಉತ್ತರ ಪ್ರದೇಶದ ಅಹ್ಮದಿಯಾ ಘಟಕದ ವತಿ ಯಿಂದ 13ನೇ ವಾರ್ಷಿಕ ಸಮ್ಮೇಳನವು ಅಕ್ಟೋಬರ್ 24 ಮತ್ತು 25ನೇ ದಿನಾಂಕಗಳಲ್ಲಿ ಶಾಹಜಾನ್‌ಪುರದ ಟೌನ್‌ಹಾಲ್ ಮೈದಾನದಲ್ಲಿ ಜರಗಿತು.

ಪ್ರಥಮ ದಿನವನ್ನು ಸರ್ವಮತಾಚಾರ್ಯರ ದಿನ ವನ್ನಾಗಿ ಆಚರಿಸಲಾಯಿತು. ಅಧ್ಯಕ್ಷತೆಯನ್ನು ಮಿರ್ಝಾ ವಸೀಂ ಅಹ್ಮದ್ ಸಾಹೇಬರು ವಹಿಸಿದರು. ಮತಾಚಾರ್ಯರ ದಿನಾಚರಣೆಯ ಮಹತ್ವವೇನೆಂದು ಮೌಲವಿ ಅಬ್ದುಲ್ ಹಕ್ ಫಝಲ್ ವಿವರಿಸಿದರು.

ಮೌಲಾನ ಶರೀಫ್ ಅಹ್ಮದ್ ಅಮೀನಿ ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು, ರೆವರೆಂಡ್ ಎಫ್. ಎ. ಗೋವಿಸ್ ಯೇಸುಕ್ರಿಸ್ತರ ಕುರಿತು, ಶ್ರೀ ರಾಜ್ ಕುಮಾರ್ ಸಿಖ್ಖ ಧರ್ಮದ ಕುರಿತು, ಶ್ರೀ ರಾಯಿಬಾವ ಶ್ರೀ ಕೃಷ್ಣ ಮತ್ತು ಶ್ರೀ ರಾಮರ ಕುರಿತು. ಸರ್ದಾರ್ ಜಸ್‌ವಂತ್ ಸಿಂಘ್ ಗುರುನಾನಕ್‌ಜಿಯ ಕುರಿತು, ಮೌಲವಿ ಅಬ್ದುಲ್ ಹಕ್ ಫಝಲ್ ಹಝ್ರತ್ ಅಹ್ಮದರ ಕುರಿತು ಮಾತನಾಡಿದರು.

ದ್ವಿತೀಯ ದಿನ ಅಹ್ಮದಿಯಾ ವಿದ್ವಾಂಸರು ವಿವಿಧ ವಿಷಯಗಳ ಬಗ್ಗೆ ಭಾಷಣವಿತ್ತರು.

## ಮಹಾರಾಷ್ಟ್ರ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಮಹಾರಾಷ್ಟ್ರ ಅಹ್ಮದಿಯಾ ವಾರ್ಷಿಕ ಸಮ್ಮೇಳ ನವು ಅಕ್ಟೋಬರ್ 13 ಮತ್ತು 14ರಂದು ಬೊಂಬಾಯಿ ಯಲ್ಲಿ ಜರಗಿತು. ಚೌಪಾಟಿಯ ಬಿರ್ಲಾ ಹಾಲ್‌ನಲ್ಲಿ 13ರಂದು ಸರ್ವ ಮತಾಚಾರ್ಯರ ದಿನವನ್ನು ಆಚರಿಸ ಲಾಯಿತು. ಮಾರುದಿನ "ಇಂದಿನ ಕಾಲದಲ್ಲಿ ಮತದ ಆವಶ್ಯಕತೆ" ಎಂಬ ವಿಷಯದಲ್ಲಿ ಭಾಷಣಗಳು ನಡೆದವು. ಭಾರತದ ಅಹ್ಮದಿಯಾ ಕೇಂದ್ರದ ಪ್ರಧಾನ ಕಾರ್ಯದರ್ಶಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಮತ್ತು ಪ್ರಚರಣಾ ಕಾರ್ಯದರ್ಶಿ ಮೌಲಾನ ಷರೀಫ್ ಅಹ್ಮದ್ ಸಾಹೇಬ್ ಅಮೀನಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

## ಹೈದರಾಬಾದಿನಲ್ಲಿ ಒಬ್ಬ ಮಾಜಿ ಸಂಪಾದಕ ಅಹ್ಮದಿಯಾದರು

ಹೈದರಾಬಾದಿನಿಂದ ಪ್ರಕಟವಾಗುತ್ತಿರುವ ಗ್ರೇ ಟರ್ (GREATER) ಎಂಬ ಪತ್ರಿಕೆಯ ಮಾಜಿ ಸಂಪಾ ದಕರಾದ ಮೀರ್ ಆರಿಫುದ್ದೀನ್ ಹುಸೇನ್ ಖಾನ್ ಎಂಬ ಯುವಕ ಇತ್ತೀಚೆಗೆ ಅಹ್ಮದಿಯತ್ ಸ್ವೀಕರಿಸಿದ ರೆಂದು ತಿಳಿದು ಬಂದಿದೆ.

## ಆಂಧ್ರ ಪ್ರದೇಶದ ಮಹ್‌ದವಿ ಪಂಥಕ್ಕೆ ಸೇರಿದ ಓರ್ವ ಮತ ಪಂಡಿತರು ಅಹ್ಮದಿಯಾದರು

ಆಂಧ್ರ ಪ್ರದೇಶಕ್ಕೆ ಸೇರಿದ ಝಹೀರಾಬಾದ್ ಎಂಬ ಸ್ಥಳದ ಮೌಲಾನ ಮೆಹ್ರಾಬ್ ಖಾನ್ ಸಾಹೇಬ್ ಎಂಬ ಮತ ಪಂಡಿತರು ಇತ್ತೀಚೆಗೆ ಅಹ್ಮದಿಯತ್ ಸ್ವೀಕ ರಿಸಿದರು. ಅವರಿಗೆ ಈಗ 73 ವರ್ಷ ಪ್ರಾಯವಾಗಿದ್ದು ಕಳೆದ ಮೂವತ್ತು ವರ್ಷಗಳಿಂದ ಅಹ್ಮದಿಯಾ ಸಂಘಟ ನೆಯ ಕುರಿತು ಅಧ್ಯಯನ ನಡೆಸುತ್ತಿದ್ದರು. ಈ ಪ್ರದೇಶದ ಅಸಂಖ್ಯಾತ ಮತ ಪಂಡಿತರು ಇವರ ಶಿಷ್ಯರಾಗಿದ್ದರು. ಅಲ್ಲದೆ ಇವರ ಮೂಲಕ ಸುಮಾರು ಒಂದು ನೂರು ಮಂದಿ ಅಮುಸ್ಲಿಮರು ಇಸ್ಲಾಮ್ ಧರ್ಮ ಸ್ವೀಕರಿಸಿ ದ್ದರು. "ಈ ಪ್ರಾಯದಲ್ಲಿ ನಿಮಗೆ ಅಹ್ಮದಿಯಾ ಜಮಾ ಅತಿಗೆ ಸೇರಲು ಯಾವ ರೀತಿ ಪ್ರೇರಣೆಯುಂಟಾಯಿತು?" ಎಂದು ಕೇಳಿದುದಕ್ಕೆ ಅವರು ಹೀಗೆ ಉತ್ತರಿಸಿದರು:—

"ನಾನು ಗ್ರಂಥಗಳ ಪಾರಾಯಣದಿಂದಲೇ ಸತ್ಯವನ್ನು ಮನಗಂಡಿದ್ದೆನು. ಆದರೆ ಎಲ್ಲದಕ್ಕಿಂತ ಹೆಚ್ಚು ನನ್ನ ಮೇಲೆ ಪ್ರಭಾವ ಬೀರಿದುದು ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹೇಬರ ಜೀವನವಾಗಿತ್ತು. ಅವರು ತಾನು ಮಹದಿಯೆಂದು ವಾದಿಸಿದಾಗ ಪರ ಜನರು ಮಾತ್ರವಲ್ಲದೆ ಸ್ವಜನರೂ ಅವರ ವಿರೋಧಿಗಳಾದರು ಅವರ ಸಂಘಟನೆಯನ್ನು ನಾಶಗೊಳಿಸಲು ಮತ ಪಂಡಿತರು ಉಪಯೋಗಿಸದೆ ಬಿಟ್ಟ ಆಯುಧ ಯಾವುದೂ ಇಲ್ಲ. ಆದರೆ ಈ ಸಂಘಟನೆಯ ಸಂಖ್ಯೆ ಒಂದು ಕೋಟಿಯನ್ನು ಮೀರಿತು. ಯಥಾರ್ಥವೇನೆಂದರೆ ದೇವರ ಸಹಾಯ ಈ ಸಂಘಟನೆಗಿದೆ. ಹಝ್‌ರತ್ ಮಿರ್ಝಾ ಸಾಹೇಬರು ಈ ರೀತಿ ಮೊದಲೇ ಹೇಳಿರುವರು:

ಕಭೀ ನುಸ್ರತ್ ನಹೀಂ ಮಿಲ್ತೀ ದರೇ ಮೌಲ ಸೆ ಗಂದೋಂ ಕೊ

ಕಭೀ ಝಾಯ ನಹೀಂ ಕರ್‌ತಾ ವೊಹ್ ಅಪ್ನೆ ನೇಕ್ ಬಂದೋಂ ಕೊ

(ಮಲೀನ ಹೊಂದಿದವರಿಗೆ ದೇವರ ಸಹಾಯ ಎಂದಿಗೂ ದೊರಕಲಾರದು; ತನ್ನ ಪರಿಶುದ್ಧ ದಾಸರನ್ನು ಆತನು ಎಂದಿಗೂ ನಾಶಗೊಳಿಸಲಾರನು)

.................ಈ ಕಾರಣದಿಂದಲೇ ನಾನು ನನ್ನ ವಿಶ್ವಾಸವನ್ನು ಬಹಿರಂಗಗೊಳಿಸಲು ನಿರ್ಬಂಧಿತನಾದೆನು.

□

# ನಿಧನ ವಾರ್ತೆಗಳು

ಜನಾಬ್ ಚೌಧುರಿ ಅಬ್ದುಲ್ ಹಕ್ ಸಾಹೇಬರ ಚತುರ್ಥ ಪುತ್ರಿ ರಶೀದಾ ಫೌಝಿಯಾ (26) ಅಗೋಸ್ತು 31ರಂದು ಲಾಯಲ್‌ಪುರದಲ್ಲಿ ಅಲ್ಪ ಕಾಲದ ಅಸ್ವಾಸ್ಥ್ಯ ನಿಮಿತ್ತ ಮರಣ ಹೊಂದಿದರು. (ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ತಂದೆ, ತಾಯಿ, ಮೂವರು ಸಹೋದರರು, ಮೂವರು ಸಹೋದರಿಯರು, ಪತಿ ಮತ್ತು ಎಳೆಯ ಕಂದನನ್ನು ಆಕೆ ಅಗಲಿ ಹೋಗಿರುವರು. ರಶೀದಾ ಅವರು ಮೊಗ್ರಾಲ್ ಅಹ್ಮದಿಯ ಜಮಾಅತಿನ ಹಣಕಾಸು ಕಾರ್ಯದರ್ಶಿ ಜನಾಬ್ ಸಿದ್ದೀಖ್ ಅಶ್ರಫಲಿ ಸಾಹೇಬರ ನಾದಿನಿಯಾಗಿರುವರು.

*　　*　　*　　*

ಮೊಗ್ರಾಲ್ ಜಮಾಅತಿನ ಉಪಾಧ್ಯಕ್ಷರಾದ ಜನಾಬ್ ಟಿ. ಎ. ಅಬ್ದುಲ್ ಖಾದಿರ್ ಸಾಹೇಬರ ದ್ವಿತೀಯ ಪುತ್ರ ಟಿ. ಎ. ಶರೀಫ್ ಅಹ್ಮದ್ (25) ಅವರು ಅಕ್ಟೋಬರ್ 4ರಂದು ಸೌದಿಯಲ್ಲಿ ಆಕಸ್ಮಿಕವಾಗಿ ನಿಧನ ಹೊಂದಿದರು. (ಇನ್ನಾ ಅಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ತಂದೆ, ತಾಯಿ, ಸಹೋದರ, ಇಬ್ಬರು ಸಹೋದರಿಯರು, ಪತ್ನಿ ಮತ್ತು ಎಳೆಯ ಪುತ್ರಿಯನ್ನು ಮೃತರು ಅಗಲಿ ಹೋಗಿರುವರು.

*　　*　　*　　*

ಮೃತರಾದ ಈರ್ವರ ಆತ್ಮಗಳಿಗೂ ಅಲ್ಲಾಹು ಚಿರಶಾಂತಿಯನ್ನೂ ಅವರ ಸಂತಪ್ತ ಕುಟುಂಬಗಳಿಗೆ ಸಹನೆಯನ್ನೂ ಕರುಣಿಸಲಿಯೆಂದು ಪ್ರಾರ್ಥಿಸುತ್ತೇವೆ.

# ★ ಕಅಬ ಆಕ್ರಮಣ ★

ಮುಸ್ಲಿಮನು ದಿನಂಪ್ರತಿ ಐದು ಸಲ ಮಕ್ಕಾದ ಕಅಬಕ್ಕೆ ಅಭಿಮುಖವಾಗಿ ಪ್ರಾರ್ಥಿಸುತ್ತಾನೆ. ಕಅಬದ ಸುತ್ತುಮುತ್ತಲೂ ನಿರ್ಮಿಸಲಾದ ಬೃಹತ್ತಾದ ಮಸೀದಿಯನ್ನು ಮಸ್ಜಿದುಲ್ ಹರಾಮ್ ಎಂದು ಕರೆಯಲಾಗುತ್ತದೆ. ಈ ಮಸೀದಿ, ಝಂ ಝಂ ತಟಾಕ, ಸಫಾ–ಮರ್ವಾ ಗುಡ್ಡೆಗಳು ಸೇರಿದ ಪ್ರದೇಶವನ್ನು "ಹರಂ" ಎಂದು ಕರೆಯುತ್ತಾರೆ. ಈ ಸ್ಥಳಗಳಲ್ಲಿ ಕಲಹ ಮಾಡುವುದು, ಮೃಗಗಳನ್ನು ಹಿಂಸಿಸುವುದು, ಸಸ್ಯಾದಿಗಳನ್ನು ನಾಶಪಡಿಸುವುದು ಇತ್ಯಾದಿ, ಇಸ್ಲಾಮಿಕ ನಿಯಮಪ್ರಕಾರ ನಿಷಿದ್ಧ. ಹಾಗೆ ಈ ವಲಯ ಪವಿತ್ರ ಹಾಗೂ "ಶಾಂತಿ ಕ್ಷೇತ್ರ"ವೆನಿಸಿದೆ. ಇಂತಹ ಪಾವನ ಕ್ಷೇತ್ರದಲ್ಲಿ ಆಯುಧಧಾರಿಗಳಾದ ಗುಂಪೊಂದು ಅತ್ಯಂತ ನೀಚವಾಗಿ ವರ್ತಿಸಿದ್ದು ಲೋಕದಾದ್ಯಂತ ಮುಸ್ಲಿಮರಿಗೆ ಅತೀವ ನೋವನ್ನುಂಟುಮಾಡಿದೆ.

ನವೆಂಬರ್ 20ರ ಪ್ರಾತ:ಕಾಲದ ನಮಾಝಿನ ವೇಳೆ ಆಕ್ರಮಣಕಾರಿಗಳು ಮಸ್ಜಿದುಲ್ ಹರಾಮನ್ನು ಪ್ರವೇಶಿಸಿದರು. ಅಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಸಾವಿರಾರು ಜನರಲ್ಲಿ ಹಲವರನ್ನು ಅವರು ಒತ್ತೆಯಿರಿಸಿದರು. ಅವರ ಪೈಕಿ 27ರ ಹರೆಯದ ಒಬ್ಬ ಯುವಕ ವೇದಿಕೆಯನ್ನೇರಿ ತಾನು "ಮಹ್‌ದಿ ಇಮಾಂ", ತನ್ನನ್ನು ಎಲ್ಲರೂ ನಂಬಬೇಕು, ಇನ್ನು ಮುಂದೆ ಈ ಮಸೀದಿಯ ಇಮಾಂ ತಾನು ಎಂದು ಗರ್ಜಿಸಿದನು. ನಂತರ ಸೌದಿ ಅರೇಬಿಯಾದ ಭದ್ರತಾ ಪಡೆಯೊಂದಿಗೆ ನಡೆದ ಹೋರಾಟದಲ್ಲಿ ಈ 'ಮಹ್‌ದಿ' ಮೃತಪಟ್ಟನೆಂದು ಒಂದು ವಾರ್ತಾಮೂಲ ಹೇಳುತ್ತದೆ. ಅಲ್ಲ; ಆತನೇ ಆತ್ಮಹತ್ಯೆ ಮಾಡಿಕೊಂಡನೆಂದು ಇನ್ನೊಂದು ವಾರ್ತೆ ಹೇಳುತ್ತದೆ. ಈ 'ಮಹ್‌ದಿ ವಾದಿ' ಮಕ್ಕಾ ವಿಶ್ವವಿದ್ಯಾಲಯದ ಫಿಕ್‌ಹ್ ವಿದ್ಯಾರ್ಥಿಯಂತೆ! ಕೈಯಲ್ಲಿ ಖಡ್ಗವನ್ನು ಹಿಡಿದು ಒಬ್ಬ ರಕ್ತಪಿಪಾಸು ಮಹ್‌ದಿ ಆಗಮಿಸಲಿಕ್ಕಿದೆಯೆಂಬ ಮುಸ್ಲಿಮರ ತಪ್ಪಾದ ನಂಬಿಕೆಯು ಈ 'ಮಹ್‌ದಿ ವಾದಿ'ಗೆ ಸ್ಫೂರ್ತಿಯನ್ನಿತ್ತಿರಬಹುದೇ ?

ಸುಮಾರು ತೊಂಭತ್ತು ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಅಹ್ಮದ್‌ರವರು, ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದ ಆ ಮಹ್‌ದಿ ತಾನೆಂದು ವಾದಿಸಿದರು. ಮಹ್‌ದಿಯ ಸತ್ಯತೆಯ ಪ್ರಧಾನ ಲಕ್ಷಣಗಳ ಪೈಕಿ, ಒಂದೇ ರಮ್ಜಾನ್ ಮಾಸದಲ್ಲಿ ಸೂರ್ಯ–ಚಂದ್ರ ಗ್ರಹಣಗಳು ಮಹ್‌ದಿಯ ಕಾಲದಲ್ಲಿ ಉಂಟಾಗುವುವೆಂದು ಪೈಗಂಬರರು ಹೇಳಿದ್ದು 1894ನೇ ಇಸವಿಯಲ್ಲಿ ಸಂಭವಿಸಿದುವು. ಹಝ್‌ರತ್ ಅಹ್ಮದ್ ಕೈಯಲ್ಲಿ ಖಡ್ಗ ಹಿಡಿದು ಬಂದಿರಲಿಲ್ಲ. ಜನರ ಹೃದಯಗಳನ್ನು ಖಡ್ಗದಿಂದಲ್ಲ, ಪ್ರೀತಿಯಿಂದ ಜಯಿಸಬೇಕೆಂದು ಅವರು ಉಪದೇಶಿಸಿದರು. ಬಹುಸಂಖ್ಯಾತ ಮುಸ್ಲಿಮರು ಅವರ ಮಾತಿಗೆ ಕಿವಿಗೊಡಲಿಲ್ಲ; ಅವರನ್ನು ಕಟುವಾಗಿ ವಿರೋಧಿಸಿದರು: ಅಪಹಾಸ್ಯ ಮಾಡಿದರು; ಕೊಲ್ಲಲು ಪ್ರಯತ್ನಿಸಿದರು. ಆದರೆ ವೈರಿಗಳ ಶ್ರಮವನ್ನು ಅಲ್ಲಾಹು ವಿಫಲಗೊಳಿಸಿದನು. ಹಝ್‌ರತ್ ಅಹ್ಮದರ ಅನುಯಾಯಿಗಳ ಸಂಖ್ಯೆ ದಿನೇದಿನೇ ಹೆಚ್ಚುತ್ತಾ ಈಗ ಒಂದು ಕೋಟಿಯನ್ನು ಮೀರಿದೆ. (ಅಲ್ಲಾಹುವಿಗೆ ಸ್ತುತಿ).

ಕಅಬ ಮಂದಿರದ ಮೇಲೆ ಆಕ್ರಮಣ ಉಂಟಾದುದನ್ನು ಪ್ರತಿಭಟಿಸುವ ರೀತಿಯಲ್ಲಿ ಹೈದರಾಬಾದಿನಲ್ಲಿ 'ಮುಸ್ಲಿಮ'ರೆಂದು ಹೇಳಿಕೊಳ್ಳುವ ಕೆಲವು ಸಂದರ್ಭಸಾಧಕರು ಹರತಾಳಕ್ಕೆ ಕರೆ ನೀಡಿದರು. ಅಂಗಡಿಗಳ ಬಾಗಿಲು ಮುಚ್ಚಲು ಅವರು ಬಲವಂತಪಡಿಸಿದರು. ಅದಕ್ಕೊಪ್ಪದವರ ಅಂಗಡಿಗಳ ಮೇಲೆ ಕಲ್ಲೆಸೆತ ನಡೆಯಿತು. ಅನೇಕ ಅಂಗಡಿಗಳನ್ನು ಲೂಟಿಮಾಡಲಾಯಿತು. ಹಲವಕ್ಕೆ ಕಿಚ್ಚಿಡಲಾಯಿತು. ಮಾತ್ರವಲ್ಲ; ಪೂಜಾ ಮಂದಿರಗಳ ಮೇಲೆ ಹಲ್ಲೆ ನಡೆಸಲು ಸಹ ಪ್ರಯತ್ನಿಸಲಾಯಿತು. ಇದು ಅತ್ಯಂತ ಖಂಡನೀಯ ಕೃತ್ಯವಾಗಿದೆ. ಇಸ್ಲಾಂ ಧರ್ಮದ ಸುಂದರ ಅಧ್ಯಾಪನಗಳ ಕುರಿತು ತಿಳುವಳಿಕೆ ಇದ್ದವರು ಈ ರೀತಿಯ ದುಷ್ಕೃತ್ಯಕ್ಕೆ ಇಳಿಯಲಾರರು. ಯಾರಿಗೂ ಹಾನಿಮಾಡದಿರಲಿಕ್ಕೂ ಯಾವ ಧರ್ಮದವರ ಆರಾಧನಾಲಯವಾದರೂ ಅದನ್ನು ಗೌರವಭಾವದಿಂದ ಕಾಣಲಿಕ್ಕೂ ಇಸ್ಲಾಂ ಧರ್ಮ ಬೋಧಿಸುತ್ತದೆ.

ಮುಸ್ಲಿಮರಲ್ಲಿ ಬಹುಸಂಖ್ಯಾತರು ಒಂದು ಕಡೆಯಲ್ಲಿ ಮೂಢನಂಬಿಕೆಗಳಲ್ಲಿ ಮುಳುಗಿರುವಾಗ ಇನ್ನೊಂದು ಕಡೆಯಲ್ಲಿ ಕೆಲವು ಪಂಗಡಗಳ ಜನರು ಸ್ವಾರ್ಥಸಾಧಿಸಲಿಕ್ಕೆ ಇಸ್ಲಾಮಿನ ಹೆಸರನ್ನು ಬಳಸುತ್ತಾರೆ. ಇಸ್ಲಾಂ ಧರ್ಮದ ಬಗ್ಗೆ ತಪ್ಪು ತಿಳಿದುಕೊಳ್ಳಲು ಇದು ಕಾರಣವಾಗುತ್ತದೆ. ಇದು ಅತ್ಯಧಿಕ ದು:ಖಕರವಾಗಿದೆ. ಇಸ್ಲಾಮಿನ ನೈಜರೂಪವನ್ನು ಲೋಕವು ದರ್ಶಿಸುವಂತಾಗುವ ಸಂದರ್ಭ ಬೇಗನೇ ಬಂದೊದಗಲಿಯೆಂದು ಈ ಸಂದರ್ಭದಲ್ಲಿ ನಾವು ಅತ್ಯಂತ ಕಳಕಳಿಯಿಂದ ಅಲ್ಲಾಹನೊಡನೆ ಪ್ರಾರ್ಥಿಸುತ್ತೇವೆ.

—ಸಂಪಾದಕ.

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

(6)

ಲೇಖಕ: ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್

ಅನುವಾದಕ: ಮುಹಮ್ಮದ್ ಯೂಸುಫ್

## ದೈವಾಸ್ತಿತ್ವದ ಸಾಕ್ಷ್ಯಗಳು

ಪ್ರಥಮವಾಗಿ, ವಿವೇಕ ಮಾರ್ಗ ಮೂಲಕ ಪವಿತ್ರ ಖುರ್‌ಆನ್ ದೇವರ ಸತ್ತೆಯನ್ನು ರುಜುಪಡಿಸಲು ಪ್ರಬಲವಾದ ಹಲವು ವಿಚಾರಗಳನ್ನು ಹೇಗೆ ತೋರಿಸಿಕೊಟ್ಟಿದೆಯೆಂದು ನೋಡಿರಿ. ಒಂದೆಡೆಯಲ್ಲಿ ಖುರ್‌ಆನ್ ಹೀಗೆ ಹೇಳುತ್ತದೆ:

"ರಬ್ಬುನಲ್ಲದೀ ಅಅ್‌ತಾ ಕುಲ್ಲ ಷೈಇನ್ ಖಲ್ಕಹೂ ಸಮ್ಮ ಹದಾ" (20:51)–ನಮ್ಮ ದೇವರು ಎಲ್ಲಾ ವಸ್ತುವಿಗೂ ಅದರ ಪ್ರಕೃತಿಗನುಸಾರವಾದ ಸೃಷ್ಟಿಯನ್ನು ಪ್ರದಾನ ಮಾಡಿ, ಅನಂತರ ಅದರ ನಿರ್ದಿಷ್ಟ ಪರಿಪೂರ್ಣತೆಯನ್ನು ಪಡೆಯಲು ಮಾರ್ಗದರ್ಶನ ನೀಡಿದವನಾಗಿದ್ದಾನೆ.

ಮನುಷ್ಯ ಸಹಿತ ನೆಲ, ಜಲ ಮತ್ತು ವಾಯು ಮಂಡಲದಲ್ಲಿರುವ ಎಲ್ಲಾ ಜೀವಿಗಳ ಶರೀರ ರಚನೆಯನ್ನು ಪರಿಶೋಧಿಸಿ ಅವುಗಳ ಸ್ವಭಾವದ ಕುರಿತು ಚಿಂತಿಸುವುದಾದರೆ ಎಲ್ಲವೂ ಅವುಗಳ ಪ್ರಕೃತಿಗೆ ಅನುಯೋಜ್ಯವಾದ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿವೆಯೆಂದು ಕಾಣಬಹುದು. ಈ ವಿಷಯ ಪ್ರತಿಯೊಬ್ಬನು ಸಾಕಷ್ಟು ಚಿಂತಿಸಿನೋಡುವಷ್ಟು ವಿಪುಲತರದ್ದಾಗಿದೆ.

ದೇವರ ಆಸ್ತಿತ್ವವನ್ನು ಸಮರ್ಥಿಸಲು ಪವಿತ್ರ ಖುರ್‌ಆನ್ ತೋರಿಸುವ ಇನ್ನೊಂದು ಪುರಾವೆ, ಅವನು ಕಾರಣಕರ್ತ ಅಥವಾ ಆದಿಕಾರಣನೆಂದಾಗಿದೆ. ಖುರ್‌ಆನ್ ಹೀಗೆ ಹೇಳುತ್ತದೆ:

"ವ ಅನ್ನ ಇಲಾ ರಬ್ಬಿಕಲ್ ಮುನ್‌ತಹಾ" (53:43)–ಎಲ್ಲಾ ಕಾರ್ಯಕಾರಣ ಸರಣಿಗಳು ನಿನ್ನ ನಾಥನಲ್ಲಿ ಕೊನೆಗೊಳ್ಳುತ್ತವೆ.

ಗೋಚರಾಗೋಚರಗಳಾದ ಎಲ್ಲವೂ ಕಾರ್ಯಕಾರಣ ವ್ಯವಸ್ಥೆಯಿಂದ ಕೂಡಿಕೊಂಡಿವೆಯೆಂಬ ವಿಚಾರ ಸೂಕ್ಷ್ಮವಾಗಿ ಪರಿಶೀಲಿಸಿದರೆ ಕಾಣಬಹುದಾಗಿದೆ. ಈ ವ್ಯವಸ್ಥೆಯ ಸಾರ್ವತ್ರಿಕವಾದ ಪ್ರವರ್ತನೆಯೇ ನಾವು ಕಾಣುವ ವಿವಿಧ ವೈಜ್ಞಾನಿಕ ಹಾಗೂ ತತ್ವಜ್ಞಾನಗಳ ಸೃಷ್ಟಿಗೂ ಬೆಳವಣಿಗೆಗೂ ಕಾರಣವಾಗಿದೆ. ಸೃಷ್ಟಿಲೋಕದ ಯಾವ ಅಂಶವೂ ಈ ಕಾರ್ಯಕಾರಣಬಂಧದ ವ್ಯವಸ್ಥೆಯಿಂದ ಹೊರತಲ್ಲ. ಕೆಲವು ಇನ್ನು ಕೆಲವಕ್ಕೆ ಮೂಲಕಾರಣವಾಗಿಯೂ ಕೆಲವು ಶಾಖೆಗಳಾಗಿಯೂ ಇರುತ್ತವೆ. ಆದಿಕಾರಣದ ಹೊರತು ಪ್ರತಿಯೊಂದು ಕಾರಣ ಮತ್ತೊಂದು ಕಾರಣವನ್ನು ಅವಲಂಬಿಸಿದೆ. ಆ ಕಾರಣವು ಇನ್ನೊಂದು ಕಾರಣದ ಪರಿಣಾಮವಾಗಿದೆ. ಹೀಗೆ ಈ ಕಾರ್ಯಕಾರಣ ಸರಣಿ ಹಿಂದಕ್ಕೆ ಹೋಗುತ್ತಲಿರುತ್ತದೆ. ಆದರೆ ಅನಂತವಲ್ಲದ ಈ ಪ್ರಪಂಚದಲ್ಲಿ ನಡೆಯುತ್ತಿರುವ ಈ ಕಾರ್ಯಕಾರಣ ಸರಣಿ ಅನಂತವಾಗಿರಲು ಅಸಾಧ್ಯವಾದುದರಿಂದ ಅದು ಎಲ್ಲಿಯಾದರೂ ಒಂದು ಕಡೆ ಕೊನೆಗೊಳ್ಳಬೇಕಾಗಿದೆ. ಹೀಗೆ ಅತ್ಯಂತ ಕೊನೆಯ ಆ ಕಾರಣ ಪ್ರಪಂಚಕರ್ತನಾಗಿದ್ದಾನೆ. "ಎಲ್ಲಾ ಕಾರ್ಯಕಾರಣ ಸರಣಿಗಳು ನಿನ್ನ ನಾಥನಲ್ಲಿ ಕೊನೆಗೊಳ್ಳುತ್ತವೆ" ಎಂಬ ಪ್ರಸ್ತುತ ದೈವವಾಕ್ಯ ಈ ಅಂತಿಮ ಕಾರಣದೆಡೆಗೆ ಅಥವಾ ಆದಿಕಾರಣದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ.

ದೇವರ ಅಸ್ತಿತ್ವವನ್ನು ಸಾಬೀತುಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಮತ್ತೊಂದು ಪುರಾವೆ ಇದಾಗಿದೆ:

"ಲಶ್ಶಂಸು ಯನ್‌ಬಗೀ ಲಹಾ ಅನ್ ತುದ್‌ರಿ ಕಲ್ ಕಮರ ವಲಲ್ಲಯ್ಲು ಸಾಬಿಕುನ್ನಹಾರಿ ವ ಕುಲ್ಲುನ್ ಫೀ ಫಲಕಿನ್ ಯಸ್‌ಬಹೂನ" (36:41) – ಸೂರ್ಯ ನಿಗೆ ಚಂದ್ರನ ಬೆನ್ನುಹಿಡಿಯಲು ಸಾಧ್ಯವಿಲ್ಲ. ರಾತ್ರಿಗೆ ಹಗಲನ್ನು ಹಿಂದೆಹಾಕಲಿಕ್ಕೂ ಸಾಧ್ಯವಿಲ್ಲ, ಎಲ್ಲವೂ ನಿರ್ದಿಷ್ಟ ಪಥಗಳಲ್ಲಿ ಸಂಚರಿಸುತ್ತವೆ.

ಈ ಗೋಳಗಳಲ್ಲಿ ಯಾವುದೂ ಅದರ ಸಂಚಾರ ಪಥವನ್ನು ವ್ಯತಿಕ್ರಮಿಸುವುದಿಲ್ಲ. ಅವುಗಳಿಗೆ ಒಬ್ಬ ನಿಯಾ ಮಕನಿಲ್ಲದಿರುತ್ತಿದ್ದರೆ ಅವು ನಾನಾವಿಧಗಳಲ್ಲಿ ಚಲಿಸಿ ಕ್ಷಣಮಾತ್ರದಲ್ಲಿ ನಾಶಗೊಳ್ಳುತ್ತಿದ್ದುವು. ಈ ಪುರಾವೆ ಪ್ರಕೃತಿ ನಿಯಮಗಳ ಕುರಿತು ಗಾಢವಾಗಿ ಚಿಂತಿಸುವವರಿಗೆ ಪ್ರಯೋಜನಕಾರಿಯಾಗಿದೆ. ಆಕಾಶದಲ್ಲಿ ಚಲಿಸುತ್ತಿರುವ ಅಸಂಖ್ಯಾತ ಗೋಳಗಳಿಗೆ ತುಸು ಮಾತ್ರವಾದರೂ ಗತಿ ವ್ಯತ್ಯಾಸವುಂಟಾದರೆ ಇಡೀ ಲೋಕವೇ ನಾಶ ಹೋದು ವುದು. ಈ ಗೋಳಗಳು ಪರಸ್ಪರ ಡಿಕ್ಕಿ ಹೊಡೆಯದೆ ಯೂ ಅವುಗಳ ಚಲನೆಯಲ್ಲಿ ಏನೂ ವ್ಯತ್ಯಾಸವಾಗದೆ ಯೂ ನಿರಂತರವಾದ ಚಲನೆಯಿಂದಾಗಿ ಅವುಗಳಿಗೆ ತೇವಾನವುಂಟಾಗದೆಯೂ ರೂಪ ವ್ಯತ್ಯಾಸವಾಗದೆಯೂ ಸಂಚರಿಸಿಕೊಂಡಿರುವುದು ಎಷ್ಟು ಅದ್ಭುತಕರವಾಗಿದೆ! ಅತ್ಯಂತ ವಿಪುಲವಾದ ಈ ಯಂತ್ರ ವಿಶೇಷ ಸರ್ವಸಮರ್ಥ ನಾದ ಒಬ್ಬ ಯಾಂತ್ರಿಕನ ನಿಯಂತ್ರಣಕ್ಕೆ ಅಧೀನವಾಗಿರ ದಿದ್ದರೆ ಅಸಂಖ್ಯಾತ ವರ್ಷಗಳಿಂದ ಯಾವ ನ್ಯೂನತೆಯಿ ಲ್ಲದೆ ಹೇಗೆ ಸ್ವಯಂ ಚಲಿಸಲು ಸಾಧ್ಯ? ಈ ಪರಿಪೂರ್ಣ ವಾದ ದೈವಶಕ್ತಿ ಮತ್ತು ಜ್ಞಾನವನ್ನು ಸೂಚಿಸುತ್ತಾ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳು ತ್ತದೆ:

"ಅಫಿಲ್ಲಾಹಿ ಶಕ್ಕುನ್ ಫಾತಿರಿಸ್ಸಮಾವಾತಿ ವಲ್ ಅರ್‌ಲಿ" (14:11)–ಹೀಗಿರುವ ಆಕಾಶಮಂಡಲವನ್ನೂ ಭೂಮಿಯನ್ನೂ ಸೃಷ್ಟಿಸಿದ ದೇವರ ಸತ್ತೆಯಲ್ಲಿ ಏನಾ ದರೂ ಸಂಶಯವಿದೆಯೇ ?

ಸೃಷ್ಟಿಕರ್ತನ ಅಸ್ತಿತ್ವವನ್ನು ಸಾಬೀತು ಪಡಿಸಲು ಪವಿತ್ರ ಖುರ್‌ಆನ್ ತೋರಿಸುವ ಬೇರೊಂದು ಪುರಾವೆ ಇದಾಗಿದೆ :

ಕುಲ್ಲು ಮನ್ ಅಲೈಹಾ ಫಾನಿನ್. ವ ಯಬ್‌ಕಾ ವಜ್‌ಹು ರಬ್ಬಿಕ ದುಲ್‌ಜಲಾಲಿ ವಲ್ ಇಕ್ರಾಂ". (55 : 27, 28) – ಸರ್ವ ವಸ್ತುಗಳೂ ನಶ್ವರ; ಪ್ರತಾಪ ವಂತನೂ ಮಹಾಮಹಿಮನೂ ಆದ ನಿನ್ನ ನಾಥನು ಮಾತ್ರ ಶಾಶ್ವತನಾಗಿರುವನು

ಈ ಭೂಮಿಯಿಡೀ ಛಿದ್ರ ಛಿದ್ರವಾಗಿ, ನಭಶ್ಚರ ಗೋಳಗಳೆಲ್ಲಾ ನಾಶವಾಗಿ, ಸಂಪೂರ್ಣ ಪ್ರಪಂಚವೇ ಶೂನ್ಯವಾಗುವುದೆಂದು ಬಾವಿಸೋಣ. ಆದರೂ ಎಂದೆಂ ದಿಗೂ ಅನಶ್ವರವೂ ಅಕ್ಷಯವೂ ಅಭೇದವೂ ಆದ ಯಾವುದೋ ಒಂದು ಶಕ್ತಿ ಯಥಾಸ್ಥಿತಿಯಲ್ಲಿ ನಂತರವೂ ಬಾಕಿಯಾಗಿರಬೇಕೆಂದು ನಮ್ಮ ವಿವೇಕವೂ ಮನ:ಸಾಕ್ಷಿ ಯೂ ಹೇಳುತ್ತದೆ. ಅಂತಹ ಒಂದು ಶಕ್ತಿಯೇ ಸರ್ವ ನಶ್ವರ ವಸ್ತುಗಳನ್ನು ನಾಸ್ತಿಯಿಂದ ಸೃಷ್ಟಿಸಿದ ದೇವ. 'ನಾಶ'ವು ಅವನಿಗೆ ಅಧೀನವಾಗಿರುವುದರಿಂದ ಅವನು ನಾಶದಿಂದ ಸುರಕ್ಷಿತನಾಗಿದ್ದಾನೆ.

ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ದೇವರ ಅಸ್ತಿತ್ವದ ಕುರಿತು ನುಡಿಯುವುದು ಈ ರೀತಿಯಾಗಿದೆ:

"ಅಲಸ್ತು ಬಿರಬ್ಬಿಕುಂ ಕಾಲೂ ಬಲಾ" (7:173) –ಸರ್ವಶಕ್ತನಾದ ದೇವರು ಆತ್ಮಗಳೊಡನೆ 'ನಿಮ್ಮ ಸೃಷ್ಟಿ ಕರ್ತನೂ ರಕ್ಷಕನೂ ಪಾಲಕನೂ ನಾನಲ್ಲವೇ?' ಎಂದು ಕೇಳಿದಾಗ, 'ಹೌದು ಖಂಡಿತವಾಗಿಯೂ' ಎಂದು ಅವರು ಹೇಳಿದರು.

ಈ ವಾಕ್ಯದಲ್ಲಿ ದೇವರು ಸಂಭಾಷಣೆಯ ರೂಪ ದಲ್ಲಿ, ಆತ್ಮದಲ್ಲಿ ಅವನು ನಿಕ್ಷೇಪಿಸಿಟ್ಟಿರುವ ಒಂದು ಸ್ವಭಾವ ವಿಶೇಷವನ್ನು, ಅದೇನೆಂದರೆ ಯಾವ ಆತ್ಮವೂ ಸ್ವಾಭಾವಿಕವಾಗಿ ದೇವರ ಅಸ್ತಿತ್ವವನ್ನು ಅಲ್ಲಗಳೆಯಲು ಶಕ್ತವಲ್ಲ ಎಂಬ ಸಂಗತಿಯನ್ನು ಎತ್ತಿ ತೋರಿಸುತ್ತದೆ. ನಾಸ್ತಿಕರು ದೇವರ ಸತ್ತೆಯನ್ನು ನಿರಾಕರಿಸುವುದು ಅವರ ಸ್ವಭಾವ ಅವರನ್ನು ಅದರೆಡೆಗೆ ಪ್ರೇರೇಪಿಸುವುದರಿಂದಲ್ಲ; ದೇವರಿದ್ದಾನೆಂಬುದಕ್ಕೆ ಅವರ ಬಳಿ ರುಜುವಾತೇನೂ ಇಲ್ಲವೆಂದು ಅವರು ಭಾವಿಸಿಕೊಂಡಿರುವುದರಿಂದಾಗಿದೆ. ಹೀಗೆ ಆದಿಕಾರಣನಾದ ದೇವರನ್ನು ಅಲ್ಲಗಳೆಯುವುದ ರೊಂದಿಗೆಯೇ ಅವರು ಪ್ರತಿಯೊಂದು ಕಾರ್ಯಕ್ಕೂ ಪ್ರತ್ಯಪ್ರತೇಕ ಕಾರಣವುಂಟೆಂದು ನಂಬುತ್ತಾರೆ. ಶರೀ ರಕ್ಕೆ ರೋಗ ತಗಲುವುದಾದರೆ ಅದಕ್ಕೆ ಏನೋ ಕಾರಣವಿರಬೇಕೆಂಬುದನ್ನು ನಿರಾಕರಿಸುವಷ್ಟರ ಮಟ್ಟಿ ಗಿನ ಬುದ್ಧಿಶೂನ್ಯರು ಲೋಕದಲ್ಲಿರಬಹುದೆಂದು ತೋ ರುವುದಿಲ್ಲ. ಈ ಪ್ರಪಂಚದಲ್ಲಿ ನಡೆಯುತ್ತಿರುವ ಪ್ರತಿ ಯೊಂದು ಸಂಭವಕ್ಕೆ ಒಂದು ಪ್ರತ್ಯೇಕ ಕಾರಣವಿಲ್ಲ

ವೆಂದಾದರೆ ಭೂಕಂಪ, ಬಿರುಗಾಳಿ, ಗ್ರಹಣ ಇತ್ಯಾದಿ ಘಟನೆಗಳ ಸಂಬಂಧಿಸಿ ಮುಂಚಿತವಾಗಿ ಲೆಕ್ಕಹಾಕುವಿಕೆ ಹಾಗೂ ದಿನಂಪ್ರತಿ ನಡೆಯುತ್ತಿರುವ ಇನ್ನೂ ಹಲವು ಸಂಗತಿಗಳ ಕುರಿತು ನೀಡುವ ಮುನ್ಸೂಚನೆಗಳು ಅಸಾಧ್ಯ ವೆಂದಾಗುತ್ತವೆ. ಒಟ್ಟಾರೆ, ಒಬ್ಬ ಮೀಮಾಂಸಕ ದೇವರ ಅಸ್ತಿತ್ವವನ್ನು ಒಪ್ಪದೇ ಇದ್ದರೂ ಕಾರ್ಯಕಾರಣ ವ್ಯವಸ್ಥೆಯನ್ನು ನಿರಾಕರಿಸಲು ಆತನಿಗೆ ಸಾಧ್ಯವಿಲ್ಲವಾದುದರಿಂದ ಆದಿಕಾರಣ ಸತ್ತೆಯನ್ನು ಅಲ್ಲಗಳೆಯಲಿಕ್ಕೂ ಆತನು ಶಕ್ತನಲ್ಲ. ಇದು ಒಂದು ರೀತಿಯಲ್ಲಿ ದೇವರ ಅಸ್ತಿತ್ವವನ್ನು ಅಂಗೀಕರಿಸಿದಂತೆಯೇ. ಆದರೆ ಅದು ಪೂರ್ಣವಾದ ವಿಶ್ವಾಸಸಮ್ಮತವಲ್ಲ. ದೇವರ ಅಸ್ತಿತ್ವವನ್ನು ಅಲ್ಲಗಳೆಯುವ ಒಬ್ಬ ನಾಸ್ತಿಕನನ್ನು ಈ ಪ್ರಾಪಂಚಿಕ ತುಚ್ಛಭೋಗೇಚ್ಛೆಗಳ ಕುರಿತು ತಿಳಿದುಕೊಳ್ಳದಂತೆ ಪ್ರಜ್ಞಾಹೀನನನ್ನಾಗಿ ಮಾಡಿ ಒಂದು ಪರಮಶಕ್ತಿಯ ಆಜ್ಞೆಗೆ ವಿಧೇಯನನ್ನಾಗಿ ಮಾಡಿದರೆ ಆ ಸ್ಥಿತಿಯಲ್ಲಿ ಅವನು ದೈವಾಸ್ತಿತ್ವವನ್ನು ಒಪ್ಪುವನೆಂಬುದಕ್ಕೆ ಹಲವರ ಅನುಭವ ದೃಷ್ಟಾಂತಗಳಿವೆ. ಪ್ರಸ್ತುತ ಖುರ್‌ಆನ್ ವಚನ ಅಂತಹ ಒಂದು ಸ್ಥಿತಿಯ ಕುರಿತು ಸೂಚಿಸಿದೆ. ಎಂದರೆ, ಮನುಷ್ಯನ ಪ್ರಾಪಂಚಿಕ ಭೋಗೇಚ್ಛೆಗಳು ಬಲಗೊಳ್ಳುತ್ತಿರುವಾಗ ಮಾತ್ರ ದೇವರ ಸತ್ತೆಯನ್ನು ನಿರಾಕರಿಸುವ ಬುದ್ಧಿ ತೋರುವುದೆಂದೂ ಪರಿಶುದ್ಧವಾದ ಮನುಷ್ಯ ಗುಣವಾದರೋ ದೈವಿಕವಿಚಾರದಿಂದ ಕೂಡಿಕೊಂಡಿದೆಯೆಂದೂ ಆ ವಾಕ್ಯ ತಿಳಿಸಿಕೊಡುತ್ತದೆ.

### ದೇವರ ಮಹಾತ್ಮೆ

ದೈವಾಸ್ತಿತ್ವವನ್ನು ರುಜುವಾತುಪಡಿಸುವರೆ ಪವಿತ್ರ ಖುರ್‌ಆನ್ ತೋರಿಸಿದ ಪುರಾವೆಗಳಲ್ಲಿ ಕೆಲವನ್ನು ಮೇಲೆ ವಿವರಿಸಲಾಗಿದೆ. ಇನ್ನು, ಆ ಪವಿತ್ರ ಗ್ರಂಥ ಯಾವ ದೇವನೆಡೆಗೆ ನಮ್ಮನ್ನು ಕರೆಯುತ್ತದೋ ಅವನಿಗಿರುವುದೆಂದು ಅದು ಹೇಳುವ ಮಹತ್ವಗಳೂ ಗುಣ ವಿಶೇಷಗಳೂ ಯಾವುವೆಂದು ನೋಡೋಣ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಹುವಲ್ಲಾಹುಲ್ಲದೀ ಲಾ ಇಲಾಹ ಇಲ್ಲಾ ಹುವ ಆಲಿಮುಲ್ ಗೈಬಿ ವ ಶ್ಶಹಾದತಿ ಹುವರ್ರಹ್ಮಾನುರ್ರಹೀಂ" (59:23)—ಆರಾಧನೆಗೂ ಅನುಸರಣೆಗೂ ಅರ್ಹನಾಗಿರುವ, ಭಾಗೀದಾರನಿಲ್ಲದ ಏಕನಾಗಿರುವವನೇ ದೇವನು.

ಈ ವಚನದಲ್ಲಿ ದೇವರಿಗೆ ಭಾಗೀದಾರನಿಲ್ಲವೆಂದು ಹೇಳಿರುವುದೇಕೆಂದರೆ, ಅವನು ನಿಸ್ತುಲನೂ ಏಕನೂ ಅಲ್ಲವೆಂದಾದರೆ ಅವನ ಶಕ್ತಿ ಒಂದೊಮ್ಮೆ ಭಾಗೀದಾರನಿಗೆ ಅಧೀನವಾಗಿ ಅವನ ದೇವತ್ವ ನಷ್ಟಹೊಂದಲು ಹೇತುವಾಗುವುದರಿಂದಾಗಿದೆ. ಮಾತ್ರವಲ್ಲ, ಅವನ ಹೊರತು ಆರಾಧನೆಗರ್ಹನು ಇನ್ನಾರೂ ಇಲ್ಲವೆಂದು ಹೇಳಿರುವುದು ಅವನು ಸಕಲಗುಣ ಸಂಪೂರ್ಣನೆಂದು ಸ್ಪಷ್ಟೀಕರಿಸಲಿಕ್ಕಾಗಿದೆ. ಗುಣ ವೈಶಿಷ್ಟ್ಯಗಳ ಧಾರಾಳತ್ವವನ್ನು ಆಧಾರವಾಗಿರಿಸಿ ಸೃಷ್ಟಿಗಳಲ್ಲಿ ಒಂದನ್ನು ದೇವರೆಂದು ಆರಿಸಲು ಭಾವಿಸುವುದಾದರೆ, ದೇವರಿಗಿರಬೇಕಾದ ಪರಮ ಶ್ರೇಷ್ಠ ಗುಣಗಳು ಆ ಸೃಷ್ಟಿಯಲ್ಲಿವೆಯೆಂದು ಊಹಿಸುವುದಾದರೆ, ಅದೆಂದಿಗೂ ಸಕಲ ಶ್ರೇಷ್ಠ ಗುಣಗಳಿಂದಲೂ ವಿಶೇಷಣಗಳಿಂದಲೂ ವಿಭೂಷಿತನಾಗಿರುವ, ಸ್ವಯಂ ಪರಿಪೂರ್ಣನೂ ಅತ್ಯುನ್ನತನೂ ಆಗಿರುವ ನಿಜವಾದ ದೇವನಿಗೆ ಸಮಾನವಾಗಿರಲಾರದು. ಸೃಷ್ಟಿಕರ್ತನಿಗೆ ಮಾತ್ರ ಸಲ್ಲಿಸಲ್ಪಡಬೇಕಾದ ಆರಾಧನಾದಿ ಭಕ್ತಿಪ್ರಕಟನೆಗಳಿಗೆ ಸೃಷ್ಟಿಗಳಲ್ಲಿ ಯಾರನ್ನಾದರೂ ಪಾಲುಗಾರನನ್ನಾಗಿ ಮಾಡುವುದು ಬಹಳ ಅನ್ಯಾಯ.

ಮೇಲೆ ಉದ್ಧರಿಸಿದ ಖುರ್‌ಆನ್ ವಾಕ್ಯದಲ್ಲಿ ಹೇಳಲಾದ ಒಂದು ದೇವನಾಮ "ಆಲಿಮುಲ್‌ಗೈಬ್" ಎಂದಾಗಿದೆ. ಅಂದರೆ, ಅವನು "ತನ್ನ ತತ್ವವನ್ನು ತಾನು ಮಾತ್ರ ತಿಳಿಯುವ ಅಂತರ್ಯಾಮಿ" ಆಗಿದ್ದಾನೆ. ಅವನ ತತ್ವವನ್ನು ಪರಿಮಿತವಾದ ಮನುಷ್ಯಶಕ್ತಿಗೆ ಪೂರ್ಣವಾಗಿ ಗ್ರಹಿಸಲು ಸಾಧ್ಯವಿಲ್ಲ. ಸೂರ್ಯ, ಚಂದ್ರ, ಮತ್ತಿತರ ದೇವಸೃಷ್ಟಿಗಳ ಸ್ವರೂಪವನ್ನು ತಿಳಿದುಕೊಳ್ಳಲು ನಮಗೆ ಸಾಧ್ಯವಿದೆ. ಆದರೆ ಸೃಷ್ಟಿಕರ್ತನಾದ ದೇವನ ಸತ್ತೆಯನ್ನು ಸಮಗ್ರವಾಗಿ ಗ್ರಹಿಸಲಿಕ್ಕೆ ಸಾಧ್ಯವಿಲ್ಲ.

ಮೇಲಿನ ವಾಕ್ಯದಲ್ಲಿ ಹೇಳಲಾದ ಇನ್ನೊಂದು ದೇವನಾಮ "ಆಲಿಮುಶ್ಶಹಾದತ್" ಎಂದಾಗಿದೆ. ಅಂದರೆ "ತನಗೆ ಯಾವುದೂ ಗೋಪ್ಯವಾಗಿರದೆ ಸಕಲವನ್ನೂ ಸ್ಪಷ್ಟವಾಗಿ ತಿಳಿಯುವವನು" ಎಂದು. ಸೃಷ್ಟವಸ್ತುಗಳಲ್ಲಿ ಯಾವುದಾದರೊಂದನ್ನು ಅವನು ತಿಳಿಯದಿರುವುದು ಅವನ ದೇವತ್ವಕ್ಕೆ ಅನುಯೋಜ್ಯವಲ್ಲ. ಅವನು ಪ್ರಪಂಚದ ಕಣ ಕಣಗಳನ್ನು ಸೂಕ್ಷ್ಮವಾಗಿ ಕಾಣುತ್ತಾನೆ. ಆದರೆ ಮನುಷ್ಯನಿಗೆ ಅದು ಸಾಧ್ಯವಲ್ಲ. ಈ ಪ್ರಪಂಚ ವ್ಯವಸ್ಥೆಯ ಅಂತ್ಯ ಯಾವಾಗ ಸಂಭವಿಸುವುದೆಂದು ದೇವ

ನಲ್ಲದೆ ಮತ್ಯಾರಿಗೂ ತಿಳಿಯದು. ಅವನು ಎಲ್ಲಾ ವಸ್ತುಗಳ ಕಾಲ ನಿರ್ಣಯವನ್ನು ಪೂರ್ಣವಾಗಿ ತಿಳಿಯುತ್ತಾನೆ.

ದೇವರ ಇನ್ನೊಂದು ವಿಶೇಷಣನಾಮ "ಹೂವರ್ರ‍್ರಹ್ಮಾನ್' ಎಂದಾಗಿದೆ. ಅಂದರೆ, ಅವನು ಸಕಲ ಜೀವ ಜಾಲಗಳನ್ನು ಸೃಷ್ಟಿಸುವುದಕ್ಕೆ ಮುಂಚಿತವಾಗಿ ಅವುಗಳ ಸುಖಸೌಕರ್ಯಗಳಿಗೆ ಆವಶ್ಯಕವಾದ ಸಕಲ ಸಾಧನಗಳನ್ನು ಯಾವುದೇ ಕರ್ಮದ ಪ್ರತಿಫಲವಾಗಿಯಲ್ಲದೆ, ತನ್ನ ಅಪಾರ ದಯೆಯಿಂದ ಸಿದ್ಧಪಡಿಸಿದವನಾಗಿದ್ದಾನೆ. ಅವನು ನಮ್ಮ ಸೃಷ್ಟಿಗೂ ಕರ್ಮಾನುಷ್ಠಾನಕ್ಕೂ ಮೊದಲೇ ನಮ್ಮ ಅಗತ್ಯಕ್ಕಾಗಿ ಸೂರ್ಯಗೋಳವನ್ನೂ ವಿಶಾಲ ಭೂಮಿಯನ್ನೂ ಅದರಲ್ಲಡಕವಾದ ಅಸಂಖ್ಯಾತ ಅನುಗ್ರಹ ವಸ್ತುಗಳನ್ನೂ ತಯಾರಿಸಿಟ್ಟು ತನ್ನ ನಿಸ್ಸೀಮ ಕೃಪೆಯನ್ನು ಪ್ರಕಟಪಡಿಸಿದ್ದಾನೆ. ಅವನ ಈ ಅತೀವ ಕೃಪಾಗುಣಕ್ಕೆ "ರಹ್ಮಾನಿಯ್ಯತ್" ಎಂದೂ ಆ ಸರ್ವದಾತನನ್ನು "ಅರ್ರಹ್ಮಾನ್" ಅಥವಾ "ಕೃಪಾನಿಧಿ" ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ.

ಇನ್ನೊಂದು ವಿಶೇಷಣ "ಅರ್ರಹೀಂ" ಎಂದಾಗಿದೆ. ಅಂದರೆ, ಸತ್ಕರ್ಮಗಳಿಗೆ ಸತ್ಫಲಗಳನ್ನು ನೀಡುವವನೂ ಯಾರ ಪ್ರಯತ್ನವನ್ನು ಸಹ ನಿಷ್ಫಲಗೊಳಿಸದವನೂ ಆದ ಕರುಣಾಮೂರ್ತಿ. ದೇವರ ಈ ಕರುಣಾಪ್ರಕಟನೆಗೆ "ರಹೀಮಿಯ್ಯತ್" ಎಂದೂ ಆ ದಯಾಸಾಗರನನ್ನು "ಅರ್ರಹೀಂ" ಎಂದೂ ಹೇಳಲಾಗಿದೆ.

ಖುರ್‌ಆನಿನಲ್ಲಿ ಹೇಳಲಾದ ಮತ್ತೊಂದು ದೈವ ನಾಮ "ಮಾಲಿಕಿ ಯೌಮಿದ್ದೀನ್" ಅಥವಾ "ಪ್ರತಿಫಲ ನೀಡಲ್ಪಡುವ ದಿನದ ಒಡೆಯ" ಎಂದಾಗಿದೆ. ಅಂದರೆ, ಕರ್ಮಕ್ಕನುಸಾರವಾದ ಶಿಕ್ಷಾರಕ್ಷೆಯ ಸರ್ವಾಧಿಕಾರವನ್ನು ಹೊಂದಿರುವವನು. ಸರ್ವಲೋಕದ ನ್ಯಾಯಾಧೀಶ ಅವನೇ ಆಗಿದ್ದಾನೆ. ಅವನು ತನಗೆ ಸೃಷ್ಟಿಗಳೊಂದಿಗೆ ಯಾವುದೇ ಬಂಧವಿಲ್ಲದಂತೆ ಭೂಮ್ಯಾಕಾಶಗಳ ಅಧಿನಾಯಕತ್ವವನ್ನು ಇನ್ನಾರಿಗಾದರೂ ಒಪ್ಪಿಸಿಲ್ಲ; ಹಾಗೆಯೇ ಸ್ವತಂತ್ರವಾಗಿ ಲೋಕದಲ್ಲಿ ಶಿಕ್ಷಾರಕ್ಷ ಕ್ರಮವನ್ನು ನಡೆಸುವ ಅಧಿಕಾರವನ್ನೂ ನೀಡಿಲ್ಲ.

ದೇವರ ಗುಣ ಮಹಿಮೆಗಳನ್ನು ವಿವರಿಸುತ್ತಾ ಪವಿತ್ರ ಖುರ್‌ಆನ್ 59:24ರಲ್ಲಿ ಹೀಗೆ ಹೇಳುತ್ತದೆ:

"ಅಲ್ ಮಲಿಕುಲ್ ಖುದ್ದೂಸು ಸ್ಸಲಾಮುಲ್ ಮುಅ್‌ಮಿನುಲ್ ಮುಹೈಮಿನುಲ್ ಅಝೀಝುಲ್ ಜಬ್ಬಾರುಲ್ ಮುತಕಬ್ಬಿರ್."

ಈ ವಾಕ್ಯದಲ್ಲಿ ಹೇಳಲಾದ ದೇವರ ಮಹಿಮೆಗಳಲ್ಲಿ ಒಂದು 'ಅಲ್ ಮಲಿಕುಲ್ ಖುದ್ದೂಸ್' ಎಂದಾಗಿದೆ. ಅಂದರೆ ಎಲ್ಲಾ ವಿಧ ನ್ಯೂನತೆಗಳಿಂದ ಹೊರತಾದ ಪರಿಶುದ್ಧನಾದ ರಾಜ ಎಂದು. ಲೌಕಿಕ ಅರಸೊತ್ತಿಗೆಯಾದರೋ ದೋಷರಹಿತವೆಂದಾಗಲಿ ಅನ್ಯೂನವೆಂದಾಗಲಿ ಹೇಳಲಾಗುವುದಿಲ್ಲ. ಒಂದು ರಾಜ್ಯದ ಪ್ರಜೆಗಳೆಲ್ಲಾ ಆ ರಾಜ್ಯವನ್ನು ಬಿಟ್ಟು ಬೇರೆಡೆಗೆ ವಲಸೆ ಹೋದರೆ ಆ ತ್ಯಜಿಸಲ್ಪಟ್ಟ ರಾಜ್ಯದ ರಾಜನಿಗೆ ಏನು ರಾಜತನ ಬಾಕಿಯಾಗುತ್ತದೆ? ಅಥವಾ ಭಯಂಕರವಾದ ಕ್ಷಾಮಬಾಧೆ ಕಾರಣದಿಂದ ಪ್ರಜೆಗಳೆಲ್ಲಾ ರಾಜ್ಯಕರ ತೆರಲು ಅಶಕ್ತರಾದರೆ ಆ ರಾಜ್ಯದ ರಾಜನ ಸ್ಥಿತಿಯೇನಾದೀತು? ಹಾಗೆಯೇ, ಪ್ರಜೆಗಳೆಲ್ಲಾ ರಾಜನಿಗೆದುರಾಗಿ ದಂಗೆಯೆದ್ದು ಆತನ ರಾಜತನಕ್ಕೆ ಸವಾಲೊಡ್ಡಿದರೆ, ಆ ರಾಜ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಬಗೆ ಹೇಗೆ ? ಆದರೆ ಸರ್ವಸಮರ್ಥನಾದ ಸರ್ವಾಧಿನಾಥನಾದ ದೇವರ ರಾಜತನ ಈ ರೀತಿ ಕ್ಷಣಭಂಗುರವಲ್ಲ, ಅವನ ಆಡಳಿತೆ ಲೌಕಿಕ ರಾಜಾಧಿಕಾರದಿಂದ ಸಂಪೂರ್ಣ ಭಿನ್ನವಾದುದು. ಅವನಾದರೋ, ಸಮಸ್ತ ಬ್ರಹ್ಮಾಂಡವನ್ನು ಒಂದೇ ಪೆಟ್ಟಿಗೆ ನಾಶಪಡಿಸಲಿಕ್ಕೂ ಪುನಃ ಹೊಸದಾಗಿ ಸೃಷ್ಟಿ ಸಂಚಯಗಳನ್ನು ಉಂಟುಮಾಡಲಿಕ್ಕೂ ಶಕ್ತನಾದ ಕರ್ತನಾಗಿದ್ದಾನೆ. ಅವನು ಹೀಗೆ ಸರ್ವಶಕ್ತನಾದ ಸೃಷ್ಟಿಕರ್ತನಲ್ಲದಿರುತ್ತಿದ್ದರೆ ನ್ಯಾಯ ಪಾಲಿಸಿ, ತನ್ನ ಆಡಳಿತೆ ನಡೆಸಲು ಅವನಿಗೆ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಹೊಸದಾಗಿ ಸೃಷ್ಟಿಸಲು ಅವನು ಶಕ್ತನಲ್ಲವೆಂದಾದರೆ ಅವನು ಸೃಷ್ಟಿಲೋಕಕ್ಕೆ ಒಮ್ಮೆ ಮುಕ್ತಿಯನ್ನು ನೀಡಿದ ನಂತರ ಆ ಮೊದಲ ಸೃಷ್ಟಿಯನ್ನೇ ಇನ್ನೊಮ್ಮೆ ಈ ಲೋಕಕ್ಕೆ ಕಳುಹಿಸಲಿಕ್ಕಾಗಿ ಅವರೆಡೆಯಿಂದ ಅನ್ಯಾಯವಾದ ರೀತಿಯಲ್ಲಿ ಅವರ ಮುಕ್ತಿಯನ್ನು ವಾಪಾಸು ಪಡೆಯಲು ನಿರ್ಬಂಧಿತನಾಗುವನು. ಈ ಕ್ರಮ ಅವನ ದೇವತ್ವಕ್ಕೆ ಕಳಂಕಕಾರಿಯಾಗಿದೆ; ಮಾತ್ರವಲ್ಲ ಅವನ ರಾಜತನ ಭೌತಿಕ ರಾಜತನದಂತೆ ನ್ಯೂನತೆಯಿಂದ ಕೂಡಿದ್ದೆಂದು ವ್ಯಕ್ತಪಡಿಸುವುದು. ರಾಜ್ಯಭಾರಕ್ಕಾಗಿ ಆಡಳಿತಾಧಿಕಾರಿಗಳು ನಿರ್ಮಿಸುವ ನಿಯಮಗಳು ಯಾವಾ

ಗಲೂ ಕುಂದುಕೊರತೆಗಳಿಂದ ಕೂಡಿರುತ್ತವೆ. ಅವರು ಸ್ವಾರ್ಥ ಉದ್ದೇಶವನ್ನು ಸಾಧಿಸಲು ಅನ್ಯಾಯ ಮಾರ್ಗವನ್ನು ಅವಲಂಬಿಸಬೇಕೆಂದು ತೋರುವಾಗ ಸಂಕೋಚಪಡದೆ ಅವನ್ನೇ ರಾಜ್ಯ ನೀತಿಯೆಂದು ಪರಿಗಣಿಸುತ್ತಾರೆ. ಉದಾಹರಣೆಗೆ, ಒಂದು ಹಡಗನ್ನು ರಕ್ಷಿಸಲಿಕ್ಕಾಗಿ ಒಂದು ದೋಣಿಯನ್ನು ಅದರ ನಾವಿಕರ ಸಹಿತ ನಾಶಪಡಿಸಲು ಈ ರಾಜನಿಯಮಗಳು ಅನುಮತಿ ನೀಡುತ್ತವೆ. ದೇವರಿಗಾದರೆ ಇಂತಹ ಕಠಿಣ ಕ್ರಮದ ಅವಶ್ಯಕತೆ ಇಲ್ಲ. ಒಟ್ಟಾರೆ, ದೇವರು ಸರ್ವಶಕ್ತನೂ ನಾಸ್ತಿಯಿಂದ ಸಕಲವನ್ನು ಸೃಷ್ಟಿಸುವವನೂ ಅಲ್ಲವಾಗಿದ್ದರೆ, ಬಲಹೀನರಾದ ರಾಜರಂತೆ ಅವನು ಸಹ ತನ್ನ ಶಕ್ತಿಯನ್ನು ತೋರ್ಪಡಿವುದರ ಬದಲಿಗೆ ಅನ್ಯಾಯ ಮಾರ್ಗವನ್ನು ಕೈಗೊಳ್ಳಬೇಕಾಗುತ್ತಿತ್ತು; ಅಥವಾ ನೀತಿ–ನ್ಯಾಯ ಪಾಲಿಸಲಿಕ್ಕಾಗಿ ತನ್ನ ದೇವತ್ವವನ್ನೇ ಕೈಬಿಡಬೇಕಾಗುತ್ತಿತ್ತು. ಆದರೆ ದೇವರ ಶಕ್ತಿಯೆಂಬ ಹಡಗು ಪೂರ್ಣಪ್ರಭಾವದಿಂದ ನೀತಿ ಮತ್ತು ನ್ಯಾಯದ ಸಮುದ್ರದಲ್ಲಿ ಸಂಚರಿಸುತ್ತಲಿದೆ.

ದೇವರ ಮತ್ತೊಂದು ಹೆಸರು 'ಅಸ್ಸಲಾಮ್' ಎಂದಾಗಿದೆ. ಅಂದರೆ, ದೇವರು ಊನಗಳಿಂದಲೂ ಅರಿಷ್ಟತೆಗಳಿಂದಲೂ ಕಷ್ಟತೆಗಳಿಂದಲೂ ಅತೀತನೂ ನಿರ್ಬಾಧಿತನೂ ಸುರಕ್ಷಿತನೂ ಆಗಿದ್ದಾನೆ. ಈ ವೈಶಿಷ್ಟ್ಯ ನಾಮದ ಅರ್ಥ ಬಹಳ ಸ್ಪಷ್ಟ. ಸೃಷ್ಟಿಗಳಂತೆಯೇ ದೇವರು ಸಹ ಕಷ್ಟಾರಿಷ್ಟತೆಗಳಿಗೆ ಗುರಿಯಾಗಿ, ಜನರ ಕೈಯಿಂದ ತಾಡನ–ಪೀಡನಗಳನ್ನು ಅನುಭವಿಸಿ, ಉದ್ದೇಶಗಳನ್ನು ಸಾಧಿಸಲಾಗದೆ ಪರಾಭವಗೊಂಡರೆ ಅಂತಹ ದೇವರು ನಮಗೆ ಆಪತ್ಕಾಲದಲ್ಲಿ ಸಹಾಯವನ್ನೂ ರಕ್ಷಣೆಯನ್ನೂ ನೀಡಲು ಸಮರ್ಥನೆಂದು ನಂಬಿ ಭರವಸೆಯನ್ನಿಡುವುದು ಹೇಗೆ? ಮಿಥ್ಯಾದೈವಗಳ ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ:

ಇನ್ನಲ್ಲದೀನ ತದ್‌ಊನ ಮಿನ್ ದೂನಿಲ್ಲಾಹಿ ಲನ್‌ಯ್ಯಖ್‌ಲುಕೂ ದುಬಾಬನ್ ವ್ವಲವಿಜ್ತಮಊ ಲಹೂ–ವ ಇನ್‌ಯ್ಯಸ್ಲುಬ್‌ಹುಮುದ್ದುಬಾಬು ಶೈಅನ್ ಲ್ಲಾಯಸ್ತನ್‌ಕಿದೂಹು ಮಿನ್‌ಹು – ಲಉಫತ್ತಾಲಿಬು ವಲ್ ಮತ್ಲೂಬ್! ಮಾ ಕದರುಲ್ಲಾಹ ಹಕ್ಕ ಕದ್‌ರಿಹೀ–ಇನ್ನಲ್ಲಾಹ ಲಕವಿಯ್ಯುನ್ ಅಝೀಝ್" (22:74,75) –ನಿಜವಾದ ಪರಮಾತ್ಮನನ್ನು ಬಿಟ್ಟು, ನೀವು ಸಹಾಯ ಯಾಚಿಸುವ ಕೃತ್ರಿಮ ದೇವರುಗಳೆಲ್ಲಾ ಒಟ್ಟು ಸೇರಿದರೂ ಅವರಿಗೆ ಒಂದು ನೊಣವನ್ನಾಗಲಿ ಸೃಷ್ಟಿಸಲು ಸಾಧ್ಯವಿಲ್ಲ. ಮಾತ್ರವಲ್ಲ, ನೊಣ ಅವರ ಕೈಯಿಂದ ಏನಾದರೂ ವಸ್ತುವನ್ನು ಕಿತ್ತುಕೊಂಡು ಹೋದರೆ ಅವರಿಗೆ ಅದನ್ನು ನೊಣದಿಂದ ವಾಪಾಸು ಪಡೆಯುವ ಶಕ್ತಿಯಿಲ್ಲ. ಇಂತಹ ದೇವರುಗಳನ್ನು ಆರಾಧಿಸುವವರು ವಿವೇಕಹೀನರೂ ಆ ದೇವರುಗಳು ಶಕ್ತಿಹೀನರೂ ಆಗಿದ್ದಾರೆ. ಸಾಕ್ಷಾತ್ ಪರಮಾತ್ಮ, ಶಕ್ತರಲ್ಲಿ ಅತ್ಯಂತ ಶಕ್ತನೂ ಎಲ್ಲವನ್ನೂ ಜಯಿಸುವವನೂ ಆಗಿದ್ದಾನೆ. ಅವನನ್ನು ಹಿಡಿಯಲಿಕ್ಕೋ ಹೊಡೆಯಲಿಕ್ಕೋ ಸಾಧ್ಯವಿಲ್ಲ. ದೇವರ ಕುರಿತು ಅಸಂಬದ್ಧ ಕಲ್ಪನೆಗಳಿಗೆ ಅಧೀನರಾದವರು ದೇವರ ಮಹತ್ವವನ್ನಾಗಲಿ ಅವನ ಸ್ಥಾನವನ್ನಾಗಲಿ ಸರಿಯಾಗಿ ತಿಳಿದಿರುವುದಿಲ್ಲ.

ಇದರ ಮೊದಲು ಉದ್ಧರಿಸಲಾದ ಖುರ್‌ಆನ್ ವಾಕ್ಯದಲ್ಲಿ ಹೇಳಲಾದ ದೇವರ ವಿಶೇಷತೆಗಳಲ್ಲಿ ಇನ್ನೊಂದು 'ಅಲ್ ಮುಅ್‌ಮಿನ್' ಎಂದಾಗಿದೆ. ಅಂದರೆ ಸಮಾಧಾನ ಮತ್ತು ಶಾಂತಿಯನ್ನು ಪ್ರದಾನ ಮಾಡುವವನೂ ತನ್ನ ಏಕತೆಗೂ ಶ್ರೇಷ್ಠತೆಗೂ ಸಾಕ್ಷ್ಯಗಳನ್ನು ನೀಡಿ ಶಾಂತಿಯನ್ನು ದಯಪಾಲಿಸುವವನೂ ಆಗಿರುವ ದೇವ. ಈ ಪಾವನನಾಮ ಸೂಚಿಸುವುದೇನೆಂದರೆ, ಸತ್ಯದೇವನನ್ನು ನಂಬುವವನು ತನ್ನ ಬಳಿ ಶಕ್ತಿಯುತ ಪುರಾವೆಗಳಿರುವುದರಿಂದ ಯಾರ ಮುಂದೆಯೂ ನಾಚಿಕೆಪಡಲಾರನು. ಅವನು ದೇವರ ಮುಂದೆಯೂ ಲಜ್ಜಿತನಾಗಲಾರ. ಆದರೆ ಮಿಥ್ಯಾ ದೇವರುಗಳನ್ನು ನಂಬುವವನು ಸದಾ ಕ್ಲೇಶಕ್ಕೊಳಗಾಗುತ್ತಾನೆ. ಅವನು ತನ್ನ ನಂಬಿಕೆಯ ಆಧಾರವಾಗಿ ಸಾಕ್ಷ್ಯಗಳನ್ನು ತೋರಿಸುವುದರ ಬದಲು ಅದನ್ನು ವಿವೇಕಹೀನ ಗೂಢತತ್ವಗಳಲ್ಲಿ ಸಿಲುಕಿಸಿ ತೃಪ್ತಿಪಡುತ್ತಾನೆ. ಅವನು ತನ್ನ ಪ್ರತಿಯೊಂದು ಅಸಂಬದ್ಧ ಹೇಳಿಕೆ ಪರಿಶೋಧನೆಕ್ಕೊಳಪಡದಂತೆ ಮುಚ್ಚಿಡಲು ಪ್ರಯತ್ನಿಸುತ್ತಾನೆ.

ಪ್ರಸ್ತುತ ಖುರ್‌ಆನ್ ವಾಕ್ಯ ಮುಂದುವರಿದು ಹೇಳುವ ದೇವರ ವಿಶೇಷತೆಗಳಿವು: "ಅಲ್ ಮುಹೈಮಿನುಲು ಅಝೀಝುಲ್ ಜಬ್ಬಾರುಲ್ ಮುತಕಬ್ಬಿರ್" –ಅವನು ಸಕಲ ಸಾಧನಗಳ ರಕ್ಷಕನೂ ಪರಿಪಾಲಕನೂ ಸರ್ವವನ್ನೂ ಜಯಿಸುವ ಪ್ರತಾಪಶಾಲಿಯೂ ಕುಂದುಕೊರತೆಗಳನ್ನು ನೀಗಿಸುವವನೂ ಯಾರಿಂದಲೂ ಯಾವುದೇ ನೆರವನ್ನು ಬಯಸದವನೂ ಎಲ್ಲರಿಗೂ ಆಸರೆಯಾಗಿರುವ ಪ್ರಭಾವಶಾಲಿಯೂ ಆಗಿದ್ದಾನೆ.

ಪವಿತ್ರ ಖುರ್‌ಆನ್ ಮುಂದುವರಿದು ಹೇಳುತ್ತದೆ: "ಹುವಲ್ಲಾಹುಲ್ ಖಾಲಿಕುಲ್ ಬಾರಿಉಲ್ ಮುಸವ್ವಿರು ಲಹುಲ್ ಅಸ್ಮಾಉಲ್ ಹುಸ್ನಾ – ಯುಸಬ್ಬಿಹು ಲಹೂ ಮಾ ಫಿಸ್ಸಮಾವಾತಿ ವಲ್ ಅರ್‌ಲಿ– ವಹುವಲ್ ಅರಿಖೀಝುಲ್ ಹಕೀಂ." (59 : 25)— ಅವನು ಶರೀರಗಳನ್ನು ಮತ್ತು ಆತ್ಮಗಳನ್ನು ಸೃಷ್ಟಿಸುವವನೂ ಗರ್ಭದಲ್ಲಿರುವ ಭ್ರೂಣಕ್ಕೆ ರೂಪಕೊಡುವವನೂ ಆಗಿದ್ದಾನೆ. ಸಕಲ ಉತ್ಕೃಷ್ಟ ನಾಮಗಳು ಅವನಿಗಿವೆ. ಆಕಾಶ ಮಂಡಲಗಳಲ್ಲಿ ಮತ್ತು ಭೂಮಿಯಲ್ಲಿರುವವರು ಅವನ ಮಹತ್ವವನ್ನು ಹೊಗಳುತ್ತಾರೆ; ಅವನ ಪರಿಶುದ್ಧತೆಯನ್ನು ಶ್ಲಾಘಿಸುತ್ತಾರೆ. ಅವನು ಸರ್ವವಲ್ಲಭನೂ ಸರ್ವಜ್ಞನೂ ಆಗಿದ್ದಾನೆ.

ಈ ವಾಕ್ಯ, ಆಕಾಶ ಗೋಳಗಳಲ್ಲಿ ಸಹ ನಿವಾಸಿಗಳಿರುವರೆಂದೂ ಅವರು ದೇವರ ಮಾರ್ಗದರ್ಶನ ಪ್ರಕಾರ ವರ್ತಿಸುವವರಾಗಿದ್ದಾರೆಂದೂ ಸೂಚಿಸುತ್ತದೆ.

ಇನ್ನೊಂದೆಡೆಯಲ್ಲಿ ಖುರ್‌ಆನ್ ಹೇಳುತ್ತದೆ: "ಇನ್ನಲ್ಲಾಹ ಅಲಾ ಕುಲ್ಲಿ ಶೈಇನ್ ಕದೀರ್" (2:149) –ಅಲ್ಲಾಹು ಎಲ್ಲಾ ಕಾರ್ಯದಲ್ಲೂ ಸಾಮರ್ಥ್ಯವುಳ್ಳ ಸರ್ವಶಕ್ತನಾಗಿದ್ದಾನೆ.

ಈ ವಾಕ್ಯ, ಸತ್ಯದೇವನನ್ನು ಆರಾಧಿಸುವವರಿಗೆ ಒಂದು ಆಶ್ವಾಸನ ವಚನವಾಗಿದೆ. ದೇವರು ಅಶಕ್ತನೂ ಬಲಹೀನನೂ ಎಂದಾದರೆ ಅಂತಹ ದೇವರಿಂದ ಮನುಷ್ಯನು ಏನನ್ನು ಆಶಿಸಲಿಕ್ಕಿದೆ ?

ಖುರ್‌ಆನ್ ಇನ್ನೂ ದೇವರ ಗುಣಗಳನ್ನು ವಿವರಿಸುತ್ತದೆ :

"ರಬ್ಬಿಲ್ ಆಲಮೀನ್ – ಅರ್ರಹ್ಮಾನಿರ್ರಹೀಂ– ಮಾಲಿಕಿ ಯೌಮಿದ್ದೀನ್" (1:2-4) – ಪರಮಾತ್ಮನು ಸರ್ವಲೋಕ ಪರಿಪಾಲಕನೂ ಕೃಪಾನಿಧಿಯೂ ಪರಮ ದಯಾಳುವೂ ವಿಧಿದಿನದ ಸರ್ವಾಧಿಪತಿಯೂ ಆಗಿದ್ದಾನೆ.

"ಉಜೀಬು ದಅ್‌ವತದ್ದಾಇ ಇದಾ ದಆನಿ" (2:187)— ಅವನು ಪ್ರಾರ್ಥಿಸುವವನ ಪ್ರಾರ್ಥನೆ ಕೇಳುವವನೂ ಉತ್ತರ ನೀಡುವವನೂ ಆಗಿದ್ದಾನೆ.

"ಅಲ್ ಹಯ್ಯುಲ್ ಕಯ್ಯೂಮ್" (2:256) —ಅವನು ನಿತ್ಯಜೀವಿಯೂ ಸರ್ವಜೀವಿಗಳ ಜೀವನೂ ಸಕಲ ಜೀವಿಗಳಿಗೆ ಆಸರೆಯೂ ಆಗಿದ್ದಾನೆ.

ಈ ವಚನದಲ್ಲಿ ದೇವರು ನಿತ್ಯಜೀವಿಯೆಂದು ಹೇಳಿದ್ದು ಏಕೆಂದರೆ ಅವನು ಸದಾ ಜೀವಿಸಿರುವ ಶಾಶ್ವತನು ಅಲ್ಲವೆಂದಾದ ಪಕ್ಷದಲ್ಲಿ, ಅವನು ಒಂದು ವೇಳೆ ನಮಗಿಂತ ಮೊದಲು ತೀರಿ ಹೋಗುವನೋ ಎಂಬ ಶಂಕೆಯನ್ನು ನಿವಾರಿಸಲಿಕ್ಕಾಗಿದೆ.

"ಕುಲ್ ಹುವಲ್ಲಾಹು ಅಹದ್ – ಅಲ್ಲಾಹು ಸಮದ್–ಲಮ್ ಯಲಿದ್ ವ ಲಮ್ ಯೂಲದ್– ವ ಲಮ್ ಯಕು(ನ್)ಲ್ಲಹು ಕುಫುವನ್ ಅಹದ್" (112 : 2-5) – ದೇವನು ಏಕನೂ ಎಲ್ಲಕ್ಕೂ ಆಸರೆಯಾಗಿರುವ ಅಧಿನಾಥನೂ ಆಗಿದ್ದಾನೆ. ಅವನಿಗೆ ಪುತ್ರನಿಲ್ಲ; ಅವನು ಯಾರ ಪುತ್ರನೂ ಅಲ್ಲ. ಅವನಿಗೆ ಭಾಗೀದಾರನಾಗಿ ಯಾರೂ ಇಲ್ಲ.

ಪರಮಾತ್ಮನ ಏಕತೆಯ ಕುರಿತು ಸಮುಚಿತವಾಗಿ ನಂಬಿಕೊಂಡು ಆ ನಂಬಿಕೆಯಲ್ಲಿ ಲವಲೇಶವಾದರೂ ಹೆಚ್ಚು ಕಮ್ಮಿ ಮಾಡಬಾರದೆಂಬ ವಿಚಾರ ಜ್ಞಾಪಕದಲ್ಲಿರಿಸಬೇಕಾಗಿದೆ. ಸೃಷ್ಟಿಕರ್ತನಾದ ದೇವನ ಸಂಬಂಧಿಸಿ ಕೈಗೊಳ್ಳಬೇಕಾದ ನೀತಿಧರ್ಮ ಇದೇ ಆಗಿದೆ. ಇದುವರೆಗೆ ಪ್ರತಿಪಾದಿಸಲಾದ ನೈತಿಕ ತತ್ವಗಳು ಪವಿತ್ರ ಖುರ್‌ಆನಿನ ನೀತಿಶಾಸ್ತ್ರದ ಒಂದು ಭಾಗವಾಗಿದೆ. ಖುರ್‌ಆನಿನ ಈ ಅಧ್ಯಾಪನದ ಒಂದು ವೈಶಿಷ್ಟ್ಯವೇನೆಂದರೆ, ಸಕಲ ನೈತಿಕ ಗುಣಗಳು ಅಮಿತತೆ ಹಾಗೂ ನ್ಯೂನತೆಗಳಿಂದ ಹೊರತಾಗಿವೆ. ಯಾವುದೇ ಸದ್ಗುಣ ಸರಿಯಾದ ನೈತಿಕ ಸೀಮೆಯೊಳಗೆ ಪ್ರಕಟವಾಗುವುದಾದರೆ ಮಾತ್ರವೇ ಪವಿತ್ರ ಖುರ್‌ಆನಿನ ಅಧ್ಯಾಪನೆಗನುಸಾರವಾದ ಯಥಾರ್ಥ ಸದ್ಗುಣವಾಗುತ್ತದೆ. ನೈಜ ಸದ್ಗುಣ ಎರಡು ಮೇರೆಗಳ ಮಧ್ಯದಲ್ಲಿರುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಮಿತತೆ ಮತ್ತು ನ್ಯೂನತೆ ಎಂಬ ಎರಡು ತುದಿಗಳ ಮಧ್ಯದ ಸ್ಥಾನ ಸದ್ಗುಣದ್ದಾಗಿದೆ. ಮಧ್ಯಮ ಮಾರ್ಗಕ್ಕೆ ಪ್ರೇರೇಪಿಸುವ ಮತ್ತು ಮಧ್ಯಮ ಸ್ಥಾನದಲ್ಲಿ ಸ್ಥಿರಗೊಳ್ಳುವ ಎಲ್ಲಾ ಸ್ವಭಾವ ಶ್ರೇಷ್ಠವಾದ ನೈತಿಕಗುಣಗಳನ್ನು ಸೃಷ್ಟಿಸಲು ಸಾಧಕವಾಗಿವೆ. ಸಂದರ್ಭವನ್ನರಿತು ಯಥೋಚಿತವಾಗಿ ವರ್ತಿಸುವುದು ಮಧ್ಯಮ ಪಥವಾಗಿದೆ. ಒಬ್ಬ ರೈತ ಕಾಲಕ್ಕೆ ಬಹಳ ಮುಂಚಿತವಾಗಿ ಅಥವಾ ಬಹಳ ತಡವಾಗಿ ಬಿತ್ತುವನಾದರೆ ಅವನು ಮಧ್ಯಮ ವಿಧಾನವನ್ನು ಕೈಬಿಟ್ಟಂತಾಗುತ್ತದೆ. ಸದ್ಗುಣ, ಸತ್ಯ, ವಿವೇಕ ಎಲ್ಲಾ ಮಧ್ಯಮ ಪಥ

ದಲ್ಲಿವೆ. ಮಧ್ಯಮ ಮಾರ್ಗವಾದರೋ ಔಚಿತ್ಯದಿಂದ ಕೂಡಿಕೊಂಡಿದೆ. ಎರಡು ತುದಿಗಳಲ್ಲಿರುವ ಅಸತ್ಯ ಮಾರ್ಗಗಳ ಮಧ್ಯದಲ್ಲಿ ಸತ್ಯ ಮಾರ್ಗವಿದೆ. ಯಥೋಚಿತ ನೀತಿ ಮನುಷ್ಯನನ್ನು ಮಧ್ಯಮ ಪಥದಲ್ಲಿ ಸಂಚರಿಸುವಂತೆ ಮಾಡುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಪರಮಾತ್ಮನನ್ನು ಅರಿತು ನಂಬುವ ವಿಚಾರದಲ್ಲೂ ಮಧ್ಯಮಾರ್ಗವನ್ನು ಅವಲಂಬಿಸಬೇಕಾಗಿದೆ. ದೈವ ವಿಶ್ವಾಸದ ಸಂಬಂಧಿಸಿ ಮಧ್ಯಮಾರ್ಗವೇನೆಂದರೆ, ಅವನ ಪರಮಾರ್ಥಗುಣಗಳನ್ನು ಅಲ್ಲಗಳೆದು ಅವನನ್ನು ನಿರ್ಗುಣನೆಂದು ಸಂಕಲ್ಪಿಸದಿರುವುದು ಹಾಗೂ ಅವನಿಗೆ ಭೌತಿಕ ವಸ್ತುಗಳೊಡನೆ ಸಾದೃಶ್ಯ ಕಲ್ಪಿಸದಿರುವುದು. ಪವಿತ್ರ ಖುರ್ ಆನ್ ಪರಮಾತ್ಮನ ವೈಶಿಷ್ಟ್ಯಗಳನ್ನು ವಿವರಿಸುವಾಗ ಈ ಮಧ್ಯಮಾರ್ಗವನ್ನು ಕೈಗೊಂಡಿದೆ. ದೇವನು ಕಾಣುತ್ತಾನೆ, ಕೇಳುತ್ತಾನೆ, ತಿಳಿಯುತ್ತಾನೆ, ಮಾತಾಡುತ್ತಾನೆ ಮುಂತಾಗಿ ಕಲಿಸುವುದರೊಂದಿಗೆ ಅವನನ್ನು ಯಾವುದೇ ಸೃಷ್ಟಿಯೊಂದಿಗೆ ಸಾದೃಶ್ಯಪಡಿಸದಿರಲಿಕ್ಕೂ ಆ ಪವಿತ್ರ ಗ್ರಂಥ ನಮ್ಮನ್ನು ಎಚ್ಚರಿಸಿದೆ. ಅದು ಹೀಗೆ ಹೇಳುತ್ತದೆ:

"ಲೈಸ ಕಮಿಸ್ಲಿಹೀ ಶೈಉನ್"(42:12)—ದೇವರೊಡನೆ ತತ್ವದಲ್ಲೂ ಗುಣದಲ್ಲೂ ತುಲ್ಯವಾಗಿರುವ ಯಾವ ವಸ್ತುವೂ ಇಲ್ಲ.

"ಫಲಾ ತಲ್‌ರಿಬೂ ಲಿಲ್ಲಾಹಿಲ್ ಅಮ್ಸಾಲ" (16:75)—ದೇವರನ್ನು ಸೃಷ್ಟಿಗಳಲ್ಲಿ ಯಾವುದರೊಂದಿಗೆಯೂ ಹೋಲಿಸಬೇಡಿರಿ.

ಒಟ್ಟಿನಲ್ಲಿ, ದೇವನ ಸಂಬಂಧಿಸಿ ಅವನನ್ನು ನಿರ್ಗುಣನೆಂದು ಕಲ್ಪಿಸುವುದು ಹಾಗೂ ಅವನ ಗುಣ ಮಹಾತ್ಮೆಗಳನ್ನು ಇತರ ಸೃಷ್ಟಿಗಳೊಂದಿಗೆ ಹೋಲಿಸುವುದು ಎಂಬೀ ಎರಡು ಮೇರೆಗಳ ಮಧ್ಯಮಾರ್ಗವೇ ದೈವನಿರೂಪಣೆಯಾಗಿದೆ. ಇಸ್ಲಾಂ ಅದರ ಸಕಲ ಅಧ್ಯಾಪನೆಗಳಲ್ಲೂ ಈ ಮಧ್ಯನೆಲೆಯನ್ನು ಕೈಗೊಂಡಿದೆ. ಪವಿತ್ರ ಖುರ್‌ಆನ್ ಅದರ ಪ್ರಥಮ ಅಧ್ಯಾಯವಾದ ಸೂರಃಫಾತಿಹಾದಲ್ಲಿ ನಿರ್ದೇಶಿಸಿದ ಪ್ರಾರ್ಥನಾ ವಾಕ್ಯದಲ್ಲೇ ಮಧ್ಯಮಾರ್ಗ ಕೈಗೊಳ್ಳುವರೆ ಬೋಧಿಸಿದೆ:

"ಇಹ್‌ದಿನಸ್ಸಿರಾತಲ್ ಮುಸ್ತಕೀಮ – ಸಿರಾತಲ್ಲದೀನ್ ಅನ್‌ಅಮ್ತ ಅಲೈಹಿಂ, ಗೈರಿಲ್ ಮಗ್‌ಲೂಬಿ ಅಲೈಹಿಂ ವಲಲ್ಲಾಲೀನ್" (1:6, 7) — ನೀನು ನಮ್ಮನ್ನು ಸನ್ಮಾರ್ಗದಲ್ಲಿ ನಡೆಸು; ನೀನು ಅನುಗ್ರಹಿಸಿದವರ ಮಾರ್ಗದಲ್ಲಿ–ನಿನ್ನ ಕ್ರೋಧಕ್ಕೆ ಗುರಿಯಾದವರ ಮತ್ತು ಪಥಭ್ರಷ್ಟರಾದವರ ಮಾರ್ಗದಲ್ಲಲ್ಲ.

ಈ ವಾಕ್ಯದಲ್ಲಿ ಮೂರು ವಿಧ ಜನರ ಕುರಿತು ಹೇಳಲಾಗಿದೆ. ಎರಡನೆಯದಾಗಿ ಹೇಳಿದ 'ಕ್ರೋಧಕ್ಕೆ ಗುರಿಯಾದವರು' (ಮಗ್‌ಲೂಬಿ ಅಲೈಹಿಂ) ಎಂಬುದರ ವಿವಕ್ಷೆ, ದೇವರಿಗೆದುರಾಗಿ ಕ್ರೋಧವನ್ನು ತೋರಿಸಿ ಪಾಶವೀಯವಾಗಿ ವರ್ತಿಸಿದುದರ ಫಲವಾಗಿ ದೈವಕ್ರೋಧಕ್ಕೆ ಗುರಿಯಾದವರು. ಮೂರನೆಯದಾಗಿ ಹೇಳಿದ 'ಪಥಭ್ರಷ್ಟರಾದವರು'(ಲಾಲ್ಲೀನ್) ಎಂಬುದರ ವಿವಕ್ಷೆ ಮೃಗೀಯ ಪ್ರೇರಣೆಗಳಿಗೆ ಅಧೀನರಾಗಿ ಇಂದ್ರಿಯೇಚ್ಛೆಗಳಿಗೆ ಬಲಿಯಾದವರು. ಈ ಎರಡು ಮಾರ್ಗಗಳನ್ನು ಬಿಟ್ಟು ಸತ್ಪಥದಲ್ಲಿ ಚಲಿಸುವವರನ್ನು 'ಅನ್‌ಅಮ್ತ ಅಲೈಹಿಂ' ಅಥವಾ 'ಅನುಗ್ರಹೀತರು' ಎಂಬ ಪದದಿಂದ ಪವಿತ್ರ ಖುರ್‌ಆನ್ ಕರೆಯುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಷ್ಯರನ್ನು ಮಧ್ಯಮ ಮಾರ್ಗದೆಡೆಗೆ ಕೊಂಡೊಯ್ಯುವುದು ಪವಿತ್ರ ಖುರ್‌ಆನಿನ ಉದ್ದೇಶವಾಗಿದೆ. ಮೂಸಾ ಪ್ರವಾದಿಯ ಧರ್ಮಗ್ರಂಥವಾದ "ತೌರಾತ್" ಪ್ರತಿಕಾರವನ್ನೂ ಈಸಾಪ್ರವಾದಿಯ "ಇಂಜೀಲ್" ಸಹನೆಯನ್ನೂ ನಿಷ್ಕರ್ಷಿಸುವಾಗ, ಪವಿತ್ರ ಖುರ್‌ಆನ್ ಈ ಗುಣಗಳನ್ನು ಯಥೋಚಿತವಾಗಿ ಪ್ರಯೋಗಿಸಿ ಮಧ್ಯನೆಲೆಯನ್ನು ಸ್ವೀಕರಿಸಬೇಕೆಂದು ಬೋಧಿಸುತ್ತದೆ. ಅದು ಹೀಗೆ ಹೇಳುತ್ತದೆ:

"ವ ಕದಾಲಿಕ ಜಅಲ್ನಾಕುಂ ಉಮ್ಮತನ್ ವ್ವಸತನ್" (2:144) – ನಾವು ನಿಮ್ಮನ್ನು ಮಧ್ಯಮ ಮಾರ್ಗದಲ್ಲಿ ಚಲಿಸುವ ಸಮುದಾಯವನ್ನಾಗಿ ಮಾಡಿರುವೆವು. ಅಂದರೆ, ಎಲ್ಲಾ ಕಾರ್ಯಗಳಲ್ಲೂ ಮಧ್ಯನೆಲೆಯನ್ನು ಕೈಗೊಳ್ಳುವರೆ ನಿಮಗೆ ಬೋಧಿಸಲಾಗಿದೆ.

ಈ ಮಧ್ಯಮಾರ್ಗವನ್ನು ಅವಲಂಬಿಸುವವರು ಅನುಗ್ರಹೀತರು. "ಮಧ್ಯಮಾರ್ಗವೇ ಶ್ರೇಷ್ಠವಾದುದು."

( ಮುಂದುವರಿಯುವುದು )

**Read Ahmadiyya Periodicals in different languages to study different religions.**

## BADR
URDU WEEKLY

Single Copy: 0–30 Paise
Annual Subscription: Rs. 15/-

Apply To : The Manager,
"Badr" Urdu Weekly, P. O. QADIAN-143516. (Punjab)

## MINARET
ENGLISH QUARTERLY JOURNAL

Single Copy: Rs. 1-25
Annual Subscription: Rs. 5/-

Apply to : Mr. M. P. Koyatty
Minaret Accounting Section
14/346, Francis Road,
CALICUT-670003 (Kerala)

## SATHYADOOTHAN
MALAYALAM MONTHLY

Single Copy : 0-50 Paise
Annual Subscription: Rs. 6/-

Apply to: The Manager,
Sathyadoothan Monthly
CANNANORE-670001.

## SAMADHANA VAZHI
TAMIL MONTHLY

Single Copy : 0–35 Paise
Annual Subscription Rs. 4/-

Apply to : The Manager
Samadhana Vazhi Monthly
3, United India Colony
Kodambakkam, MADRAS-600024

## Ahmadiyya English Literature

1. THE TEACHINGS OF ISLAM 6—00
   By Hazrat Mirza Ghulam Ahmad
2. JESUS IN INDIA 2—25
   By Hazrat Mirza Ghulam Ahmad
3. CHARACIERISTICS OF THE QURANIC TEACHINGS 1—00
   By Hazrat Mirza Bashiruddin Mahmud Ahmad
4. THE HOLY PROPHET MUHAMMAD 1—50
   By Hazrat Mirza Bashiruddin Mahmud Ahmad
5. WHERE DID JESUS DIE? 2—25
   By J. D. Shams, Ex-Imam, London Mosque
6. THE TOMB OF OF JESUS 0—75
   By Sufi M. R. Bengali
7. THE CHRISTIAN DOCTRINE OF ATONEMENT 1—50
   By Dr. Mufti Muhammad Sadiq, D.D., LL.D., S.S.P. (London)

Write to:

**NAZIR DAWAT - O - TABLIGH, QADIAN-143516 (Punjab)**

## Ahmadiyya Urdu Literature

1. Ahmadiyyat Ka Paigham
2. Imam Mahdi Ka Zuhoor
3. Sadakat Hazrat Masih Mauwood
4. Silsila Nubuwwat Allah Ka Abdi Ahd Hai
5. Khatamunnabiyeen
6. Zuroorath-e-Mazhab
7. Al-Hujjathul Baligha
8. Kya Hazrat Masih Nasiree Zinda Hein?
9. Hamari Ta'leem
10. Wafat Hazrat Masih Par Ulamaye Misr Ka Fatawe

**Will be sent free**

Apply with 25 paise stamp for each book to:

**The Editor, Yugarashmi Kannada Quarterly,**

23/1008, Ansari Road,

Bunder, MANGALORE-575 001.


Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly. December 1979/Fatah 1358**

# ENGLISH TRANSLATION OF THE HOLY QURAN

**WITH**

## ARABIC TEXT and EXTENSIVE INDEX

**Price:**
**Rs. 15-00**




**Postal Charges Extra**

Write to :

**NAZIR DAWAT - O TABLIGH**

**QADIAN (Punjab)–143516**

Edited and Published by Muhammad Yusuf on behalf of Jamath Ahmadiyya Mangalore at 23/1008 Ansari Road, Bunder, Mangalore-575001.
Printed at Karavali Printers, Azizuddin Road, Mangalore-575001.